
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 8 ಫೆಬ್ರವರಿ 22, 2004 ಬೆಲೆ ರೂ. 3.00




ಅಭಿವೃದ್ಧಿ ಮಂಡಳಿ ರದ್ಧತಿಯಿಂದ ಅಸಮಾನತೆ ತೊಲಗೀತೆ?

ಸುಳ್ಳುಗಳ ಸರದಾರರು



ಪ್ರಕಾಶಿಸುತ್ತಿರುವ ವಾಜಪೇಯಿ ಭಾರತ



ಸಂಕಷ್ಟದಲ್ಲಿ ನೈಜ ಭಾರತ

- ಭಾರತ ಬೆಳಗಿಸುವ ಪ್ರಧಾನಿ ಕ್ಷೇತ್ರದಲ್ಲೇ ಜಲಗಾರರ ನಿಕೃಷ್ಟ ಬಾಳು
- ನಾಪತ್ತಾದ ಹತ್ತು ವರ್ಷಗಳ ಅವಾಂತರ
- ಭ್ರಷ್ಟರ ಬಿಡಾರ ಹೊಕ್ಕ ಹುಸಿಬಾಂಬ್ ಮಟ್ಟಣ್ಣ



ಅಮೇರಿಕದ ಪ್ರಸಿದ್ಧ ಪತ್ರಕರ್ತೆ ಮಾರ್ಗರೇಟ್ ಬರ್ಕ್‌ವೈಟ್ ರವರ 'ಬರ್ಕ್‌ವೈಟ್ ಕಂಡ ಭಾರತ'ದ ಕೃತಿಯಿಂದ ಆಯ್ದ ಮಹತ್ವದ ಬರಹವನ್ನು ಈಗಾಗಲೇ ಓದುತ್ತಾ ಬಂದಿದ್ದೀರಿ. ಈ ಬಾರಿ ಚರ್ಮ ಹದ ಮಾಡುವ ಗಣಿಗಳಲ್ಲಿನ ಬಾಲ ಕಾರ್ಮಿಕರ ಬವಣೆಗಳ ಬಗ್ಗೆ ಗಮನ ಸೆಳೆದಿದ್ದಾರೆ.

ಅನುವಾದಕ್ಕೆ ಒತ್ತಾಸೆ ಪಿ.ಲಂಕೇಶ್
ಕನ್ನಡಕ್ಕೆ ಅನುವಾದ ಖ್ಯಾತ ಜಾನಪದ ತಜ್ಞೆ, ಲೇಖಕಿ ಡಾ. ಕೆ.ಆರ್.ಸಂಧ್ಯಾರೆಡ್ಡಿಯವರು

ಸುಣ್ಣದ ಗುಂಡಿಯಲ್ಲಿ ಮಕ್ಕಳು

ಚರ್ಮ ಹದ ಮಾಡುತ್ತಿದ್ದ ಆ ಕತ್ತಲಿನ ಸ್ಥಳಕ್ಕೆ ನನ್ನ ಕಣ್ಣು ಸರಿಯಾಗಿ ಹೊಂದಿಕೊಳ್ಳುವವರೆಗೆ ಅಲ್ಲಿದ್ದ ಮಕ್ಕಳೆಲ್ಲ ಏನೋ ಕುಣಿತ ಮಾಡುತ್ತಿದ್ದಾರೆ ಎಂದೇ ತಿಳಿದಿದ್ದೆ. ಆದರೆ ಆ ಮಕ್ಕಳು ಆಸಿಡ್ ತುಂಬಿದ ಗಣಿಗಳಲ್ಲಿ ಕಾಲಿನ ಕೆಳಗೆ ಪ್ರಾಣಿಯ ಚರ್ಮಗಳನ್ನು ಹಾಕಿಕೊಂಡು ಅವು ಸುಣ್ಣದ ನೀರಿನಲ್ಲಿ ಮುಳುಗುವಂತೆ ಮೇಲಿಂದ ಹಾರಿಹಾರಿ ತುಳಿಯುತ್ತಿದ್ದರು. ಒಂದು ಕಾಲನ್ನೆತ್ತಿ ಇನ್ನೊಂದು ಕಾಲನ್ನು ಕೆಳಗೆ ಹಾಕುವಾಗ ಏರಿಳಿಯುತ್ತಿದ್ದ ಅವರ ಕಂದುಬಣ್ಣದ ದೇಹಗಳ ಮೇಲೆ ಬೆವರಿನ ಹನಿಗಳು ಮಿನುಗುತ್ತಿದ್ದವು.

ಇವರೆಲ್ಲ ಅಸ್ಪೃಶ್ಯರು. ಹಸುವಿನ ಚರ್ಮ ಹದ ಮಾಡುವ ಕೆಲಸವನ್ನು ಇವರು ಬಿಟ್ಟುಬೇರೆ ಯಾರೂ ಮಾಡುವುದಿಲ್ಲ ಎಂದು ಅಯ್ಯಂಗಾರ್ ಹೇಳಿದರು. ಆತ ತಿರುಚಾನಪಳ್ಳಿಯಲ್ಲಿ ಇನ್‌ಶೂರೆನ್ಸ್ ಸೇಲ್ಸ್‌ಮ್ಯಾನ್, ಬಾಲ ಕಾರ್ಮಿಕರನ್ನು ಕುರಿತ ವಿಷಯಗಳ ಬಗ್ಗೆ ಆತನಿಗೆ ಅಪಾರ ಆಸಕ್ತಿ ಇತ್ತು. ತನ್ನ ಬಿಡುವಿನ ವೇಳೆಯನ್ನು ಆತ ತಿರುಚಿ ಟ್ಯಾನರಿ ವರ್ಕರ್ಸ್ ಯೂನಿಯನ್ನಿಗಾಗಿ ಮೀಸಲಿಟ್ಟಿದ್ದರು.

ಆ ದಿನ ಬೆಳಿಗ್ಗೆಯಷ್ಟೇ ನಾನು ತಿರುಚಿನಾಪಲ್ಲಿಯ ಸುಪ್ರಸಿದ್ಧವಾದ ದೇವಸ್ಥಾನಕ್ಕೆ ಹೋಗಿದ್ದೆ. ಅದರ ಶಿಖರಕ್ಕೇರುವ ಮೆಟ್ಟಿಲುಗಳ ಮೇಲೆ ಬ್ರಾಹ್ಮಣರ ದೊಡ್ಡ ಸಮುದಾಯವೇ ಇತ್ತು. ಅವರ ಹಣೆಯ ಮೇಲೆ ವಿವಿಧ ಪವಿತ್ರ ಚಿಹ್ನೆಗಳು, ತುಟಿಗಳಲ್ಲಿ ಮಂತ್ರ, ನಾನು ಜಾತಿಯಿಲ್ಲದ ವಿದೇಶಿಯಳಾದ್ದರಿಂದ ನನಗೆ ಈ ದೇವಾಲಯದ ಒಳಗೆ ಬರಲು ಅವಕಾಶ ಕೊಟ್ಟರು. ತಿರುಚಿನಾಪಲ್ಲಿಯ ಯಾವುದೇ ಅಸ್ಪೃಶ್ಯನಿಗೂ ಎಂದೂ ಸಿಗದಂಥ ಅವಕಾಶ ನನಗೆ ಸಿಕ್ಕಿತ್ತು. ದೇವರ ವಿಗ್ರಹಗಳ ಅತ್ಯಂತ ಸಮೀಪದವರೆಗೆ ನನ್ನನ್ನು ಬಿಟ್ಟಿದ್ದರು. ಈ ದೇವಸ್ಥಾನದ ಕೆಳಗಿನ ಮೆಟ್ಟಿಲವರೆಗೆ ಬರುವ ಅವಕಾಶ ಕೂಡಾ ಅಸ್ಪೃಶ್ಯರಿಗಿರಲಿಲ್ಲ. ಅಷ್ಟೇಕೆ ದೇವಸ್ಥಾನಕ್ಕೆ ಬರುವ ಬ್ರಾಹ್ಮಣರ ಮನೆಗಳಿರುವ ದಾರಿಯಲ್ಲಿ ಕಾಲಿಡುವುದಕ್ಕೂ ಅವರಿಗೆ ಅವಕಾಶವಿರಲಿಲ್ಲ.

ಇದೇ ರೀತಿ ಅಸ್ಪೃಶ್ಯರಿಗೇ ಮೀಸಲಾದಂಥ ಸ್ಥಳಗಳಿದ್ದವು. ಅಲ್ಲಿಗೆ ಬ್ರಾಹ್ಮಣರು ಹೋಗುವುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಹೀಗಿದ್ದಾಗ, ಹಸುವಿನ ಚರ್ಮ ಹದ ಮಾಡುವಂಥ ಸ್ಥಳಗಳಿಗೆ ಅವರು ಬರುವುದು ದೂರದ ಮಾತೇ ಸರಿ. ಆದರೆ ಅಯ್ಯಂಗಾರ್, ಕಮ್ಯುನಿಸ್ಟ್. ಆತ ಜಾತಿಯ ವ್ಯತ್ಯಾಸಗಳನ್ನು ವಿರೋಧಿಸುತ್ತಿದ್ದರು. ಇಂಥ ಬ್ರಾಹ್ಮಣರು ಮಾತ್ರ ಇಲ್ಲಿಗೆ ಬರುವುದು ಸಾಧ್ಯವಿತ್ತು. ಆತ ಹೇಳಿದ "ಬೇಗ ಫೋಟೋ ತೆಗೆಯಿರಿ. ನಿಮ್ಮ ಹತ್ತಿರ ಕ್ಯಾಮೆರಾ ನೋಡಿದರೆ ಮಾಲಿಕ ಹೊರಗಟ್ಟುತ್ತಾನೆ. ಯಾಕೆಂದರೆ, ಇಲ್ಲಿ ಕೆಲಸ ಮಾಡುತ್ತಿರುವ ಬಹುತೇಕ ಹುಡುಗರು 12 ರ ವಯಸ್ಸಿಗೂ ಕೆಳಗಿನವರು" ಆದರೆ ಬೇಗ ಫೋಟೋ ತೆಗೆಯುವುದು ಸುಲಭವಾಗಿರಲಿಲ್ಲ. ಅಲ್ಲಿನ ಸೆಖೆಗೆ ಬೆವರು ಕಣ್ಣಿಗೇ ತೊಟ್ಟಿಕ್ಕುತ್ತಿತ್ತು. ಆಸಿಡ್ ಗುಂಡಿಗಳಿಂದ ಏಳುತ್ತಿದ್ದ ಬಿಸಿಯ ಆವಿಗೆ ಕಣ್ಣುರಿಯಿಂದ ನೀರು ಬರುತ್ತಿತ್ತು. ಎಲ್ಲೋ ಛಾವಣಿಯ ಬಿರುಕಿನಿಂದ ತೂರಿ ಬರುತ್ತಿದ್ದ ಒಂದಿಷ್ಟು ಬೆಳಕು, ಕತ್ತಲೆಯ ಗವಿಯಂತಿದ್ದ ಆ ಸ್ಥಳವನ್ನು ಬೆಳಗಿಸುವುದು ಸಾಧ್ಯವಿರಲಿಲ್ಲ. ನೀರು ತೊಟ್ಟಿಕ್ಕುತ್ತಿದ್ದ ಚರ್ಮಗಳ ರಾಶಿಯನ್ನು ಹೊತ್ತಿದ್ದ ಹೆಂಗಸರು ಆ ಬೆಳಕಿನ ಮುಂದೆ ಹಾದು ಹೋದಾಗಷ್ಟೇ ಕಾಣಿಸಿ ಅನಂತರ ಉಗ್ರಾಣ ಕೋಣೆಯ ಕತ್ತಲಲ್ಲಿ ಕರಗಿಹೋದರು. ಈ ಹೆಂಗಸರು ಗುಂಡಿಗಳಲ್ಲಿ ಹದಗೊಂಡ ಚರ್ಮಗಳ ರಾಶಿರಾಶಿಯನ್ನು ಮೇಲೆತ್ತಿ ಇರಿಸಿಕೊಳ್ಳುವಾಗ ಅದು ಹುಡುಗರ ಮೈಗೆ ತಾಗಿ ಅವರ ಮೈಮೇಲೆ ಆಸಿಡ್ ನೀರು ಬೀಳುತ್ತಿತ್ತು. ಹಾಗಾದಾಗ ಆ ಹುಡುಗರು ಮನಸ್ಸಿಲ್ಲದ ಮನಸ್ಸಿನಿಂದ ಗುಂಡಿಗಳಿಂದ ಮೇಲೆದ್ದು ಬಂದು ನಲ್ಲಿಯ ನೀರಿನಲ್ಲಿ ತೊಳೆದುಕೊಂಡು ಪುನಃ ಗುಂಡಿಗಳಿಗೆ ಇಳಿಯುತ್ತಿದ್ದರು. ಈ ಗಣಿಗಳಲ್ಲಿ 20 ನಿಮಿಷಕ್ಕಿಂತ ಹೆಚ್ಚು ಇದ್ದರೆ ರಕ್ತ ಒಸರುತ್ತದೆ. ಕೈಕಾಲಿನ ಚರ್ಮ ಸುಲಿದು ಬರುತ್ತದೆ ಎಂದರು ಅಯ್ಯಂಗಾರ್. ನಾನು ಈ ಮಧ್ಯೆ ಕೆಲವು ಫೋಟೋ ತೆಗೆದೆ.

ಅಯ್ಯಂಗಾರ್‌ರನ್ನು "ನೀವು ಕಮ್ಯುನಿಸ್ಟ್ ಆಗಿದ್ದೇಕೆ" ಎಂದು ಅವರನ್ನು ಕೇಳಿದಾಗ "ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ದಮನಕ್ಕೊಳಗಾದವರ ಪರವಾಗಿ ಹೋರಾಡುತ್ತದೆ. ಅದಕ್ಕೇ" ಎಂದರು. "ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವು ಕೆಲವುತುಂಬ ಬುದ್ಧಿವಂತ, ಸುಸಂಸ್ಕೃತ, ನಿಷ್ಠಾವಂತ ಯುವಕರನ್ನು ಆಕರ್ಷಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಈ ಯುವಕರು ಮಾಸ್ಕೊ ತಾಳಕ್ಕೆ ಕುಣಿಯುವುದಿಲ್ಲ. ಬದಲಾಗಿ ಈ ದೇಶದಲ್ಲಿನ ದಮನಕ್ಕೊಳಗಾದ ಜನರ ಸ್ಥಿತಿಗತಿಗಳೇ ಅವರನ್ನು ಈ ಪಕ್ಷದ ವತಿಯಿಂದ ಹೋರಾಡುವಂತೆ ಒತ್ತಾಯಿಸಿವೆ ಅನ್ನಿಸದಿರದು"

ಅಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸರ ಗುಂಪನ್ನು ನೋಡಿದೆ. ಅವರ ಮುಖಗಳು ಆಯಾಸದಿಂದ ಬಳಲಿದ್ದವು. ವಾಸ್ತವವಾಗಿ ತಮ್ಮ ವಯಸ್ಸಿಗಿಂತ ಹೆಚ್ಚು ವಯಸ್ಸಾದವರಂತೆ ಅವರು ಕಾಣುತ್ತಿದ್ದರು. ಆ ಗುಂಪಿನಿಂದ ಒಬ್ಬ ಹೆಂಗಸನ್ನು ಅಯ್ಯಂಗಾರ್ ಕರೆದರು. ಮಾಸಲು ನೀಲಿ ಸೀರೆಯ ಹೆಂಗಸು. ಅದರ ಮೇಲೆ ಆಸಿಡ್ ಕಲೆಗಳಿದ್ದವು. ಅವರು ಕಪ್ಪಗೆ ಹೊಗೆಯಾಡುತ್ತಿದ್ದ ಚರ್ಮಗಳನ್ನು ಎಳೆದುಕೊಂಡು ಹೋಗುತ್ತಿದ್ದಳು. ಅವಳು ಗರ್ಭಿಣಿ. ಅವರ ಕುಟುಂಬವೆಲ್ಲ ಇಲ್ಲೆ ಕೆಲಸ ಮಾಡುತ್ತಿತ್ತು. ಸಾಮಾನ್ಯವಾಗಿ ಅವರೆಲ್ಲ, ಅಂದರೆ ತಂದೆತಾಯಿ ಮಕ್ಕಳು ಇಡೀ ಕುಟುಂಬ ಇಲ್ಲಿ ಕೆಲಸ ಮಾಡುತ್ತದೆ. ಅವರು ಎಡಬಿಡದೆ ದುಡಿದರೆ ಮಾತ್ರ ಓವರ್ ಟೈಂ ಹಣವನ್ನು ಗಳಿಸಬಹುದು ಎಂದರು ಅಯ್ಯಂಗಾರ್.

ತಿರುಚಿ ಟ್ಯಾನರಿ ವರ್ಕರ್ಸ್ ಸಂಘವು ಇವರಿಗೆಲ್ಲ ರಬ್ಬರ್ ಏಪ್ರನ್, ಗ್ಲೋವ್ಸ್ ಹಾಗೂ ಸರಳ ಸುರಕ್ಷಣಾ ಸಾಧನಗಳನ್ನು ಕೊಡಬೇಕೆಂದು ಹೋರಾಟ ಮಾಡುತ್ತಿತ್ತು. ಆದರೆ ಈ ದಿಸೆಯಲ್ಲಿ ಒಂದೊಂದು ಹೆಜ್ಜೆ ಮುಂದೆ ಹೋಗುವುದೂ ಬಹಳ ಕಷ್ಟವಿತ್ತು. ಮೊದಲನೆಯದಾಗಿ ಈ ಜನರನ್ನು ಮನುಷ್ಯರಂತೆಯೇ ಭಾವಿಸುವುದಿಲ್ಲ. ನಿಗದಿತ ಸಂಖ್ಯೆಯನ್ನು ಮುಗಿಸದಿದ್ದರೆ ಕಾರ್ಮಿಕರಿಗೆ ಹಣವೇ ಇಲ್ಲ. ಆದರೆ ಕನಿಷ್ಠ ಸಂಖ್ಯೆಯ ಚರ್ಮಗಳನ್ನು ಒದಗಿಸದಿದ್ದರೆ ಕನಿಷ್ಠ ವೇತನವನ್ನು ನೀಡಬೇಕು ಎಂಬ ಬಾಧ್ಯತೆ ಮಾಲಿಕರಿಗಿರಲಿಲ್ಲ.



ಕೊರತೆಯ ಸಮಯದಲ್ಲಿ ಅವನ ಅನುಮತಿ ಇಲ್ಲದೆ ಅವನ ಕಾರ್ಮಿಕರು ಬೇರೆ ಕಾರ್ಖಾನೆಗೆ ಹೋಗುವಂತಿರಲಿಲ್ಲ. ಯಾಕೆಂದರೆ ಅವರು ಮನೆ, ಆಹಾರ ಪದಾರ್ಥಗಳು ಮುಂತಾದವುಕ್ಕಾಗಿ ಯಾವಾಗಲೂ ಇವನ ಸಾಲದ ಋಣದಲ್ಲೇ ಇರುತ್ತಿದ್ದರು. ಅವರಲ್ಲಿ ಬಹುತೇಕ ಎಲ್ಲರೂ ಅವನಿಗೆ 50-60 ರೂಪಾಯಿಗಳಷ್ಟು ಸಾಲದ ಬಾಕಿ ಉಳಿಸಿಕೊಂಡವರೇ ಆಗಿದ್ದರು.

ನಾನು ಭೇಟಿ ನೀಡಿದ ಟ್ಯಾನರಿಯ ಮಾಲಿಕ ಇಂತಹ ಉದಾರಿಯಲ್ಲ ಎಂದು ಗೊತ್ತಾಯಿತು. ಅಷ್ಟರಲ್ಲಿ ಆತ ಬಂದೇಬಿಟ್ಟ. ದುಂಡುದುಂಡಾಗಿ ಕೊಬ್ಬಿದ್ದ ಅಚ್ಚ ಬಿಳಿ ಉಡುಗೆಯಲ್ಲಿದ್ದ ಅವನು ಕೆಂಪು ತುರ್ಕಿ ಟೋಪಿ ಹಾಕಿಕೊಂಡಿದ್ದ. ಮಾಲಿಕ ಪ್ರತಿತಿಂಗಳು ತನಗೆ ಶೇ 12 ಲಾಭ ಮಾತ್ರ ಇದೆ ಎಂದು ಲೆಕ್ಕ ಕೊಡುತ್ತಾನೆ. ಆದರೆ ತಮ್ಮದೇ ಹೂಡಿಕೆ ಮಾಡಿ ವರ್ಷಕ್ಕೆ ಶೇ 144 ಮಾತ್ರ ಲಾಭವಿರುವ ವ್ಯವಹಾರಗಳ ಸಂಖ್ಯೆ ತೀರ ಕಡಿಮೆ. ಅದರಲ್ಲಿಯೂ ಟ್ಯಾನರಿಗಳನ್ನು ಇಷ್ಟು ಕಡಿಮೆ ಲಾಭಕ್ಕೆ ನಡೆಸುತ್ತಾರೆಂದರೆ ನಂಬಲು ಸಾಧ್ಯವಿಲ್ಲ. ತೆರಿಗೆ ತಪ್ಪಿಸುವುದು ಅವರ ಉದ್ದೇಶ. ಒಟ್ಟಿನಲ್ಲಿ ಅವರ ನಿಜವಾದ ಲಾಭ ಎಷ್ಟು ಎಂಬುದರ ಲೆಕ್ಕ ಸಿಗುವುದಿಲ್ಲ. ಮಕ್ಕಳನ್ನು ಮಾಲಿಕನೇ ನೇರವಾಗಿ ನೇಮಿಸಿಕೊಂಡಿದ್ದಾನೆ. ಅವರಿಗೆ ತಿಂಗಳಿಗೆ ಆರೋ ಏಳೋ ರೂಪಾಯಿ ಕೂಲಿ ಕೊಡುತ್ತಾನೆ. ಆದರೆ ಓವರ್‌ಟೈಂ ಹಣ ಗಳಿಸುವ ಉದ್ದೇಶದಿಂದ ತಂದೆತಾಯಿಗಳು ತಮ್ಮೊಂದಿಗೆ ಮಕ್ಕಳನ್ನು ಕರೆತಂದು ಅವರೊಂದಿಗೆ ಕೆಲಸ ಮಾಡಿದಾಗ ಆ ಮಕ್ಕಳಿಗೆ ಪ್ರತ್ಯೇಕವಾಗಿ ಏನೂ ಸಿಗುವುದಿಲ್ಲ. ಮದ್ರಾಸಿನ ಈ ಭಾಗದಲ್ಲೆಲ್ಲ ಟ್ಯಾನರಿ ಮಾಲಿಕರಿಂದ ಮಕ್ಕಳಿಗಾಗಿ ಬಹಳ ಬೇಡಿಕೆ ಇರುತ್ತಿತ್ತು. ಯಾಕೆಂದರೆ ಚರ್ಮವನ್ನು ತುಳಿಯುವುದು ಯಾರಾರೂ ಬೇಕಾದರೂ ಮಾಡಬಹುದಾದ ಸರಳವಾದ ಕೆಲಸವಾಗಿತ್ತು ಮತ್ತು ಇದಕ್ಕೆ ಕೊಡಬೇಕಾಗಿದ್ದ ಕೂಲಿಯೂ ಕಡಿಮೆ.

ಮಕ್ಕಳನ್ನು ಅಪಾಯಕಾರಿಯಾದ ಕೆಲಸದಲ್ಲಿ ತೊಡಗಿಸುವುದು ಕಾನೂನಿಗೆ ವಿರುದ್ಧ ಎಂದು ಹೊಸ ಕಾನೂನು ತಿಳಿಸುತ್ತದೆ. ಆದರೆ ಇದುವರೆಗೂ ಟ್ಯಾನರಿಗಳನ್ನು 'ಅಪಾಯಕಾರಿ' ವೃತ್ತಿಯ ಗುಂಪಿಗೆ ಸೇರಿಸಿಲ್ಲ.

ಇನ್‌ಸ್ಪೆಕ್ಟರು ತಿಂಗಳಿಗೆ ಒಂದು ಸಲ ಬರುತ್ತಾನೆ. ಆತ ಕಾರ್ಮಿಕರ ಕಷ್ಟ ಸುಖ ವಿಚಾರಿಸುವುದಿಲ್ಲ. ಬಾಸ್ ಜೊತೆ ಕುಳಿತು ಟೀ ಕುಡಿಯುತ್ತಾನೆ. ಒಂದು ವೇಳೆ ಆತ ಕಾರ್ಖಾನೆಯ ಒಳಗೆ ಹೋದರೆ ಚಿಕ್ಕಮಕ್ಕಳನ್ನೆಲ್ಲ ಹಿಂದಿನ ಬಾಗಿಲಿನಿಂದ ಹೊರಗೆ ಕಳಿಸಿಬಿಡುತ್ತಾರೆ. ಪ್ರಶ್ನೆ ಕೇಳಿದರೆ ಸ್ವಲ್ಪ ದೊಡ್ಡ ವಯಸ್ಸಿನ ಹುಡುಗರಿಗೆ ಸುಳ್ಳು ಹೆಸರು ನೀಡಿ ಸರಿಪಡಿಸಲಾಗುತ್ತದೆ. ಸರ್ಕಾರದ ಕಾರ್ಮಿಕ ಇಲಾಖೆಯಿಂದ ಇಂಥ ಕಾರ್ಖಾನೆಗಳನ್ನು ನಿಯಂತ್ರಣ ಮಾಡುವ ವಿಚಾರ ತುಂಬ ಚೆನ್ನಾಗಿದೆ. ಆದರೆ ಒಬ್ಬ ಇನ್‌ಸ್ಪೆಕ್ಟರಿಗೆ ಸರ್ಕಾರದಿಂದ ತಿಂಗಳಿಗೆ 75 ರೂ. ಸಂಬಳ ಸಿಕ್ಕರೆ ಟ್ಯಾನರಿಯವರಿಂದ ಅವರಿಗೆ ನೂರು ರೂಪಾಯಿ ಸಿಗುತ್ತದೆ.

ಬಹುತೇಕ ಎಲ್ಲ ಭಾರತೀಯರು ಯಾವಾಗಲೂ ಕೇಳಿಯೇ ಕೇಳುವಂತೆ ಅಯ್ಯಂಗಾರ್ ಕೂಡಾ ನೀಗ್ರೋಗಳು ಮತ್ತು ಜಿಮ್‌ಕ್ರೋಯಿಸಂ ಬಗ್ಗೆ ಕೇಳಿದರು.

ಈ ಜಾತಿಭೇದ ಸಮಸ್ಯೆಯ ಬಗ್ಗೆ ನಿಮಗೇಕೆ ಇಷ್ಟೊಂದು ಆಸಕ್ತಿ ಎಂದು ಅಯ್ಯಂಗಾರ್‌ಗೆ ಕೇಳಿದೆ. ಯಾಕೆಂದರೆ ಈ ಜಾತಿಯ ಬದಲಿಗೆ ಏನಾದರೊಂದು ರಚನಾತ್ಮಕವಾದುದನ್ನು ನಿರ್ಮಿಸಬೇಕು. ಮುಸ್ಲಿಂಲೀಗ್, ಹಿಂದೂ ಹರಿಜನ ಇತ್ಯಾದಿ ಬೇಧಭಾವಗಳ ಹಿನ್ನೆಲೆಯಲ್ಲಿ ಹೊಸದೊಂದು ಪ್ರಜಾಸತ್ತಾತ್ಮಕ ವ್ಯವಸ್ಥೆ ತರುವುದು ಮುಖ್ಯ ಎಂದರು. ನೀವು ಕಮ್ಯುನಿಸ್ಟ್ ಆಗಿದ್ದೇಕೆ ಎಂದು ಅವರನ್ನು ಕೇಳಿದಾಗ ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ದಮನಕ್ಕೊಳಗಾದವರ ಪರವಾಗಿ

ಪುಟ 12 ಕ್ಕೆ

ಪ್ರಕಾಶಕರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
ಬೆಲೆ ರೂ. 50/-

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಫೆಬ್ರುವರಿ 16 ಮತ್ತು 17, 2004**
  ಟೀಚರ್ ಶೈಕ್ಷಣಿಕ ಮಾಸ ಪತ್ರಿಕೆಯ ದ್ವಿತೀಯ ವಾರ್ಷಿಕೋತ್ಸವ
  ನಾಲ್ವಡಿ ಕೃಷ್ಣರಾಜ ಕಲಾಮಂದಿರ ಮಂಡ್ಯ
  16 ರಂದು ಮದ್ಯಾಹ್ನ 3 ರಿಂದ 5 ರವರೆಗೆ ವಿಚಾರಗೋಷ್ಠಿ
- **ಫೆಬ್ರುವರಿ 23, 2004**
  ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಘ ಮತ್ತು ಡಿವೈಎಫ್‌ಐ ನೇತೃತ್ವದಲ್ಲಿ ಗೌರವಧನ ಹೆಚ್ಚಳ, ಬಾಕಿ ಬಿಡುಗಡೆ, 15 ವರ್ಷಗಳಿಂದ ಕೆಲಸ ಮಾಡುತ್ತಿರುವವರನ್ನು ಖಾಯಂಗೊಳಿಸಲು ಆಗ್ರಹಿಸಿ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಉಪವಾಸ ಸತ್ಯಾಗ್ರಹ
- **ಫೆಬ್ರುವರಿ 24, 2004**
  ಮುಷ್ಕರದ ಹಕ್ಕಿಗಾಗಿ ದೇಶದಾದ್ಯಂತ ಮುಷ್ಕರ
- **ಮಾರ್ಚ್ 1-5 2004**
  ಎನ್‌ಡಿಎ ಸರ್ಕಾರದ ಕೃಷಿ ನೀತಿಗಳನ್ನು ವಿರೋಧಿಸಿ, ಪರ್ಯಾಯ ಕೃಷಿ ನೀತಿಗಾಗಿ ರಾಷ್ಟ್ರಾದ್ಯಂತ AIAWA-AIKS ನಿಂದ ಪ್ರಚಾರಾಂದೋಲನ

ಅಭಿವೃದ್ಧಿ ಮಂಡಳಿ ರದ್ಧತಿಯಿಂದ ಅಸಮಾನತೆ ತೊಲಗೀತೆ?

ದೆಹಲಿಯ ವಾಜಪೇಯಿ, ಕರ್ನಾಟಕದ ಕೃಷ್ಣರವರು ನಿತ್ಯವೂ 'ಅಭಿವೃದ್ಧಿ'ಯ 'ಹೊಳೆ'ಯನ್ನೇ ಹರಿಸುತ್ತಿದ್ದಾರೆ! ಮಾಧ್ಯಮಗಳು ಇವರನ್ನು ಕೊಡುಗೈ ದೊಣ್ಣೆಗಳೆಂದೇ ಬಣ್ಣಿಸಲು ಕೊಂಚವೂ ಹಿಂಜರಿಕೆ ಇಲ್ಲ! ಬಣ್ಣಬಣ್ಣದ ಭಾರಿ ಜಾಹೀರಾತುಗಳು, ಪ್ರಚಾರಕ್ಕಾಗಿ ಕೋಟಿಕೋಟಿ ಹರಿಸುವ ಹಣವು ಸಪ್ತಸ್ವರಗಳ ಸಂಗೀತ ನಾದವಾಗಿ ಮತದಾರರ ಮನೆಗೆ ಕನ್ನ ಹಾಕಿ ಇರಿಯುತ್ತಿದೆ.

ಬಹಳ ವಿಚಿತ್ರವೆಂದರೆ ಈ ಅಭಿವೃದ್ಧಿಯ ಹರಿಕಾರರು ಒಂದು ವಿಷಯದಲ್ಲಿ ಮೇಲುಗೈ ಪಡೆಯಲು ಸ್ಪರ್ಧೆ ನಡೆಸಿದಂತಿದೆ. ಭಾರತದ ಉಜ್ವಲ ಭವಿಷ್ಯತ್ತಿಗೆ ವಿದೇಶಿ ಸಾಲವೇ ಮದ್ದು ಎಂದು ನಂಬಿಸುತ್ತಿವೆ. ವಿಶ್ವಬ್ಯಾಂಕ್, ಐಎಂಎಫ್, ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಂತಹವುಗಳ ಸಾಲದ ಶರತ್ತುಗಳು ದೇಶದ ಜನಸಾಮಾನ್ಯರನ್ನು ದಿವಾಳಿಯೆಬ್ಬಿಸಿ, ದೇಶವನ್ನೇ ನುಂಗುತ್ತಿರುವಾಗ, ಸಾಲ ಎತ್ತಿರುವುದೇ ತಮ್ಮ ಅಮೋಘ ಸಾಧನೆ ಎಂಬಂತೆ ಬೀಗುತ್ತಿವೆ. ಕೇಂದ್ರದಿಂದ ರಾಜ್ಯಕ್ಕೆ ಸಿಗಬೇಕಾದ ಅಗತ್ಯದ ಹಣದ ಪಾಲನ್ನೂ ಪಡೆಯಲು ಏನೊಂದೂ ಮಾಡದ ಕೇಂದ್ರದ ತಾರತಮ್ಯಗಳ ವಿರುದ್ಧ ಧ್ವನಿ ಎತ್ತದೇ ಮುಖ್ಯಮಂತ್ರಿ ಕೃಷ್ಣ ಮೊನ್ನೆ ವಿಧಾನಸಭೆಯಲ್ಲಿ ತಕರಾರು ಎತ್ತಿದ್ದು ಸುಮಾರು 1000 ಕೋಟಿ ರೂಪಾಯಿಗಳ ಸಾಲವನ್ನು ವಿಶ್ವಬ್ಯಾಂಕನಿಂದ ಪಡೆಯಲು ಕೇಂದ್ರ ಅಡ್ಡಿಪಡಿಸಿತು ಎಂದು. ನಿಜ ಇಂತಹ ಸಾಲ ಎತ್ತುವುದರಲ್ಲಿ ಮೇಲಾಟವಾಡಲು, ತಾರತಮ್ಯ ಅನುಸರಿಸುವ ರಾಜಕೀಯದಾಟವನ್ನು 'ಮುತ್ಸದ್ದಿ' ಪ್ರಧಾನಿಗಳು ಆಡುತ್ತಾರೆ.

ಹೀಗೆ ಸರ್ಕಾರದ 'ಅಭಿವೃದ್ಧಿ' ಯೆಂಬ ಮಾತುಗಳೇ ವಿಚಿತ್ರ ಅರ್ಥಗಳನ್ನು ಹೊರಡಿಸುತ್ತವೆ. ನಾಡಿನ ಎಲ್ಲಾ ಸಮಸ್ಯೆಗಳಿಗೂ ವಿಶ್ವಬ್ಯಾಂಕ್ ನೀಡುವ ಔಷಧಿಗಳಿಂದಲೇ ಪರಿಹಾರ ಸಾಧ್ಯವೆಂದು ಬಗೆದಿದೆ, ಪ್ರತಿಪಾದಿಸುತ್ತಿದೆ. ಅದು ನೀರಾವರಿಯಿರಲಿ, ಕೃಷಿ-ಕೈಗಾರಿಕೆಯೇ ಇರಲಿ, ಪ್ರಾದೇಶಿಕ ಅಸಮಾನತೆಯೇ ಆಗಿರಲಿ, ವಿದೇಶಿ ನಿಧಿ ನೀಡಿಕೆಯ ಬ್ಯಾಂಕುಗಳು ಸಿದ್ಧಾಂತ-ಸೂತ್ರಗಳಿಂದ ವಿಚಲಿತವಾಗುವುದಿಲ್ಲ. ಉದಾಹರಣೆಗೆ ಪ್ರಾದೇಶಿಕ ಅಸಮತೋಲನದ ವಿರುದ್ಧ ಜನತೆಯ ಕೂಗೆದ್ದಾಗ ಅನಿವಾರ್ಯವಾಗಿ ಅದನ್ನು ಅಧ್ಯಯನ ಮಾಡಲೆಂದು ಡಾ. ಡಿ.ಎಂ. ನಂಜುಂಡಪ್ಪನವರ ನೇತೃತ್ವದ ಆಯೋಗವನ್ನು ರಚಿಸಿತು. ಆಯೋಗ ಸಾವಿರಾರು ಪುಟಗಳ ವರದಿಯನ್ನು ನೀಡಿತು. ಅದರಲ್ಲಿನ ಕೆಲವು ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿತು. ನಂತರ ಯಾವುದೇ ಪ್ರಶ್ನೆಗಳು ಉದ್ಭವಿಸಿದರೂ ತಾನು ಆಯೋಗದ ಶಿಫಾರಸುಗಳಿಗೆ ಬದ್ಧವೆಂದು ಸುಲಭವಾಗಿ ಹೇಳತೊಡಗಿತು.

ಮುಖ್ಯ ಪ್ರಶ್ನೆಯೆಂದರೆ, ಈಚಿಗಿನ ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿ ಕೃಷ್ಣರವರು ಈಗಾಗಲೇ ಅಸ್ತಿತ್ವದಲ್ಲಿರುವ ಹೈದ್ರಾಬಾದ್-ಕರ್ನಾಟಕ ಮಂಡಳಿ, ಮಲೆನಾಡು ಹಾಗೂ ಬಯಲುಸೀಮೆ ಅಭಿವೃದ್ಧಿ ಮಂಡಳಿಗಳನ್ನ ರದ್ದುಪಡಿಸಿ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿ ಎಂದು ರಚಿಸುವುದಾಗಿ ಪ್ರಕಟಿಸಿದರು. ಈ ಮಂಡಳಿಯೇ ಈ ಎಲ್ಲಾ ಪ್ರದೇಶಗಳ ಅಭಿವೃದ್ಧಿಯ ನೇತೃತ್ವ ವಹಿಸಲಿದೆ. ಇದು ನಂಜುಂಡಪ್ಪನವರ ಆಯೋಗದ ಶಿಫಾರಸ್ಸಿನ ಪ್ರಾಮಾಣಿಕ ಅನುಷ್ಠಾನ ಎಂದರು.

ಈ ವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಮುಖ್ಯಮಂತ್ರಿಗಳು ಸರಿಯಾಗೇ ಹೇಳಿದ್ದರು. ಮತ್ತು ಆ ದಿಶೆಯಲ್ಲಿ ಕಾರ್ಯೋನ್ಮುಖರಾಗಿದ್ದರು. ನಂಜುಂಡಪ್ಪನವರ ಆಯೋಗವು ಪ್ರಾದೇಶಿಕ ಅಸಮತೋಲನದ ಧಾರುಣ ಸ್ಥಿತಿಯ ಬಗ್ಗೆ ಅತ್ಯಂತ ನೈಜವಾದ ಹಲವು ವಾಸ್ತವಗಳನ್ನು ಗುರುತಿಸಿದೆ. ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದೆ. ಆದರೆ ಇದರ ನಿವಾರಣೆಗೆ ಸೂಚಿಸಿದ ಪರಿಹಾರಗಳು ಮಾತ್ರ ತೀರಾ ವ್ಯತಿರಿಕ್ತವಾದಂತವುಗಳು. ಮೂಲಭೂತವಾಗಿ ಪ್ರಾದೇಶಿಕ ಅಸಮತೋಲನಕ್ಕೆ ಕಾರಣವಾದ ಭೂಮಿ ಹಂಚಿಕೆಯಂತಹ ಕೃಷಿ ಸಂಬಂಧಗಳ ವೈರುಧ್ಯಗಳನ್ನೂ ಗುರುತಿಸುವುದೇ ಇಲ್ಲ. ಭೂಹಂಚಿಕೆಯ - ಭೂಸುಧಾರಣೆಗಳಂತಹ ಕ್ರಮಗಳ ಬಗ್ಗೆ ಕೈಗಾರಿಕೆ-ಕೃಷಿ ಅಭಿವೃದ್ಧಿಯಾಗದೇ ಅಸಮಾನತೆ ತೊಲಗದು ಎಂಬುದನ್ನು ಪೂರ್ತಿ ಮರೆತಿದೆ. ಜಾಗತೀಕರಣ- ಉದಾರೀಕರಣ -ವಿದೇಶ ಸಾಲ ಶರತ್ತುಗಳತ್ತ ಕತ್ತು ಎತ್ತಿ ನೋಡೇ ಇಲ್ಲ. ಇನ್ನೊಂದು ಮಗ್ಗುಲಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಸೂಚನೆಗಳು ಅತ್ಯಂತ ಹಾನಿಕಾರಕವಾಗಿವೆ. ದಲಿತರು-ಕೃಷಿ ಕೂಲಿಕಾರರು ಮಹಿಳೆಯರು, ದುಡಿವ ವರ್ಗದ ಕೊಳ್ಳುವ ಶಕ್ತಿ ಹೆಚ್ಚಳಕ್ಕೆ ಕ್ರಮಗಳಿಲ್ಲ. ಸಂಪನ್ಮೂಲ ಆಧಾರಿತ ಅಭಿವೃದ್ಧಿ ಕಾಮಗಾರಿಗಳನ್ನು, ರಾಜ್ಯ ಹಿಂದುಳಿದ ಪ್ರದೇಶಗಳ ಶಿಕ್ಷಣ, ಆರೋಗ್ಯ, ನೈರ್ಮಲ್ಯ, ರಸ್ತೆ ಅಭಿವೃದ್ಧಿಗೆ ಹಣ ಪಡೆಯಲು ಸೂಚಿಸಿದೆ.

ಹಿಂದೆ ಜನತೆಯ ಹೋರಾಟದ ಹಿನ್ನೆಲೆಯಲ್ಲಿ ತಜ್ಞರ ಸಮಿತಿಗಳ ಶಿಫಾರಸ್ಸಿನಂತೆ ರಚಿಸಲಾದ ಮಂಡಳಿಗಳ ಮೇಲೆ ಹರಿಹಾಯ್ದಿದ್ದಾರೆ. ಮಂಡಳಿಗಳ ಅಸಮರ್ಪಕ ನಿರ್ವಹಣೆ, ಭ್ರಷ್ಟಾಚಾರಗಳನ್ನು ಕಾರಣವಾಗಿಸಿ ಅವುಗಳನ್ನು ರದ್ದುಗೊಳಿಸಲು ಸಮಿತಿ ಸೂಚಿಸಿತ್ತು. ಅದನ್ನೇ ಈಗ ಕೃಷ್ಣ ಅನುಸರಿಸಲು ಮುಂದಾಗಿರುವುದು.

ಪ್ರಶ್ನೆಯೆಂದರೆ, ಇಂತಹ ಅಭಿವೃದ್ಧಿ ಮಂಡಳಿ ರಚಿಸುವಾಗ ಮೂಲಭೂತ ಕಾರ್ಯಯೋಜನೆ ಬಗ್ಗೆ ಸ್ಪಷ್ಟತೆ ಇತ್ತೇ? ಅಭಿವೃದ್ಧಿಯ ಆದ್ಯತೆಯ ಕ್ಷೇತ್ರಗಳನ್ನು ನಿಖರವಾಗಿ ಗುರುತಿಸಲಾಗಿತ್ತೆ? ಈ ಪ್ರಾದೇಶಿಕ ಅಸಮಾನತೆಯ ಪಿತೂರಿಯಲ್ಲಿ ನರಳುತ್ತಾ ಬಂದ ಜನಸಮೂಹಗಳ ಪ್ರತಿನಿಧಿತ್ವವಾದರೂ ಮಂಡಳಿಯ ಸಮಿತಿಯೊಳಗೆ ಪ್ರತಿಫಲಿಸಿತೆ? ಸಂಪನ್ಮೂಲ ಕೊಟ್ಟು ಕೊಡಿಸಿದರಾಯ್ತು, ಅಭಿವೃದ್ಧಿಯೆಂದರೆ ಬಾಧಿತ ಜನಸಮೂಹದ, ದುಡಿವ ಹಕ್ಕು- ಅವಕಾಶ, ಉತ್ಪಾದನಾ ಸಾಧನ- ಸಲಕರಣೆಗಳ ದಕ್ಕಿಸಿ ಕೊಡುವುದಲ್ಲ, ಕನಿಷ್ಟ ಆದಾಯದ ಹೆಚ್ಚಳ-ಗಳಿಕೆಯಲ್ಲ, ಅಭಿವೃದ್ಧಿಯೆಂದರೆ ರಸ್ತೆ, ಪಾಯಿಖಾನೆಗಳ ಕಾಮಗಾರಿ ಎಂದಷ್ಟೇ ಗುರುತಿಸಿಕೊಳ್ಳಲಾಯಿತು. ಸಹಜವಾಗಿ ಇದರ ಗುತ್ತಿಗೆ, ಅದರಲ್ಲಿ ಪಾಲು ಹಂಚಿಕೆ ಅಲಿಖಿತವಾಗಿತ್ತು. ಕನಿಷ್ಟ ಇದರ ಕಛೇರಿ ಉದಾ: ಹೈ.ಕ. ಅಭಿವೃದ್ಧಿ ಮಂಡಳಿ ಕಛೇರಿ ಇದ್ದದ್ದು ಸಮಸ್ಯೆ ಇರುವ ಗುಲಬರ್ಗಾದಲ್ಲಿ ಅಲ್ಲ, ಬೆಂಗಳೂರಿನಲ್ಲಿ!. ಅಧಿಕಾರಶಾಹಿಗಳು, ಪಾಳೇಗಾರಿ ಅತೃಪ್ತ ರಾಜಕಾರಣಿಗಳ ಕೈಯಲ್ಲೇ ಇದರ ಪ್ರತಿನಿಧಿತ್ವ - ಅಧಿಕಾರದ ಜುಟ್ಟು ಇರುವಾಗ ಪ್ರಜಾಸತ್ತಾತ್ಮಕವಾಗಿ ಇರಲು ಹೇಗೆ ಸಾಧ್ಯ? ಶಾಸಕರುಗಳೇ ಸರ್ವಸ್ವವಲ್ಲ. ಬೇರೆ ಜನಪ್ರತಿನಿಧಿಗಳು ಇದ್ದಾರೆ. ಆ ಸಮೂಹದ ಆಶಯ, ಸಲಹೆಗಳೇನು ಎಂದು ಒಂದು ದಿನವಾದರೂ ಕೇಳಲಿಲ್ಲ - ಕೇಳುವುದು ಬೇಕಿರಲಿಲ್ಲ. ಇಂತಹ ಮಂಡಳಿಯನ್ನು ರಚಿಸುವಾಗ ಜನವಿರೋಧಿಯಾದ ಒಂದು ಸ್ಪಷ್ಟ 'ರಾಜಕೀಯ' ಗುರಿ-ವರ್ಗ ಎಚ್ಚರ ಇರಿಸಿಕೊಂಡೇ ಕಾರ್ಯೋನ್ಮುಖರಾಗಿದ್ದುದರಿಂದ ಈಗ ಅವುಗಳ ಕಾರ್ಯವೈಖರಿ - ಅಸಮರ್ಥ- ಅಸಮರ್ಪಕತೆ ಬಗ್ಗೆ ದೂಷಿಸುವುದು ಹೇಗೆ ಸರಿ? ದೂಷಿಸಬೇಕಾದ್ದು ಮಂಡಳಿಗಳನ್ನಲ್ಲ, ಸ್ವತಃ ಕೃಷ್ಣರ ಸರ್ಕಾರವನ್ನೇ. ಅಸಮಾನತೆಯನ್ನು ಇಂಚಿಂಚೂ ಅಳೆದ ಆರ್ಥಿಕ ತಜ್ಞ ನಂಜುಂಡಪ್ಪನವರಿಗೆ ಜನತೆಯ ಪ್ರಜಾಸತ್ತಾತ್ಮಕ ಭಾವನೆಗಳನ್ನು, ವಸ್ತು-ಸ್ಥಿತಿಯನ್ನು ಗುರುತಿಸಲಾಗಲಿಲ್ಲ. ಉದಾರೀಕರಣ-ಜಾಗತೀಕರಣದ ವಿಶ್ವಬ್ಯಾಂಕ್‌ನ ನಿರ್ದೇಶನಗಳ ಅನುಷ್ಠಾನಕ್ಕೆ ಇದನ್ನೊಂದು ನೆಪವಾಗಿಸಿ, ಆ ಸೀಮಿತ ಚೌಕಟ್ಟಿನಲ್ಲೇ ಕಸರತ್ತು ನಡೆಸಿದ್ದು ಒಪ್ಪಲಾಗದು. ಜನತೆಯ ಪ್ರಜಾಸತ್ತಾತ್ಮಕ ಕೇಳಿಕೆಗಳನ್ನು ವಿಶ್ವಬ್ಯಾಂಕ್ ನೀತಿ ಜಾರಿಗೆ ಬಳಸಿಕೊಳ್ಳುವ ಕೃಷ್ಣರ ರಾಜಕೀಯವೇ ಖಂಡನೀಯ!. ಮಂಡಳಿಗಳ ರದ್ದುಪಡಿಸುವುದನ್ನು ಸಮರ್ಥಿಸಿಕೊಂಡ ಮುಖ್ಯಮಂತ್ರಿಗಳು ಬೀದರ್ ಪಶು ವಿಶ್ವವಿದ್ಯಾಲಯ, ಧಾರವಾಡದಲ್ಲಿ ಶಿಕ್ಷಣ ಇಲಾಖೆ ಕಛೇರಿ, ಉ.ಕರ್ನಾಟಕ್ಕೆ ಆಯುಕ್ತ ನೇಮಕ, ವಿಜಾಪುರದಲ್ಲಿ ಮಹಿಳಾ ವಿ.ವಿ. ತೋರಿಸುವುದು ಯಾವ ಸೀಮೆಯ ಅಭಿವೃದ್ಧಿ ಎಂದು ಕೇಳಬೇಕಿದೆ. ನಮ್ಮ ಆಗ್ರಹವೆಂದರೆ ಈ ಮಂಡಳಿಗಳನ್ನು ರದ್ದು ಪಡಿಸುವುದಲ್ಲ, ಅವುಗಳನ್ನು ಉಳಿಸಿಕೊಳ್ಳಬೇಕು ಮತ್ತು ಕಾರ್ಯನಿರ್ವಹಣೆ - ಆದ್ಯತೆ, ಸಂಪನ್ಮೂಲಗಳನ್ನು ಗುರುತಿಸಿ ಪ್ರಜಾಸತ್ತಾತ್ಮಕಗೊಳಿಸಬೇಕು. ಕಛೇರಿ ಗುಲ್ಬರ್ಗಾದಲ್ಲಿ ಇರಬೇಕು.

ಈಗೇನೂ ಭಾರಿ ಒತ್ತಡ- ಪ್ರತಿಭಟನೆಗಳ ನಂತರ ಅಭಿವೃದ್ಧಿ ಮಂಡಳಿಗಳನ್ನು ಹಾಗೇ ಉಳಿಸಿಕೊಳ್ಳುವುದಾಗಿ ಕೃಷ್ಣ ಪ್ರಕಟಿಸಿದ್ದಾರೆ. ಇದು ಚುನಾವಣಾ ಮತಗಳಿಕೆಯ ಅಥವಾ ಕಳೆದುಕೊಳ್ಳುವ ಭಯವಿರಬಹುದು. ವಿಶ್ವಬ್ಯಾಂಕ್ ಒತ್ತಡಕ್ಕೆ ತಾತ್ಕಾಲಿಕ 'ತಡೆ ಅರ್ಜಿ'ಯೂ ಇರಬಹುದು ಇಂತಹ ಸರ್ಕಾರಕ್ಕೆ ಜನತೆ 'ಖಾಯಂ' ತಡೆ ಒಡ್ಡಬಾರದೇಕೆ? 'ತೊಲಗಿಸಿ, ಬದುಕು ಉಳಿಸಿ' ಎಂದು ಆಗ್ರಹಿಸುತ್ತಿರುವ ಜನಸಮೂಹದ ಪ್ರಜಾಸತ್ತಾತ್ಮಕ ಆಶಯಗಳಿಗೆ ಆಸಿಡ್ ಎರಚಿದಂತಿದೆ ಕೃಷ್ಣರ ಸರ್ಕಾರದ ತೀರ್ಮಾನ. ಜನರ ಭಾರೀ ಪ್ರತಿಭಟನೆಯ ಬಳಿಕ ಅಭಿವೃದ್ಧಿ ಮಂಡಳಿ ರದ್ದುಗೊಳಿಸುವ ತೀರ್ಮಾನ ಹಿಂತೆಗೆದುಕೊಳ್ಳಲಾಗಿದೆ. 'ಮತ'ಗಳ ಮೇಲೆ ಕಣ್ಣಿರಿಸಿ ವಿಶ್ವಬ್ಯಾಂಕ್ ನಿರ್ದೇಶನಗಳ ಜಾರಿಗೆ ತಾತ್ಕಾಲಿಕ 'ತಡೆ'ಯೆಂದು ಕೃಷ್ಣ ಭಾವಿಸಿರ ಬಹುದು. ಆದರೆ ಜನತೆ ಈ ಸರ್ಕಾರಕ್ಕೆ ಖಾಯಂ ತಡೆಯನ್ನು ಯಾಕೆ ನೀಡಬಾರದು.

ಐಕ್ಯರಂಗ

4 ದಶಕಗಳ ಹಿಂದೆ

ಮೈಸೂರಿನ 1,75,000 ಸರ್ಕಾರಿ ನೌಕರರ ಜೀವನಕ್ಕಾಗಿ ಹೋರಾಟ ಆರಂಭ ಮುಖ್ಯಮಂತ್ರಿಗೆ 'ಪುಡಿಗಾಸು ಕೊಡುಗೆ' ತಿರಸ್ಕರಿಸುವ ಮನಿಯಾರ್ಡರ್ ರವಾನೆ

ಮಾದರಿ ಮೈಸೂರಿನ ಮಾದರಿ ಕಾಂಗ್ರೆಸ್ ಸಚಿವ ಸಂಪುಟವು ಹೊಸ ವರ್ಷದ ಉಡುಗೊರೆಯಾಗಿ ತಮ್ಮ ಸರಕಾರಿ ನೌಕರರಿಗಿತ್ತ ಪುಡಿಕಾಸಿನ ಕೊಡುಗೆಯನ್ನು ತಿರಸ್ಕರಿಸಲು ನಿರ್ಧರಿಸಿದ ಮೈಸೂರು ರಾಜ್ಯಾದ್ಯಂತದ ಒಂದು ಲಕ್ಷದ ಎಪ್ಪತ್ತೈದು ಸಾವಿರಕ್ಕೂ ಮಿಕ್ಕಿದ ಸರಕಾರೀ ನೌಕರರು ಫೆಬ್ರವರಿ ತಿಂಗಳ ಮೊದಲ ದಿನದಂದು ತಮ್ಮ ವಾಡಿಕೆಯ ಅರೆಹೊಟ್ಟೆಗೂ ಸಾಲದ ತಿಂಗಳ ಸಂಬಳದೊಂದಿಗೆ ಸೇರಿಸಿ ಆ ಪುಡಿಕಾಸನ್ನು ತಮ್ಮ ಸ್ವಂತ ಖರ್ಚಿನಲ್ಲಿ ಮನಿಯಾರ್ಡರ್ ಮಾಡಿ, ಮೈಸೂರಿನ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರಿಗೆ ಕಳುಹಿಸಿಕೊಟ್ಟಿದ್ದಾರೆ.

★

ಕೇರಳ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಾರ್ಟಿ ಸ್ಥಾನಾರ್ಥಿಗಳು

ಮುಂಬರುವ ಕೇರಳ ಶಾಸನ ಸಭಾ ಚುನಾಣೆಯಲ್ಲಿ ಕಮ್ಯುನಿಸ್ಟ್ ಪಾರ್ಟಿಯು 76 ಕ್ಷೇತ್ರಗಳಲ್ಲಿ ಪಾರ್ಟಿ ಉಮೇದುವಾರರನ್ನು ನಿಲ್ಲಿಸಿ ಸ್ಪರ್ಧೆಗಿಳಿಯುವುದು. ಹಲವು ಕ್ಷೇತ್ರಗಳಲ್ಲಿ ಪಾರ್ಟಿ ಬೆಂಬಲ ಪಡೆದ ಸ್ವತಂತ್ರ ಉಮೇದುವಾರರೂ ಸ್ಪರ್ಧಿಸುವರು. ಸಂಯುಕ್ತ ಸೋಶಿಯಲಿಸ್ಟ್ ಪಕ್ಷ, ಮುಸ್ಲಿಂ ಲೀಗ್‌ಗಳೊಡನೆ ಕೆಲವೊಂದು ಕ್ಷೇತ್ರಗಳಲ್ಲಿ ಚುನಾವಣಾ ಹೊಂದಾಣಿಕೆಗಳನ್ನು ಮಾಡಿಕೊಳ್ಳಲಾಗಿದೆ. ಎರ್ನಾಕುಲಂ ಜಿಲ್ಲೆಯಲ್ಲಿ ಕೇರಳದ ಕಮ್ಯುನಿಸ್ಟ್ ಮಂತ್ರಿಮಂಡಳದಲ್ಲಿನ ಮಾಜಿ ಸಚಿವರಾಗಿದ್ದ ವಿ.ಆರ್.ಕೃಷ್ಣ ಅಯ್ಯರ್‌ರ ಸಮ್ಮುಖದಲ್ಲಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಡಾಂಗೆ ಕೂಟದವರೊಳಗಾದ ಚರ್ಚೆಯ ಫಲವಾಗಿ ಪರಸ್ಪರ ಸ್ಪರ್ಧೆಯನ್ನು ತಪ್ಪಿಸುವರೆ ನಿರ್ಧರಿಸಿ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಳ್ಳಲಾಗಿದೆ.

★

ನಾಮಪತ್ರ ಸಲ್ಲಿಸುವಾಗಲೂ ಬಂಧನ ಕಾಂಗ್ರೆಸ್ 'ಪ್ರಜಾತಂತ್ರ'ದ ನೀತಿ

ಕಾಂಗ್ರೆಸ್ 'ಪ್ರಜಾತಂತ್ರ'ದ 'ಅನಿರ್ಬಂಧ ಸ್ವತಂತ್ರ ಚುನಾವಣೆ'ಯ ಅತ್ಯುತ್ತಮ ಉದಾಹರಣೆಯಾಗಲಿದೆ ಕೇರಳದ ಮುಂಬರುವ ಶಾಸನಾಸಭಾ ಚುನಾವಣೆ.

ಚುನಾವಣೆಯ ಮೊದಲೇ ಕಮ್ಯುನಿಸ್ಟ್ ಪಾರ್ಟಿಯ ಪ್ರಮುಖ ನಾಯಕರನ್ನು, ಕಾರ್ಯಕರ್ತರನ್ನು, ಕೇರಳ ಚುನಾವಣಾ ಸ್ಥಾನಾರ್ಥಿಗಳಾಗಲಿರುವ ಹೆಚ್ಚಿನ ಮಂದಿಯನ್ನು ಭಾರತ ರಕ್ಷಣೆಯ ಹೆಸರಲ್ಲಿ ಬಂಧಿಸಿ, ಜೈಲಿನಲ್ಲಿಟ್ಟ ಕಾಂಗ್ರೆಸ್ ಸರ್ಕಾರ, ಚುನಾವಣಾ ಪ್ರಚಾರಕಾರ್ಯಕ್ಕೆ ತಡೆ ಹಾಕಿತು.

★

ಬೆಲೆಯೇರಿಕೆ ಮತ್ತು ಬಂಧನಗಳನ್ನು ವಿರೋಧಿಸಿ ಕರ್ನಾಟಕ ಪ್ಲಾಂಟೇಶನ್ ಕೆಲಸಗಾರರ ಬೃಹತ್ ಸಭೆ - ಮತಪ್ರದರ್ಶನ

ಬೆಲೆ ಏರಿಕೆ ಮತ್ತು ಬಂಧನಗಳನ್ನು ವಿರೋಧಿಸಿ ಕರ್ನಾಟಕ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್‌ನ ಆಶ್ರಯದಲ್ಲಿ ಮತ ಪ್ರದರ್ಶನ ನಡೆದು ಮೂಡಿಗೆರೆ ತಾಲ್ಲೂಕು ಜವಾಲಿಯಲ್ಲಿ ಸಾರ್ವಜನಿಕ ಸಭೆಯು ಶ್ರೀ ನಲ್ಲ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ದೇಶಾದ್ಯಂತ ಬಂಧಿಸಲ್ಪಟ್ಟಿರುವ ಕಮ್ಯುನಿಸ್ಟ್ ಪಾರ್ಟಿ ಮುಖಂಡರನ್ನು ಮತ್ತು ಟ್ರೇಡ್ ಯೂನಿಯನ್ ಹಾಗೂ ಕಿಸಾನ್ ಸಭಾ ಕಾರ್ಯಕರ್ತರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ, ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ತಡೆಗಟ್ಟಿ, ನ್ಯಾಯ ಬೆಲೆಯಲ್ಲಿ ಆಹಾರ ಧಾನ್ಯಗಳನ್ನೊದಗಿಸಲು ಸರಕಾರ ಯೋಗ್ಯ ವ್ಯವಸ್ಥೆ ಮಾಡಬೇಕೆಂದೂ, ಕಳ್ಳಸಂತೆ ವ್ಯಾಪಾರಿಗಳ ಮೇಲೆ ಸ್ಥಾನ ಬದ್ಧತಾ ಕಾಯಿದೆ ಪ್ರಕಾರ ಕ್ರಮ ಕೈಗೊಳ್ಳಬೇಕೆಂದೂ ಈ ಸಭೆಯಲ್ಲಿ ಸರ್ಕಾರವನ್ನು ಒತ್ತಾಯಿಸಲಾಗಿದೆ.

★

ಕಾಡಿನ ನಾಗರಿಕತೆಯನ್ನು ಪ್ರತಿಪಾದಿಸುವ ಜನಸಂಘದ ಕುರುಡು ನೀತಿ!

ಜನಸಂಘದ ಹನ್ನೆರಡನೇ ಅಖಿಲ ಭಾರತ ಮಹಾಧಿವೇಶನವು ಕಳೆದ ವಾರ ವಿಜಯವಾಡದಲ್ಲಿ ಜರುಗಿತು.

ರಾಷ್ಟ್ರದ ರಾಜಕೀಯ ಪರಿಸ್ಥಿತಿ, ಪಂಚವಾರ್ಷಿಕ ಯೋಜನೆಗಳ ಕುರಿತು ಎರಡು ಮುಖ್ಯ ತೀರ್ಮಾನಗಳನ್ನು ಈ ಅಧಿವೇಶನದಲ್ಲಿ ಕೈಗೊಳ್ಳಲಾಗಿದೆ

ಜನಸಂಘದ ರಾಜಕೀಯ ಧೋರಣೆಯನ್ನು ತ್ಯಜಿಸಬೇಕು, ನಮ್ಮದೇಶ ಅಣುಬಾಂಬ್ ತಯಾರಿಸಬೇಕು, ನಮ್ಮದೇಶ ಚೀನಾದ ಮೇಲೆ ದಂಡೆತ್ತಿಹೋಗಿ ಟಿಬೇಟನ್ನು ವಶಪಡಿಸಿಕೊಳ್ಳಬೇಕು, ದಲೈ ಲಾಮಾರನ್ನು ಪುನಃ ಪಟ್ಟಕ್ಕೇರಿಸಬೇಕು, ಆಕ್ರಮಿತ ಕಾಶ್ಮೀರವನ್ನು ವಿಮೋಚನೆಗೊಳಿಸಬೇಕು, ಚೀನಾವು ವಿಶ್ವಸಂಸ್ಥೆಗೆ ಪ್ರವೇಶಿಸದಂತೆ ನೋಡಬೇಕು.

ಮೇಲೇಳುತ್ತಿರುವ ಗಗನ ಚುಂಬಿ ಕಟ್ಟಡಗಳು : ಪಾತಾಳಕ್ಕಿಳಿಯುತ್ತಿರುವ ಕಾರ್ಮಿಕರು

ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಉಡುಪಿ ತಾಲ್ಲೂಕು ಮಟ್ಟದ ಸಮಾವೇಶ

ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಉಡುಪಿ ತಾಲ್ಲೂಕು ಮಟ್ಟದ ಸಮಾವೇಶವು ಫೆಬ್ರವರಿ 1 ರಂದು ಉಡುಪಿ ಉಡ್ ಲ್ಯಾಂಡ್ಸ್ ರೆಸ್ಟೋರೆಂಟ್‌ನ ಸಭಾಂಗಣದಲ್ಲಿ ಜರುಗಿತು. ಕಾಂ. ಪಿ.ವಿಶ್ವನಾಥ್ ರೈ ಇದರ ಅಧ್ಯಕ್ಷತೆ ವಹಿಸಿದ್ದರು.

ಸಮಾವೇಶವನ್ನು ಉದ್ಘಾಟಿಸಿ ಸಿಐಟಿಯು ಅಧ್ಯಕ್ಷರಾದ ಕಾಂ. ಬಿ.ಮಾಧವರವರು 'ಕರ್ನಾಟಕ ರಾಜ್ಯದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಯ ಕೆಲಸ ತುಂಬಾ ತಡವಾಗಿ ಆರಂಭವಾಗಿದೆ. ಇಲ್ಲಿ ಕಟ್ಟಡ ಕಾರ್ಮಿಕರ ದೊಡ್ಡ ಪ್ರಮಾಣದ ಚಳುವಳಿ ನಡೆಯಲಿಲ್ಲ. ಇತರ ರಾಜ್ಯಗಳಲ್ಲಿ ಸಂಘಟನೆಗಳ ಚಳುವಳಿಯ ಮೂಲಕ ಸರ್ಕಾರದಿಂದ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗಿದೆ. ದಿನದಿನಕ್ಕೆ ಕಟ್ಟಡ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಎತ್ತರೆತ್ತರದ ಕಟ್ಟಡಗಳು ಆಗುತ್ತಿವೆ. ಕಟ್ಟಡದ ವಸ್ತುಗಳಿಂದ ಕಾರ್ಮಿಕರ ಆರೋಗ್ಯವು ಹಾಳಾಗುತ್ತಿರುವುದು ಅಲ್ಲದೆ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ. ಆದ್ದರಿಂದ ಕಟ್ಟಡ ಕಾರ್ಮಿಕರಿಗೆ ಸರ್ಕಾರದಿಂದ ಭದ್ರತೆಯ ಕಾನೂನು, ಸವಲತ್ತುಗಳು ಬರಬೇಕಾಗಿದೆ.

ಕಟ್ಟಡ ಕಾರ್ಮಿಕರು ದೇಶದಲ್ಲಿಯೇ ಅತೀ ಅಸಂಘಟಿತರಾದವರಾಗಿರುತ್ತಾರೆ. ಸಿಐಟಿಯು ಈ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ನಿವೃತ್ತಿ ಸವಲತ್ತು, ಅಪಘಾತ ಸವಲತ್ತು, ಹೆರಿಗೆ ಭತ್ಯೆ ಮತ್ತು ಕಾರ್ಮಿಕ ಮಕ್ಕಳ ವಿದ್ಯಾಭ್ಯಾಸ ಸವಲತ್ತು ಮುಂತಾದ ಸವಲತ್ತುಗಳಿಗೆ ಒತ್ತಡ ತಂದುದರಿಂದ



1996 ರಲ್ಲಿ ಕೇಂದ್ರ ಸರ್ಕಾರ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ (ಉದ್ಯೋಗ ಮತ್ತು ಸೇವಾ ನಿಯಮಗಳು) ಕಾನೂನು 1996 ನ್ನು ಜಾರಿ ಮಾಡಿ, ರಾಜ್ಯ ಸರ್ಕಾರಗಳು ಈ ಕಾನೂನು ಆಧಾರದಲ್ಲಿ ಅಸಂಘಟಿತ ಕಾರ್ಮಿಕರಿಗೆ ರಾಜ್ಯ ಸಲಹಾ ಸಮಿತಿ ಮತ್ತು ರಾಜ್ಯ ಕಲ್ಯಾಣ ಮಂಡಳಿ ಸಲಹಾ ಸಮಿತಿ ರಚನೆ ಮಾಡುವಂತೆ ತಿಳಿಸಿದೆ. ಕರ್ನಾಟಕ ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕರಿಗೆ ಈ ಕಾನೂನಿನ ಸವಲತ್ತುಗಳು ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ದ.ಕ. ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಷನ್ ಕಾರ್ಯದರ್ಶಿ ಕಾ. ಸುಕುಮಾರ್‌ರವರು ಜಾಗತೀಕರಣದ ಕಾರಣದಿಂದಾಗಿ ದೊಡ್ಡ ದೊಡ್ಡ ಕಂಟ್ರಾಕ್ಟರುದಾರರು ಜಾಗತಿಕ ಮಟ್ಟದಲ್ಲಿ ಬರುತ್ತಿದ್ದಾರೆ. ಇದರಿಂದ ಕಾರ್ಮಿಕರ ಸಮಸ್ಯೆಗಳು ದೊಡ್ಡ ಪ್ರಮಾಣದಲ್ಲಿ ಉದ್ಭವಿಸುತ್ತಿವೆ. ಕಾರ್ಮಿಕರ ವಲಸೆಯೂ ಒಂದು ದೊಡ್ಡ ಸಮಸ್ಯೆಯಾಗಿದೆ. ಕೂಲಿಯಲ್ಲಿ ಸ್ಪರ್ಧೆ ನಡೆಯುತ್ತಿದೆ. ಕಾರ್ಮಿಕರ ವೇತನ ಇಳಿಯುತ್ತಿದೆ. ಸಮಾನ ಕೆಲಸಕ್ಕೆ ಸಮಾನ ವೇತನದ ಚಳುವಳಿ ನಡೆಯಬೇಕು ಎಂದು ತಿಳಿಸಿದರು.

ನಂತರ ಕಾರ್ಯದರ್ಶಿ ಕಾ. ಕೃಷ್ಣ ಎಸ್.ಅಮೀನರು ಸಂಘದ ಚಟುವಟಿಕೆಗಳ ವರದಿಯನ್ನು ಚರ್ಚೆಗಾಗಿ ಮಂಡಿಸಿದರು.

ನೂತನ ಪದಾಧಿಕಾರಿಗಳು

ಅಧ್ಯಕ್ಷರು : ಪಿ.ವಿಶ್ವನಾಥ ರೈ, ಉಪಾಧ್ಯಕ್ಷರುಗಳು : ಶ್ರೀರಾಮ ಮೇಸ್ತ್ರೀ ಹಾಳೆಕಟ್ಟೆ, ಕೊಡವೂರು, ರಮೇಶ್ ಮೇಸ್ತ್ರಿ ಕೊರಂಕ್ರಪಾಡಿ, ಗಣಪತಿ ನಾಯ್ಕ, ಬ್ರಹ್ಮಾವರ, ಕಾರ್ಯದರ್ಶಿ: ಕೃಷ್ಣ ಎಸ.ಅಮೀನ್, ಜತೆ ಕಾರ್ಯದರ್ಶಿಗಳು : ಶೇಖರ ಬಿ.ಬಂಗೇರ, ಕುತ್ಪಾಡಿ, ಗಣೇಶ ನಾಯಕ್, ಪುತ್ತಾರು, ದಯಾನೇದ ಕೋಟ್ಯಾನ್ ಕೊಡವೂರು, ರಾಮ ಕರ್ಕಡ, ಸಾಲಿಗ್ರಾಮ

ಕೋಶೋಧಿಕಾರಿ : ದೋಗು ಸುವರ್ಣ ಹಾಗೂ 22 ಸದಸ್ಯರ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆರಿಸಲಾಯಿತು.

ಸಭೆಯನ್ನುದ್ದೇಶಿಸಿ ಅಧ್ಯಕ್ಷರು ಮಾತನಾಡುತ್ತಾ ಮುಂದಿನ ದಿನಗಳಲ್ಲಿ ಸಂಘದ ಪ್ರತಿ ಸದಸ್ಯರೂ ಸಂಘಕ್ಕೆ ಸದಸ್ಯರನ್ನು ಸೇರಿಸುವ ಕೆಲಸ ಮಾಡಬೇಕು, ತಾಲೂಕಿನ ಎಲ್ಲಾ ಗ್ರಾಮಗಳಲ್ಲಿಯೂ ಪ್ರದೇಶ ಸಮಿತಿಗಳನ್ನು ರಚಿಸಬೇಕೆಂದು ಕರೆ ನೀಡಿದರು.

ಈವಾರ ಕರ್ನಾಟಕ ಒಂದುನೋಟ

ಎಸ್.ವೈ.ಗುರುಶಾಂತ್

ಜೇವರ್ಗಿ: ಮನವಿ ಕೊಟ್ಟರೆ ಒದೆ ಕೊಟ್ಟರು

ಅಲ್ಲಿ ವಿದ್ಯಾರ್ಥಿಗಳು ಸೇರಿದ್ದುದ್ದು ತಮ್ಮ ಬೇಡಿಕೆಗಳನ್ನು ಈಡೇರಿಸಿ ನಿರಾತಂಕವಾಗಿ ವಿದ್ಯಭ್ಯಾಸನಡೆಸಲು ಅನುವು ಮಾಡಿಕೊಡಿ ಎಂದು ಕೇಳಲು. ಆ ಭಾಗದ ಶಾಸಕ, ಸಚಿವ ಧರ್ಮ ಸಿಂಗ್, ಉಸ್ತುವಾರಿ ಸಚಿವ ಖರ್ಗೆಯವರೇ ತಮ್ಮೂರಿಗೆ ಬಂದಿರುವಾಗ ಬೇಡಿಕೆಗಳನ್ನು ಮಂಡಿಸಲು ಮುಂದಾದರು ಹಾಸ್ಟೆಲ್ ವಿದ್ಯಾರ್ಥಿಗಳು. ಬಾಲಕಿಯರಿಗೆ ಶೌಚಾಲಯ, ಶಾಲಾ ಕೊಠಡಿಗಳ ನಿರ್ಮಾಣ, ಬಾಲಕಿಯರಿಗೆ ಸ್ವತಂತ್ರ ಕಾಲೇಜು... ದೇಶವಿದೇಶಗಳನ್ನು ಕೂಡಿಸುವ ರಸ್ತೆಗಳನ್ನು ನಿರ್ಮಿಸುವ, ಬ್ರಿಡ್ಜ್- ಬಿಲ್ಡಿಂಗ್ ಕಟ್ಟಿಸುವ ಲೋಕೋಪಯೋಗಿ ಸಚಿವ ಧರ್ಮಸಿಂಗ್‌ಗೆ 'ಮೂತ್ರಾಲಯ' ಕಟ್ಟಿಸುವುದು ಅಷ್ಟೇನೂ ಕಷ್ಟವಿರಲಿಕ್ಕಿಲ್ಲ. ಅಥವಾ ಇಂತಹ ಮಹಾನ್ ಕಟ್ಟಿಸುವ ಮಂತ್ರಿಯ ಸ್ವ ಕ್ಷೇತ್ರದಲ್ಲಿ ಪಾಯಿಖಾನೆ ಇಲ್ಲವೇ ಎಂದು ಕೇಳಿದರೆ ಹೇಗೆ ಎಂದು ಇರುಸುಮುರುಸಾಯಿತೇ? ಅಥವಾ ರಸ್ತೆಗೆ ಕುಂತು, ತಾವೂ ನೆತ್ತಿ ಕಾಯಿಸಿಕೊಳ್ಳುವುದಲ್ಲದೇ ತಮ್ಮಂಥ ಭಾರಿ ಅಧಿಕಾರಿಗಳ ತಲೆಯನ್ನು ಬಿಸಿ ಮಾಡುವ, ಲೋಪ ಎತ್ತಿ ತೋರಿಸುವ ಈ ಕಿರಿಕಿರಿಯನ್ನು ಅತ್ಯುತ್ಸಾಹದಲ್ಲಿ 'ನಿವಾರಿಸುವ' ತಮ್ಮದೇ ಮಾರ್ಗ ಹಿಡಿದರೇ... ಅಂತೂ ಮನವಿ ಪತ್ರವನ್ನು ಎಐಎಸ್‌ಎಫ್ ನ ಮುಖಂಡರು ಓದುತ್ತಿರುವಾಗಲೇ ಪೋಲೀಸ್ ಅಧಿಕಾರಿಗಳು ಮಕ್ಕಳ ಕೆನ್ನೆಗೆ ಬಾರಿಸುವುದೇ? ಲಾಠಿ ಎತ್ತಿ ಬೆನ್ನಿಗೆ ಬಡಿದು ಓಡಿಸುವುದೇ? ಇಂತಹ ಉದ್ಧಟತನ, ಅತಿರೇಕದ ದೌರ್ಜನ್ಯವನ್ನು ಎಸ್.ಪಿ., ಡಿ.ಸಿ., ನಿಂತು ನಡೆಸಿಬಿಟ್ಟರು. ಹಿರಿಯ ಸಚಿವ ಧರ್ಮಸಿಂಗ್‌ರು ಮಾತನಾಡು



ವಾಗಲೇ ಅಡ್ಡ ಬಾಯಿಹಾಕಿದರು. ಅಂದರೆ ಈ ಅಧಿಕಾರಶಾಹಿ ವರ್ತನೆ ಮಿತಿಮೀರಿದ್ದು. ಇಂತಹ ದೌರ್ಜನ್ಯಗಳು ಗೃಹಸಚಿವರ ಜಿಲ್ಲೆಯಲ್ಲೇ ಹೆಚ್ಚು - ಅಂದರೆ ಅಧಿಕಾರಶಾಹಿಗೆ ಅಂಕುಶವೂ ಇಲ್ಲ. ಅದಕ್ಕೆ ಸಚಿವರ ಕುಮ್ಮಕ್ಕು ಇಲ್ಲದಿದ್ದೇ?!

ಈ ಘಟನೆಗೆ ಸಚಿವರುಗಳು ಜನರ, ವಿದ್ಯಾರ್ಥಿಗಳ ಕ್ಷಮೆ ಕೋರಬೇಕು, ದೌರ್ಜನ್ಯಕ್ಕೆ ಕಾರಣವಾದ ಅಧಿಕಾರಿಗಳನ್ನು ಅಮಾನತು



ಗೊಳಿಸಿ ವಿಚಾರಣೆಗೊಳಪಡಿಸಬೇಕು. ಕೇಸ್ ಹಿಂತೆಗೆಯಬೇಕು. ಬಡಿದವರೇ ಬಡಿಸಿಕೊಂಡ ವಿದ್ಯಾರ್ಥಿಗಳ ಮೇಲೆ ಕೊಲೆ ಮೊಕದ್ದಮೆ ಹೂಡಿದ್ದಾರೆಂದರೆ ಕೃಷ್ಣ-ಖರ್ಗೆಯವರ ಸರ್ಕಾರ ಎಂತಹ ಅಧಃಪತನದ ಹಾದಿಗೆ ಇಳಿದಿದೆ ಎಂದು ಅರಿಯಬಹುದು.

ಭ್ರಷ್ಟರ ಬಿಡಾರ ಹೊಕ್ಕ ಹುಸಿಬಾಂಬ್ ಮಟ್ಟಣ

ಭ್ರಷ್ಟಾಚಾರವೆಂದರೆ ಸಿಡಿಮಿಡಿಗೊಂಡು 'ಬಾಂಬ್' ಗಿಲಗಂಚಿ ಆಡಿಸುತ್ತಿದ್ದ ಸ್ವಯಂ ಹೀರೋ ಬಾಲಕ ಮಟ್ಟಣ್ಣನವರ್ ತಾನು ಬಂದಲ್ಲಿಗೆ ಹೋಗಿದ್ದಾನೆ. 'ತಾನು ಆರ್‌ಎಸ್‌ಎಸ್ ನಲ್ಲಿದ್ದವನು, ಬೆಳೆದವನು,ಅಲ್ಲಿಗೆ ಮರಳಿದ್ದೇನೆ' ಎಂದು. ರಾಜಕಾರಣಿಗಳು ಭ್ರಷ್ಟರು ಎಂದು ಏಕಾಏಕಿ ತೀರ್ಪು ನೀಡಿ ಬಾಂಬ್ ಇರಿಸಿದ್ದ ಮಟ್ಟಣ್ಣ ಬಿಜೆಪಿ ಸೇರಿದಾಗ ಹೇಳಿದ ಸತ್ಯ ಗಮನಿಸಬೇಕಾಗುತ್ತದೆ. ಈತ ಬಿಜೆಪಿ ಸೇರಿದ್ದು ಚುನಾವಣೆಗಳು ಹತ್ತಿರ ಬಂದಿರುವಾಗಲೇ, ಅದೂ ಬಿಜೆಪಿ ಅಧ್ಯಕ್ಷ ಅನಂತಕುಮಾರ್ 14,500 ಕೋಟಿ ರೂಪಾಯಿಗಳ ಹುಡ್ಕೋ ಹಣ ಹೊಡೆದ ಭ್ರಷ್ಟತೆಯ ಮೊಕದ್ದಮೆ ಎದುರಿಸುತ್ತಿರುವಾಗಲೇ. ಇಂತಹ ಭ್ರಷ್ಟ ಬಿಜೆಪಿ ಸೇರಿದ ಮಟ್ಟಣ್ಣ ತಾನು ಭ್ರಷ್ಟಾಚಾರ ವಿರೋಧಿ ಎಂದು ಬೊಗಳೆ ಹೊಡೆಯುವುದು, ಬಿಜೆಪಿ ಸ್ವಚ್ಛ ಪಕ್ಷವೆಂದು ಸಾಧಿಸುವುದು ಅತ್ಯಂತ ಹಾಸ್ಯಾಸ್ಪದ. ಇಂತ 'ಹುಸಿಬಾಂಬ್'ನ್ನು ಜೊತೆಗಿರಿಸಿಕೊಂಡು ತಮ್ಮ ಮಾನ ಕಾಪಾಡಿಕೊಳ್ಳಬೇಕಾದ ದೈನೇಸಿ ಪರಿಸ್ಥಿತಿ ಬಿಜೆಪಿ ನಾಯಕರಾದ ವಾಜಪೇಯಿ, ಅನಂತಕುಮಾರ್, ಯಡಿಯೂರಪ್ಪಾದಿಗಳಿಗೆ! ಇಂವ ರಾಜಕೀಯ ಡೇರೆ ಸೇರಿಕೊಂಡದ್ದನ್ನು ಪ್ರತಿಭಟಿಸಿ ಹುಟ್ಟೂರು ಧಾರವಾಡ, ಹುಬ್ಬಳ್ಳಿ, ಬೆಂಗಳೂರುಗಳಲ್ಲಿ ಪ್ರತಿಭಟನೆ ನಡೆದಿವೆ. ಅವ ಹುಟ್ಟು ಹಾಕಿದ್ದ 'ನಮ್ಮಿಂದ' ಸಂಘಟನೆ ಕರಪತ್ರ ಸುಟ್ಟು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲವು ಸಂಗತಿಗಳು ಸ್ಪಷ್ಟವಾಗಲೇಬೇಕಿದೆ. ಆರ್‌ಎಸ್‌ಎಸ್ ನಿಂದ ಬಂದ ಈತ ಎಸ್.ಐ. ಆದ ಬಳಿಕ ಲಂಚ ತಗೊಂಡ ಪ್ರಕರಣಗಳೆಷ್ಟೋ? (ಮಾಧ್ಯಮಗಳು ಮೊದಲು ಬಹಿರಂಗ ಪಡಿಸಿ ನಂತರ ಬಾಯಿ ಮುಚ್ಚಿಕೊಂಡವೇಕೆ?) ಬಾಂಬ್ ಇಟ್ಟು ಇಮೇಜ್ ಪಡೆಯಲು ನಂತರ ಬಿಜೆಪಿ ಸೇರಲು ಸಂಘ ಪರಿವಾರ ಒಳಗೊಂಡು ಯಾರದ್ದಾದರೂ ಕೈವಾಡವಿತ್ತೇ? ತನಿಖೆಯಲ್ಲಿ ಕಂಡಂತೆ ಆನಂದಮಾರ್ಗಿ ಭಯೋತ್ಪಾದಕರ ಜಾಲ ಎಷ್ಟಿದೆ - ಸಂಘ ಪರಿವಾರದೊಂದಿಗೆ ಏನಾದರೂ ಸಂಬಂಧ ಇದೆಯೇ? ಸರ್ಕಾರದ ಆಡಳಿತ ಯಂತ್ರದಲ್ಲಿ ಇಂತಹ ನುಸುಳುಖೋರರ ಬಗ್ಗೆ ಸರ್ಕಾರಕ್ಕೆ ನಿಗಾ, ಅರಿವಿದೆಯೇ? ಈಗಲಾದರೂ ತನಿಖೆಯನ್ನು ಗೃಹಸಚಿವ ಖರ್ಗೆಯವರು ಚಾಲೂ ಮಾಡಬೇಕು. ಅಂಥ ಹುಸಿ ಬಾಂಬ್ ಕುರಿತು ರೋಚಕವಾಗಿ ಮುಗ್ಧತೆಯಿಂದ ಮಾತನಾಡಿ ಬೆಂಬಲಿಸಿದ ಬುದ್ಧಿಜೀವಿಗಳು ಈ ಸಂಗತಿಗಳನ್ನು ಅರಿಯಬೇಕು. ಚುನಾವಣೆಗೆ ನಿಂತರೆ ಮಟ್ಟಣ್ಣನ ಡಿಪಾಸಿಟ್ ಕಳೆಯಬೇಕು.

ಎಲ್ಲಿದೆ ಇವರಿಗೆ ನೈತಿಕತೆ ?

ರಾಜನೇ ಬಟ್ಟೆ ತೊಟ್ಟಿಲ್ಲ ಎಂದ ಮೇಲೆ ಮಂತ್ರಿಗಳದಿನ್ನೇನು ಕತೆ? ಬಹುತೇಕ ಅವರು ಲಂಗೋಟಿಯು ಇಲ್ಲದೇ ಇರುತ್ತಾರೆ! ಸಿಕ್ಕಿ ಬೀಳುತ್ತಾರೆ! ತಾವು ಹಾಗೂ ತಮ್ಮ ಸಕುಟುಂಬದವರು ಗೋವಾದ ಪಂಚತಾರಾ ಹೋಟೆಲ್‌ನಲ್ಲಿ ನಡೆಸಿದ ಮೋಜವಾನಿಗೆ ನಾಗರಿಕ ವಿಮಾನಯಾನ ಸಚಿವರು ಬಿಲ್ ನೀಡಿದ್ದಾರೆಂದು ದೇಶಕ್ಕೆ ತಿಳಿಸಲಾಗುತ್ತಿದೆ! ಅವರ ಸಚಿವಾಲಯದಡಿಯ ಅತ್ಯಂತ ಲಾಭದಾಯಕ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (AAI) ಬಿಲ್ ಪಾವತಿಸಲಿದೆ ಎಂದು ಮಾಧ್ಯಮ ಪ್ರತಿನಿಧಿಗಳು ಬಹಿರಂಗಗೊಳಿಸಿದ ನಂತರ ಇದು ನಡೆದಿದೆ. ಈ ಅಂಶ ಬಹಿರಂಗಗೊಂಡ ನಂತರವೇ ಸಚಿವರು ಹಣ ಪಾವತಿಸಲು ಮುಂದಾಗಿರುವುದು. ಇದರಿಂದ ಸ್ಪಷ್ಟವಾಗುವ ಅಂಶವೆಂದರೆ ಇದು ಬಹಿರಂಗಗೊಳ್ಳದಿದ್ದರೆ ಸಾರ್ವಜನಿಕ ಸಂಸ್ಥೆಗಳ ಲೂಟಿ ಕೆಲಸವನ್ನು ವಾಜಪೇಯಿ ಸರ್ಕಾರದ ಸಚಿವರು ನಿರಾತಂಕವಾಗಿ ಮುಂದುವರಿಸುತ್ತಿದ್ದರು.

ಈ ಹಿಂದೆ ಕೇಂದ್ರ ಜಾಗೃತದಳದ ಆಯುಕ್ತರು (CVC) ಪ್ರಧಾನಿಯವರೊಂದಿಗೆ ನೇರವಾಗಿ ಸಚಿವರು ಸಾರ್ವಜನಿಕ ಉದ್ದಿಮೆಗಳಿಂದ ಹಣ ಕೊಳ್ಳೆ ಮಾಡುವ ಅಂಶವನ್ನು ಪ್ರಸ್ತಾಪಿಸಿದಾಗ ಸಂಸತ್ತಿನ ಒಳಗು ಹೊರಗು ತಲ್ಲಣ ಉಂಟಾಗಿತ್ತು. ಮಾಮೂಲಿಯಂತೆ ವಾಜಪೇಯಿಯವರು ವಾಸ್ತವಾಂಶಗಳ ಪರಿಶೀಲನೆ ನಂತರ ಕ್ರಮ ಜರುಗಿಸುವುದಾಗಿ ಅಬ್ಬರಿಸಿದ್ದರು. ಕ್ರಮ ಜರುಗಿಸುವುದಿರಲಿ, ಸಾರ್ವಜನಿಕ ಉದ್ದಿಮೆಗಳ ಲೂಟಿ ಮಾಡುವ ಅವರ ಸಚಿವರುಗಳ ಕ್ರಮಗಳನ್ನು ಅವರೆ ಸ್ವತಃ ಉತ್ತೇಜಿಸುತ್ತಿದ್ದಾರೆ.

ಮತ್ತಷ್ಟು ಕೆಟ್ಟ ಅಂಶಗಳೆಂದರೆ ಇನ್ನಷ್ಟು ಬಹಿರಂಗಗೊಂಡಿರುವ ವರದಿಗಳು. ಏಶ್ಯನ್ ಏಜ್ ಪತ್ರಿಕೆ(10.2.04) ಹೇಳುವುದೇನೆಂದರೆ ಈ ಸಚಿವರು ವಿಮಾನ ನಿಲ್ದಾಣ ಪ್ರಾಧಿಕಾರದ ಮೂಲಕ ತಮ್ಮ ನಿವಾಸದ ಅಂಗಳದಲ್ಲಿ ಹೊಸ ಹುಲ್ಲು ಹಾಸು ನಿರ್ಮಿಸಿಕೊಂಡರು. ಒಬ್ಬ ಪೂರ್ಣಕಾಲದ ಮಾಲಿಯನ್ನು ನೇಮಿಸಿಕೊಂಡರು, ತಮ್ಮ ನಿವಾಸದಲ್ಲಿ ಹೆಚ್ಚುವರಿ ಕೊಠಡಿಯೊಂದನ್ನು ನಿರ್ಮಿಸಿಕೊಂಡರು. ದೊಡ್ಡ ಸಂಖ್ಯೆಯ ಹವಾ ನಿಯಂತ್ರಣ ಯಂತ್ರಗಳು, ನೀರು ಶುದ್ಧೀಕರಣ ಯಂತ್ರಗಳು, ತೈಲಾಧಾರಿತ ರೂಂ ಹೀಟರ್ಸ್, ಗೀಸರ್‌ಗಳು, ಕಟಕಿ ಪರದೆ, ಮೇಲ್ಛಾವಣಿ ಹೊದಿಕೆ ಮುಂತಾದವನ್ನು ತರಿಸಿಕೊಂಡಿದ್ದಾರೆ ಎಂಬುದು. ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ತಮ್ಮ ಮನೆಯ ಹುಲ್ಲುಹಾಸಿನ ನಡುವೆ ನೀರಿನ ಕಾರಂಜಿಯೊಂದನ್ನು ಸಹಾ ನಿರ್ಮಿಸಿಕೊಡಲು ಆದೇಶಿಸಿದ್ದರಂತೆ.

ಇವುಗಳಿಗೆ ಪುರಾವೆಯಾಗಿ ಆದೇಶದ ಹಾಗೂ ಬಿಲ್ ಪ್ರತಿಗಳ ಜೆರಾಕ್ಸ್‌ನ್ನು ಸಹಾ ನೀಡಲಾಗಿದೆ.



ವಿಮಾನಯಾನ ಸಚಿವ ...

ದುರಂತವೆಂದರೆ ಈ ಸಚಿವರು ರಾಜಿನಾಮೆ ನೀಡಬೇಕು ಅಥವಾ ವಾಜಪೇಯಿಯವರು ಅವರ ಮೇಲೆ ಕ್ರಮ ಜರುಗಿಸಬೇಕೆಂದು ಕೇಳುವುದೆಂದರೆ ಮಕ್ಕಳು ಚಂದಮಾಮನನ್ನು ಕೊಡಿಸಿ ಎಂದು ಕೇಳಿದಂತಾಗಿದೆ. ವಾಜಪೇಯಿ ಸರ್ಕಾರ ನಿರ್ಮಿಸಿರುವ ರಾಜಕೀಯ ನೈತಿಕತೆಯ ಮೌಲ್ಯಗಳು ಅಂತಹ ಮಟ್ಟಕ್ಕಿಳಿದಿವೆ.

ಇತ್ತೀಚಿಗೆ ಜುದೇವ್ ಮತ್ತು ಜೋಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ವಾಜಪೇಯಿ ಯವರು ಗುಡುಗಿದಾಗ ಬಹಳಷ್ಟು ಜನ ಅವರನ್ನು ಒಬ್ಬ ಮುತ್ಸದ್ದಿ ಎಂದು ಹೊಗಳಿದ್ದರು. ಮುತ್ಸದ್ದಿತನದಲ್ಲಿ ಅವರು ನೆಹರುವಿನ ಹಂತ ತಲುಪಿದ್ದಾರೆ! ಎಂದು ದಕ್ಷಿಣ ಭಾರತದ ರಾಷ್ಟ್ರೀಯ ದಿನಪತ್ರಿಕೆಯೊಂದು ಹೊಗಳಿತ್ತು. ವಾಜಪೇಯಿ ಯವರ ನಾಯಕತ್ವದಲ್ಲಿ, ತೆಹಲ್ಕಾದಿಂದ ಇಂದಿನವರೆಗೆ ನಡೆದಿರುವ ಅನೇಕ ಹಗರಣಗಳಲ್ಲಿ ತಪ್ಪಿತಸ್ಥರ ಮೇಲೆ ಅವರು ಯಾವುದೇ ಕ್ರಮ ಜರುಗಿಸಲಿಲ್ಲ ಮಾತ್ರವಲ್ಲ, ರಾಜಕೀಯ ನೈತಿಕತೆಯನ್ನು ಹೆಚ್ಚಿಸುವ ಪರಿಸರವನ್ನು ನಿರ್ಮಿಸಲಿಲ್ಲ ಅಲ್ಲದೆ ಇದನ್ನು ಅನುಕೂಲಕ್ಕೆ ತಕ್ಕಂತೆ ಮರೆತು ಇಂತಹ ಬಣ್ಣನೆಯನ್ನು ಮಾಡಲಾಗಿತ್ತು. ರಾಜಕೀಯ ನೈತಿಕತೆ ಎಂಬುದು ಅವರ ನಾಯಕತ್ವದಲ್ಲಿ ತನ್ನ ತಳಮಟ್ಟವನ್ನು ಮುಟ್ಟಿದೆ.

ಸಾವಿರಾರು ಕೋಟಿ ರೂಪಾಯಿಗಳ ಮೌಲ್ಯದ ವಿವಿಧ ಸಚಿವಾಲಯಗಳು, ಇಲಾಖೆಗಳ ಮೂಲಕ ತಮ್ಮ ಸರ್ಕಾರ ನೀಡುತ್ತಿರುವ ಜಾಹಿರಾತುಗಳ ಕುರಿತು ಪ್ರಧಾನಿಗಳ ಮಾನಗೇಡಿ ಪ್ರತಿಪಾದನೆ ಅವರ ನಾಚಿಕೆಗೇಡಿತನದ ಪ್ರತೀಕವಾಗಿದೆ. ತಮ್ಮ ಸ್ಥಾನ ಅಲಂಕರಿಸಿದ ನಂತರ ಮೊಟ್ಟಮೊದಲ ಘೋಷಣೆಯಲ್ಲಿ ಮುಖ್ಯ ಚುನಾವಣಾ ಆಯುಕ್ತರು ತಮ್ಮ ಆತಂಕವನ್ನು ವ್ಯಕ್ತಪಡಿಸಿ ಅಂತಹ ಚಟುವಟಿಕೆಗಳಿಂದ ಸರ್ಕಾರ ನಿರ್ಬಂಧಿಸಿಕೊಳ್ಳ ಬೇಕೆಂದರು. ಈ ಕುರಿತು ವಾಜಪೇಯಿ ಪ್ರತಿಪಾದಿಸುತ್ತಿರುವುದೇನೆಂದರೆ ಕಾನೂನಾತ್ಮಕವಾಗಿ ಚುನಾವಣೆ ಘೋಷಣೆಯಾದ ನಂತರವೇ ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುವುದು. ಗಾಂಧಿ ಕೊಲೆ ಮೊಕದ್ದಮೆಯಲ್ಲೂ ಸಹಾ ಸಾವರ್‌ಕರ್ ಇಂತಹುದೇ ಕಾನೂನಾತ್ಮಕ ಅಂಶವನ್ನು ಪ್ರತಿಪಾದಿಸಿದ್ದರು.

ಲೋಕಸಭೆ ವಿಸರ್ಜನೆಗೆ ಶಿಫಾರಸ್ಸು ಮಾಡಲು ಕೇಂದ್ರ ಸಚಿವ ಸಂಪುಟ ನಿರ್ಧರಿಸಿದಾಗಲೇ ಚುನಾವಣೆ ನಡೆಯುತ್ತವೆ ಎಂಬುದು ಸರ್ವವೇದ್ಯ. ಕಾನೂನಾತ್ಮಕವಾಗಿ ದಿನಾಂಕ ನಿಗದಿಗೊಂಡಿಲ್ಲ ದಿದ್ದರೂ ದೇಶದಲ್ಲಿ ಈಗಾಗಲೇ ಚುನಾವಣಾ ಮನಸ್ಥಿತಿ ನಿರ್ಮಾಣಗೊಂಡಿದೆ. ಪರಿಣಾಮವಾಗಿ ಸಚಿವ ಸಂಪುಟ ತೀರ್ಮಾನದ ದಿನದಿಂದಲೇ ನೀತಿ ಸಂಹಿತೆ ಜಾರಿಗೆ ಬರಬೇಕು. ಆದರೆ ವಾಜಪೇಯಿ ಮತ್ತು ಕಂಪನಿಗೆ ಅಂತಹ ನೈತಿಕ ಹೊಣೆಗಾರಿಕೆ ಮಾತ್ರ ಇಲ್ಲವಾಗಿದೆ. ಲೂಟಿ ಮಾಡಲಿಕ್ಕಾಗಿ ಆಳ್ವಿಕೆ ನಡೆಸಿದ್ದಾರೆ, ಅದಕ್ಕಾಗಿ ಏನುಬೇಕಾದರೂ ಮಾಡಲು ತಯಾರಿದ್ದಾರೆ. ಈ ಪ್ರಕ್ರಿಯೆಯಲ್ಲಿ ಮತದಾರರನ್ನು ಓಲೈಸಿಕೊಳ್ಳಲು, ಅವರ ಬೆಂಬಲ ಪಡೆಯಲು ಬಣ್ಣಬಣ್ಣದ ಮೇಕಪ್ ಮಾಡಿಕೊಳ್ಳಲಿದ್ದಾರೆ. ಜನತೆ ಅರಿವಿಗೆ ಇದುವರೆಗೆ ಬಾರದಿದ್ದ ಸಚಿವಾಲಯ, ಇಲಾಖೆಗಳಿಂದೆಲ್ಲಾ 'ಭಾರತ ಪ್ರಕಾಶಿಸುತ್ತಿದೆ' ಎಂಬ ಪ್ರಚಾರವನ್ನು ಪ್ರಚುರಪಡಿಸಲು ಬಹುವರ್ಣೀಯ ಪೂರ್ಣಪುಟದ ಜಾಹೀರಾತು ನೀಡುತ್ತಿದ್ದಾರೆ.


ದೇಶದಲ್ಲೇನಾದರೂ 'ಹಿತಕರ ಭಾವನೆ' ಇದ್ದರೆ, ಅದು ಇಂತಹ ಸರ್ಕಾರದಿಂದ ಮುಕ್ತಿ ಪಡೆಯಲು ಇಷ್ಟು ಬೇಗ ಭಾರತದ ಜನತೆಗೆ ಅವಕಾಶ ಲಭ್ಯವಾಯಿತಲ್ಲಾ ಎಂಬುದರಿಂದಾಗಿ ಮಾತ್ರ. ಹೇಸಿಗೆ ಹುಟ್ಟಿಸುವಂತಾ ಅಬ್ಬರದ ಪ್ರಚಾರಕ್ಕಾಗಿ ಸರ್ಕಾರ ಖರ್ಚು ಮಾಡುತ್ತಿರುವ ಕೋಟ್ಯಾಂತರ ರೂಪಾಯಿಯನ್ನು ಹಸಿವಿನಿಂದ ಸಾಯುತ್ತಿರುವವರ ಜೀವ ಉಳಿಸಲು, ಗಂಜಿ ನೀಡಲು ಬಳಸಬಹುದಿತ್ತು. ಇಂತಹ ವಿಷಯಗಳ ಆಧಾರದಲ್ಲಿ ಜನ ಮತ ನೀಡಲಿದ್ದಾರೆಯೇ ಹೊರತು ಇವರು ಸೃಷ್ಟಿಸುತ್ತಿರುವ ಬಣ್ಣದ ಜಾಹಿರಾತಿನ ಭ್ರಮೆಗಳ ಮೇಲಲ್ಲ.

ಬ್ಲೀಚ್ ಬಿಡುಗಡೆಗೆ ವಿರೋಧ

ಎಂಟು ವರ್ಷಗಳ ಹಿಂದೆ ಪಶ್ಚಿಮ ಬಂಗಾಳದ ಪುರುಲಿಯ ಎಂಬ ಪ್ರದೇಶದಲ್ಲಿ ವಿಮಾನದಲ್ಲಿ ಬಂದು ಶಸ್ತ್ರಾಸ್ತ್ರ ಎಸೆದರೆಂಬ ಆರೋಪಕ್ಕೆ ಗುರಿಯಾಗಿ ಶಿಕ್ಷೆಗೆ ಒಳಗಾಗಿದ್ದ ಬ್ರಿಟಿಷ್ ರಾಷ್ಟ್ರೀಯ ಪೀಟರ್ ಬ್ಲೀಚ್ ಅವರಿಗೆ ಭಾರತದ ರಾಷ್ಟ್ರಪತಿ ಕ್ಷಮಾದಾನ ನೀಡಿ ಬಿಡುಗಡೆಗೊಳಿಸಲಾಗಿದೆ. ಈ ಬಿಡುಗಡೆಗೆ ವಿರುದ್ಧ ತೀವ್ರ ವಿರೋಧ ಕೇಳಿಬರುತ್ತಿದೆ.

ಹಿಂದೆ ಎರಡು ಬಾರಿ ಕ್ಷಮಾದಾನದ ಅರ್ಜಿಯನ್ನು ತಿರಸ್ಕರಿಸಲಾಗಿದ್ದು, ವಿಚಾರಣೆ ನಡೆಸಿದ ನಂತರ ಬ್ಲೀಚ್ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದರು. ಈ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಚುನಾಯಿತ ಎಡರಂಗ ಸರ್ಕಾರವನ್ನು ಕಿತ್ತೆಸೆಯಲು ಅನುಕೂಲ ವಾಗುವಂತೆ ಶಸ್ತ್ರಾಸ್ತ್ರಗಳನ್ನು ಬಳಸಿಕೊಳ್ಳ ಲಾಗುತ್ತಿತ್ತು ಎಂದು ಬ್ಲೀಚ್ ಹೇಳಿದ್ದನು.

ಭಯೋತ್ಪಾದಕತೆಯ ವಿರುದ್ಧ ಮೊಸಳೆ ಕಣ್ಣೀರು ಸುರಿಸುವ ಬಿಜೆಪಿ ಮತ್ತು ವಾಜಪೇಯಿ ಸರ್ಕಾರ, ನ್ಯಾಯಾಲಯಗಳಲ್ಲಿ ವಿಚಾರಣೆಗೆ ಒಳಗಾಗಿ, ಶಿಕ್ಷೆ ಅನುಭವಿಸುತ್ತಿದ್ದ ಅಂತಾರಾಷ್ಟ್ರೀಯ ಭಯೋತ್ಪಾದಕ ಪೀಟರ್ ಬ್ಲೀಚ್‌ನ್ನು ಬಿಡುಗಡೆಗೊಳಿಸಲು ರಾಷ್ಟ್ರಪತಿಗೆ ಶಿಫಾರಸು ಮಾಡಿರುವುದು ನಾಚಿಕೆಗೇಡಿನ ಸಂಗತಿ.



1995 ಡಿಸೆಂಬರ್ 17 ರಂದು ಪಶ್ಚಿಮ ಬಂಗಾಳದ ಪುರುಲಿಯ ಜಿಲ್ಲೆಯ ಬಾನ್ಸ್‌ಗರ್ ಎಂಬ ಹಳ್ಳಿಯಲ್ಲಿ ಎನ್-26 ಎಂಬ ವಿಮಾನದ ಮೂಲಕ ಶಸ್ತ್ರಗಳ ಪೆಟ್ಟಿಗೆಗಳನ್ನು ಎಸೆಯಲಾಗಿತ್ತು. ಈ ವಿಮಾನವನ್ನು ಅಟ್ಟಿಸಿ ಕೊಂಡು ಹೋದ ಭಾರತ ವಾಯುದಳವು ಮುಂಬಯಿಯಲ್ಲಿ ಕೆಳಕ್ಕೆ ಇಳಿಸುವಲ್ಲಿ ಯಶಸ್ವಿಯಾಯಿತು.

ಇದರಲ್ಲಿ ಪೀಟರ್ ಬ್ಲೀಚ್ ಅಲ್ಲದೆ 5 ಮಂದಿ ಲಾಟ್ವಿಯ ದೇಶದ ನಾಗರಿಕರು ಸಿಕ್ಕಿಬಿದ್ದಿದ್ದರು. ಆದರೆ, ಇದರ ಪ್ರಮುಖ ಆರೋಪಿ, ಕಿಮ್ ದಾವಿ ಇದುವರೆಗೂ ಸಿಕ್ಕದೆ ತಪ್ಪಿಸಿಕೊಂಡಿರುತ್ತಾನೆ. ಕಿಮ್ ದಾವಿಯನ್ನು ಬಂಧಿಸುವ ಮೊದಲೇ, ಬ್ಲೀಚನನ್ನು ಬಿಡುಗಡೆಗೊಳಿಸಿರುವುದು ವಿವಿಧ ವಲಯಗಳಲ್ಲಿ ಆತಂಕಕ್ಕೆ ಎಡೆಮಾಡಿಕೊಟ್ಟಿದೆ. ಹಲವಾರು ಸಂಘ ಸಂಸ್ಥೆಗಳು ರಾಜಕೀಯ ಪಕ್ಷಗಳು, ಅಂತಾರಾಷ್ಟ್ರೀಯ ಭಯೋತ್ಪಾದಕ ಬ್ಲೀಚ್‌ನ್ನು ಬಿಡುಗಡೆಗೊಳಿಸಿದ ವಾಜಪೇಯಿ ಸರ್ಕಾರದ ಕ್ರಮವನ್ನು ಖಂಡಿಸಿವೆ.

ಫೆಬ್ರವರಿ 24 ರ ಮುಷ್ಕರಕ್ಕೆ ದೇಶಾದ್ಯಂತ ವ್ಯಾಪಕ ಬೆಂಬಲ

ಫೆಬ್ರವರಿ 24 ರಂದು ನಡೆಯಲಿರುವ 'ಮುಷ್ಕರದ ಹಕ್ಕಿಗಾಗಿ ಮುಷ್ಕರ'ದಲ್ಲಿ ದೇಶಾದ್ಯಂತ ವಿವಿಧ ರಾಜ್ಯಗಳ ಸುಮಾರು 80 ಲಕ್ಷ ರಾಜ್ಯ ಸರ್ಕಾರಿ ನೌಕರರು ಮತ್ತು ಶಿಕ್ಷಕರು ಸಕ್ರಿಯವಾಗಿ ಪಾಲ್ಗೊಂಡು ಅತ್ಯಂತ ಯಶಸ್ವಿಗೊಳಿಸುವರೆಂದು ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಗೌರವ ಅಧ್ಯಕ್ಷರಾದ ಕಾಂ. ಎಂ.ಆರ್.ಅಪ್ಪನ್‌ರವರು ಫೆಬ್ರವರಿ 12 ರಂದು ಬೆಂಗಳೂರಿನಲ್ಲಿ ಐಕ್ಯರಂಗಕ್ಕೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು.

ಒಕ್ಕೂಟದ ಮುಂದಾಳುಗಳು ಹಲವಾರು ರಾಜ್ಯಗಳಿಗೆ ಭೇಟಿ ನೀಡಿ ನೌಕರರ ಜಂಟಿ ಸಮಾವೇಶಗಳನ್ನು ನಡೆಸಿದ್ದು, ಮುಷ್ಕರಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿರುವುದಾಗಿ ಅವರು ತಿಳಿಸಿದರು.

ಜಮ್ಮು-ಕಾಶ್ಮೀರ, ಪಂಜಾಬ್, ಹರಿಯಾಣ, ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತ್ರಿಪುರ, ಕೇರಳ, ಆಂಧ್ರಪ್ರದೇಶಗಳಲ್ಲಿ ಮುಷ್ಕರವು ಸಂಪೂರ್ಣವಾಗಿ ನಡೆಯುವುದಾಗಿ ಅಪ್ಪನ್ ಅಭಿಪ್ರಾಯಪಟ್ಟರು. ಕರ್ನಾಟಕ ದಲ್ಲಿಯೂ ಮುಷ್ಕರವನ್ನು ಯಶಸ್ವಿಗೊಳಿಸಲು ಪ್ರಯತ್ನಗಳನ್ನು ನಡೆಸಲಾಗುತ್ತಿದೆಯೆಂದು ತಿಳಿಸಿದರು.

ನಿರಂತರ ಹೋರಾಟಗಳ ಫಲವಾಗಿ ನೌಕರರು ಪಡೆದುಕೊಂಡಿರುವ ಹಲವಾರು ಸವಲತ್ತುಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಶ್ವಬ್ಯಾಂಕ್ ಅಣತಿಯಂತೆ ಕಡಿತಗೊಳಿಸುತ್ತಿರುವುದರಿಂದ ಸರ್ಕಾರಿ ನೌಕರರು ಹಾಗೂ ಒಟ್ಟಾರೆಯಾಗಿ ದುಡಿಯುವ ವರ್ಗ ಐಕ್ಯ ಹೋರಾಟವನ್ನು ನಡೆಸ ಬೇಕಾದ ಅನಿವಾರ್ಯತೆ ಒದಗಿಬಂದಿರುವುದಾಗಿ ಅವರು ತಿಳಿಸಿದರು. ಲೋಕಸಭೆಗೆ ಚುನಾವಣೆ ನಡೆಯಲಿರುವುದು ಯಾವುದೇ ರೀತಿಯಲ್ಲಿ ಈ ಮುಷ್ಕರಕ್ಕೆ ಬಾಧಕವಾಗುವುದಿಲ್ಲ. ಫೆಬ್ರವರಿ 24 ರ ಮುಷ್ಕರವು ಮುಂಬರುವ ಚುನಾವಣೆಗಳಲ್ಲಿ ಒಂದು ಪ್ರಮುಖ ಪ್ರಶ್ನೆಯಾಗಿ ಪ್ರಭಾವ ಬೀರಲಿದೆಯೆಂದು ಹೇಳಿದರು.

ಮುಷ್ಕರದ ಹಕ್ಕಿನ ಕುರಿತಾದಂತೆ, ಅಟಾರ್ನಿ ಜನರಲ್ ಮತ್ತು ಕೇಂದ್ರದ ಮಂತ್ರಿಗಳು, ಮುಷ್ಕರದ ಹಕ್ಕಿನ ಪರವಾಗಿ ಪ್ರತಿಪಾದಿಸಿದರೂ, ಕೇಂದ್ರ ಸರ್ಕಾರದ ಕ್ರಮಗಳೇನು ಎಂದು ಪ್ರಶ್ನಿಸಲಾಗಿ ಅವರು ಭಾರತ ಸರ್ಕಾರವು ಐಎಲ್‌ಓ ಗೆ ಬರೆದ ಪತ್ರದ ಅಂಶಗಳನ್ನೇ ಉಲ್ಲೇಖಿಸುತ್ತಾ, ಕೇಂದ್ರ ಸರ್ಕಾರವು ತಮಿಳುನಾಡು ರಾಜ್ಯ ಸರ್ಕಾರದ ಕ್ರಮವನ್ನೇ ಸಮರ್ಥಿಸಿ ಪತ್ರ ಬರೆದಿರುವುದು, ಮೂಲಭೂತ ಹಕ್ಕುಗಳ ಬಗೆಗಿನ ಕಡು ವಿರೋಧವನ್ನೇ ತೋರಿಸಿದೆಯೆಂದು ಹೇಳಿದರು.

ಫೆಬ್ರವರಿ 24 ರಂದು ನಡೆಯಲಿರುವ ಐತಿಹಾಸಿಕ ಮುಷ್ಕರದಲ್ಲಿ ದೇಶದ ಇಡೀ ಕಾರ್ಮಿಕ ವರ್ಗ ಪಾಲ್ಗೊಂಡು ಅಭೂತಪೂರ್ವವಾಗಿ ಯಶಸ್ವಿಗೊಳಿಸುವರೆಂದು ಎಂ.ಆರ್.ಅಪ್ಪನ್ ಆತ್ಮವಿಶ್ವಾಸ ವ್ಯಕ್ತಪಡಿಸಿದರು.

ಮುಷ್ಕರ ಯಶಸ್ವಿಗೊಳಿಸಲು ಕಾರ್ಮಿಕ ಸಂಘಗಳ ಜಂಟಿ ಸಮಿತಿ (ಜೆಸಿಟಿಯು) ಕರೆ

ವಿವಿಧ ಕಾರ್ಮಿಕ ಸಂಘಟನೆಗಳ ಆಶ್ರಯದಲ್ಲಿ ನಡೆದ ಸಮಾವೇಶದಲ್ಲಿ ಫೆ. 24 ರ ಮುಷ್ಕರವನ್ನು ಯಶಸ್ವಿಗೊಳಿಸಲು ಒಮ್ಮತದ ನಿರ್ಧಾರಕ್ಕೆ ಬಂದವು.

ಸಿಐಟಿಯು ವಿನ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್ ರವರು ಸಮಾವೇಶದಲ್ಲಿ ಮಾತನಾಡುತ್ತಾ ಲಕ್ಷಗಟ್ಟಲೆ ಜನರನ್ನು ಕೆಲಸದಿಂದ ತೆಗೆದುಹಾಕಿದಾಗ ಸುಪ್ರೀಂಕೋರ್ಟ್ ಯಾವುದೇ ನ್ಯಾಯ ಇಲ್ಲದಂತಹ ತೀರ್ಪು ಕೊಟ್ಟಿದೆ, ಹೀಗೆ ಮುಂದುವರೆದರೆ ಯಾವುದೇ ಕಾರ್ಮಿಕರಿಗೆ ಮುಷ್ಕರದ ಹಕ್ಕಿಲ್ಲ ಎಂದು ಹೇಳಬಹುದುಎನ್ನುತ್ತಾ ಕಾನೂನು ಬಾಹಿರವಾದ ಕ್ರಮಗಳನ್ನು ಕಾನೂನು ಎಂದು ಹೇಳುವುದೇ ಸರ್ವಾಧಿಕಾರದ ಪ್ರವೃತ್ತಿ. ಇದನ್ನು ಕಾರ್ಮಿಕರೆಲ್ಲಾ ಒಟ್ಟಾಗಿ ಹೋರಾಟ ಮಾಡಿದರೆ ಮಾತ್ರ ಸೋಲಿಸಲು ಸಾಧ್ಯ ಎಂದರು.

ಸುಳ್ಳುಗಳು, ಹಸಿ ಸುಳ್ಳುಗಳು ಮತ್ತು ಅಂಕಿ-ಅಂಶಗಳು

ಸೀತಾರಾಂ ಯೆಚೂರಿ

ಹಳೆಯದೊಂದು ಹಳೆಯ ಇಂಗ್ಲೀಷ್ ಗಾದೆಮಾತು, ಅಂಕಿ-ಸಂಖ್ಯೆಗಳನ್ನು ಹೇಗೆ ಹಸಿಸುಳ್ಳುಗಳನ್ನು ಮೀರಿಸುವ ಸುಳ್ಳು ಹೇಳಲು ಬಳಸಬಹುದು ಎಂಬುದನ್ನು ಸೂಚಿಸುವಂತದ್ದು. ಈ ಗಾದೆ ನಿಜವಿದ್ದರೆ, ಅದು ಫೆಬ್ರವರಿ 9, 2004 ರಂದು ಕೇಂದ್ರೀಯ ಅಂಕಿ-ಸಂಖ್ಯೆ ಸಂಘಟನೆ (ಸಿಎಸ್‌ಓ) ಬಿಡುಗಡೆ ಮಾಡಿದ ಅಂಕಿ-ಸಂಖ್ಯೆಗಳಿಗೂ ಅನ್ವಯವಾಗಬೇಕು. ಸಿಎಸ್‌ಓ ಮಾಡಿರುವ 2003-04 ರ ರಾಷ್ಟ್ರೀಯ ಆದಾಯದ 'ಮುಂಗಡ ಅಂದಾಜು'ಗಳು ನಿಜವಾದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಶೇ 8.1 ದರದಲ್ಲಿ ಬೆಳೆದಿದೆ ಎಂದಿವೆ. ಇದು ಬಿಜೆಪಿ ನೇತೃತ್ವದ ಎನ್‌ಡಿಎ ಯ 'ಭಾರತ ಪ್ರಕಾಶಿಸುತ್ತಿದೆ' ಮತ್ತು 'ಒಳ್ಳೆಯ ಅನಿಸಿಕೆ' ಯ ಪ್ರಚಾರಕ್ಕೆ ಅನುಕೂಲ ಮಾಡಿಕೊಡುವಂತದ್ದು.

ಈ ಅಂಕಿ-ಸಂಖ್ಯೆಗಳ ನಿಜ ಸ್ವರೂಪವನ್ನು ಪರಿಶೀಲಿಸುವ ಮೊದಲು ಇತ್ತೀಚಿನ ವರ್ಷಗಳಲ್ಲಿ ಸಿಎಸ್‌ಓ ಮತ್ತು ಇತರ ಸಂಘಟನೆಗಳು ನೀಡುತ್ತಿರುವ ಅಂಕಿ-ಸಂಖ್ಯೆಗಳ ಗುಣಮಟ್ಟದ ಬಗ್ಗೆ ಟಿಪ್ಪಣಿ ಮಾಡುವುದು ಅಗತ್ಯ.

ಇದನ್ನು ನೋಡಿ - ಫೆಬ್ರವರಿ 2003 ರಲ್ಲಿ ಸಿಎಸ್‌ಓ ನ 'ಮುಂಗಡ ಅಂದಾಜುಗಳ' ಪ್ರಕಾರ ಆರ್ಥಿಕ 2002-03 ರಲ್ಲಿ ಶೇ 4.4 ಷ್ಟು ವಿಸ್ತರಿಸಿತು. ಜೂನ್ 2003 ರ 'ಪರಿಷ್ಕೃತ ಅಂದಾಜು' ಇದನ್ನು ಶೇ 4.3 ಕ್ಕೆ ಇಳಿಸಿತು. ಹಣಕಾಸು ವರ್ಷ ಮುಗಿಯುವ ವೇಳೆಗೆ, ಸಿಎಸ್‌ಓ ಜನವರಿ 2004ರ 'ಶೀಘ್ರ ಅಂದಾಜ' ನಲ್ಲಿ ಈ ಬೆಳವಣಿಗೆ ದರವನ್ನು ಶೇ 4.1 ಕ್ಕಿಳಿಸಿತು. ಅಂದರೆ ಫೆಬ್ರವರಿ 2003 ರಿಂದ ಜನರಿ 2004 ರ ನಡುವಿನ 'ಅಂದಾಜು'ಗಳಲ್ಲಿ ದೇಶದ ಆರ್ಥಿಕದ ಪ್ರಮಾಣ 13,000 ಕೋಟಿ ರೂ.ಗಳಷ್ಟು ಇಳಿಯಿತು! ಇನ್ನು 2003-04 ರ ಅಂಕಿ-ಸಂಖ್ಯೆಗಳಲ್ಲಿ ಎಷ್ಟು ಇಳಿಕೆ ಬರಬಹುದು ಎಂಬುದನ್ನು ಸಮಯವೇ ಬಹಿರಂಗಪಡಿಸಬೇಕು. ಆದರೆ ಈ ನಡುವೆ ಚುನಾವಣೆಗಳು ಬಂದು ಹೋಗಿರುತ್ತವೆ, ಆಳುವ ಸರ್ಕಾರಕ್ಕೆ ಸ್ಪಷ್ಟ ಪ್ರಯೋಜನ



ಪಡೆಯಲು ಅವಕಾಶವಾಗಿರುತ್ತದೆ! 'ಒಳ್ಳೆಯ ಅನಿಸಿಕೆ' ಒಂದು ಸುಳ್ಳಾದರೆ 'ಭಾರತ ಪ್ರಕಾಶಿಸುತ್ತಿದೆ' ಎಂಬುದು ಹಸಿಸುಳ್ಳು ಹಾಗೂ ಅದನ್ನು ಮೀರಿರುವಂತಹವು' ಈ ಅಂಕಿ-ಸಂಖ್ಯೆಗಳು!

ಅಂಕಿ-ಸಂಖ್ಯೆಗಳ ಕೈಚಳಕ

2002-03 ರಲ್ಲಿ ಆರ್ಥಿಕದ ವಿಸ್ತರಣೆಯ ದರ ಇಳಿದರೆ 2003-04 ರ ಬೆಳವಣಿಗೆ ದರ ತಂತಾನೆ ಏರುತ್ತದೆ. ಏಕೆಂದರೆ ಈ ದರವನ್ನು ಹಿಂದಿನವರ್ಷದ ದರದ ಆಧಾರದ ಮೇಲೆಯೇ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಈ ವರ್ಷದ ಬೆಳವಣಿಗೆ ದರಗಳು ಗಮನಾರ್ಹವಾಗಿರದಿದ್ದರೂ, ಹಿಂದಿನ ವರ್ಷದ ದರಗಳನ್ನು ಇಳಿಸಿ ಅದನ್ನು ಗಮನಾರ್ಹಗೊಳಿಸಬಹುದು. ಆದ್ದರಿಂದ ಪ್ರಸಕ್ತ ವರ್ಷಗಳ ಬೆಳವಣಿಗೆ ದರಗಳನ್ನು ಪರಿಶೀಲಿಸುವಾಗ ಈ ಅಂಕಿ-ಸಂಖ್ಯೆಗಳ ಕೈ ಚಳಕವನ್ನು ಗಮನದಲ್ಲಿಡಬೇಕು.

ಕೃಷಿ ವಲಯದಲ್ಲಿ ಅಂತಹ ಸಂಖ್ಯಾ ಕಸರತ್ತು, ಅದರಿಂದ ಉಂಟಾಗುವ ಬೆಳವಣಿಗೆಯ ಭ್ರಮೆಗಳು ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಕಳೆದ ವರ್ಷದ ವಿನಾಶಕಾರಿ ಬರಗಾಲದ ನಂತರ ಈ ವರ್ಷ ಬಂದ ಉತ್ತಮ ಮಳೆಯಿಂದಾಗಿ ಕೃಷಿ ವಲಯ ಸುಧಾರಿಸಿದೆ. ಆದ್ದರಿಂದ ಕೃಷಿ ವಲಯದ ದರಗಳ ಹೆಚ್ಚಳಕ್ಕೆ ಇದೇ ಕಾರಣ. ಕೃಷಿ ವಲಯದ ಅಂಕಿ-ಸಂಖ್ಯೆಗಳಂತೂ ಇನ್ನಷ್ಟು ಗೊಂದಲಕಾರಿ. ಈ ಕೆಳಗಿನವುಗಳನ್ನು ನೋಡಿ -


2002-03 ರಲ್ಲಿ ಆಹಾರ ಧಾನ್ಯ ಉತ್ಪಾದನೆ ಶೇ 13.89 ರಷ್ಟು ಇಳಿಯಿತು (212.03 ಮಿಲಿಯ ಟನ್‌ನಿಂದ 182.57 ಮಿಲಿಯ ಟನ್‌ಗಿಳಿಯಿತು) ಈ ಇಳಿಕೆ ಎಣ್ಣೆ ಬೀಜಗಳಲ್ಲಿ ಶೇ 24.28 ಇಳಿಕೆ (20.8 ಮಿಲಿಯ ಟನ್‌ನಿಂದ 15.75 ಮಿಲಿಯ ಟನ್), ಹತ್ತಿಯಲ್ಲಿ ಶೇ 7.73 ಇಳಿಕೆ (10.09 ಮಿಲಿಯ ಬೇಲ್‌ನಿಂದ 9.31 ಮಿಲಿಯ ಬೇಲ್‌ಗೆ ಇಳಿಕೆ), ಸಣಬು ಮತ್ತು ಮೇಸ್ತದಲ್ಲಿ ಶೇ 7.39 ಇಳಿಕೆ (11.64 ಮಿಲಿಯ ಬೇಲ್‌ನಿಂದ 10.78 ಮಿಲಿಯ ಬೇಲ್) ಹಾಗೂ ಕಬ್ಬು ಉತ್ಪಾದನೆಯಲ್ಲಿ ಶೇ 7.18 ಇಳಿಕೆ (300.10 ಮಿಲಿಯ ಟನ್‌ನಿಂದ 278.56 ಮಿಲಿಯ ಟನ್)

ಸರಿಯಾದ ಅಂದಾಜು ಅಲ್ಲ

ಆದರೆ, ಇಂತಹ ಪ್ರಮಾಣದ ಇಳಿಕೆಗಳಿದ್ದಾಗ್ಯೂ ಜನವರಿ 30, 2004 ರಂದು ಬಿಡುಗಡೆ ಮಾಡಿದ ಸಿಎಸ್‌ಓ ದ 2002-03 ರ ರಾಷ್ಟ್ರೀಯ ಆದಾಯ 'ಶೀಘ್ರ ಅಂದಾಜು' ಗಳ ಪ್ರಕಾರ ಕೃಷಿ ವಲಯದಲ್ಲಿ ಇಳಿಕೆಯಾದದ್ದು ಶೇ 5.2 ಮಾತ್ರ! ಜೂನ್ 30, 2003 ರ 'ಪರಿಷ್ಕೃತ ಅಂದಾಜು' ಪ್ರಕಾರ ಇಳಿಕೆ ಶೇ 3.2 ಇತ್ತು. ಈ ಶೇ 5.2 ಇಳಿಕೆ ಕೂಡಾ ಆಹಾರ ಧಾನ್ಯಗಳು ಮತ್ತು ಎಣ್ಣೆ ಬೀಜಗಳ ಉತ್ಪಾದನೆಯಲ್ಲಿ ಕಂಡಿರುವ ಶೇ 14.28 ಇಳಿಕೆಯ ಹಿನ್ನೆಲೆಯಲ್ಲಿ ನೋಡಿದಾಗ ಸರಿಯಾದ ಅಂದಾಜು ಅಲ್ಲ ಎಂದು ಕಾಣುತ್ತದೆ.

ಒಟ್ಟಾರೆ ಕೃಷಿ ಬೆಳವಣಿಗೆಯ ದರಗಳಿಗೂ ಪಾರಂಪರಿಕ ಕೃಷಿ ಬೆಳೆಗಳ ಉತ್ಪಾದನೆಯ ನಿಜ ಪರಿಸ್ಥಿತಿಗೂ ಸಂಬಂಧವೇನೂ ಇಲ್ಲದಂತೆ ಕಾಣಲು ಒಂದು ಕಾರಣವೆಂದರೆ ಕೃಷಿ ವಲಯದಲ್ಲಿ ಬೆಳೆಗಳು ಮಾತ್ರವಲ್ಲ ಹಾಲು, ಪೌಲ್ಟ್ರಿ, ಮಾಂಸ ಇತ್ಯಾದಿ ಉಪಗುಂಪುಗಳೂ ಸೇರುತ್ತವೆ. ಇವುಗಳ ಪಾಲೇ ಒಟ್ಟು ಕೃಷಿ ಜಿಡಿಪಿಯಲ್ಲಿ ಶೇ 25 ಇರುತ್ತದೆ. ಶೇ 19 ತೋಟಗಾರಿಕೆಯಿಂದ, ಇನ್ನು ಸ್ವಲ್ಪ ಭಾಗ ಅರಣ್ಯಗಾರಿಕೆ, ಮೀನುಗಾರಿಕೆ ಇತ್ಯಾದಿಗಳಿಂದ ಬರುತ್ತದೆ.

ಆಹಾರಧಾನ್ಯ ಉತ್ಪಾದನೆ ಶೇ 13.9 ರಷ್ಟು ಇಳಿದರೂ ಕೃಷಿ ವಲಯದಲ್ಲಿ ಇಳಿಕೆ ಕೇವಲ ಶೇ 5.2 ಎಂಬ ಸಿಎಸ್‌ಓ ಅಂದಾಜು ಬರಗಾಲ ಹಣ್ಣು, ತರಕಾರಿ, ಹಾಲು ಅಥವಾ ಪಶುಸಂಪತ್ತಿನ ಉತ್ಪಾದನೆಯನ್ನು ತಟ್ಟಲಿಲ್ಲ ಎಂಬ ಅವಾಸ್ತವ ಭಾವನೆಯನ್ನು ಆಧರಿಸಿದೆ. ಬರಗಾಲ ಪರಿಸ್ಥಿತಿಯಿಂದಾಗಿ ಜಾನುವಾರುಗಳು ಸತ್ತ ಹಲವಾರು ವರದಿಗಳಿದ್ದರೂ ಈ ರೀತಿ ಭಾವಿಸಲಾಗಿದೆ. ಹಸಿವಿನಿಂದ ಮನುಷ್ಯರು ಸಾಯುತ್ತಿರುವಾಗ, ಜಾನುವಾರುಗಳ ಗತಿಯೇನಾಗುತ್ತದೆ? ಸಿಎಸ್‌ಓ ನ ಯೋಜನೆ ಮಾತ್ರ ಬೇರೆಯೇ ಇದ್ದಂತಿದೆ! 'ಒಳ್ಳೆಯ ಅನಿಸಿಕೆ' ಅಂಶ ಎಂಬ ಭ್ರಮೆ! ಭಾರತದ ಮಾಹಿತಿ ಸಂಗ್ರಹ ಸಂಪನ್ಮೂಲಗಳು ಹಾಗೂ ಸಂಘಟನೆ ಜಗತ್ತಿನಲ್ಲೇ ಅತ್ಯುತ್ತಮವಾಗಿದ್ದರೂ ರಾಜಕೀಯ ಹಸ್ತಕ್ಷೇಪದಿಂದಾಗಿ ಈ ಸಂಸ್ಥೆಗಳಲ್ಲಿ ತ್ವರಿತವಾದ ಸವೆತ ಕಾಣಬರುತ್ತಿದೆ!



ಈಗಲೂ ವರುಣದೇವನೇ ಗತಿ

ಅಂಕಿ-ಸಂಖ್ಯೆಗಳ ಗುಣಮಟ್ಟದ ಬಗ್ಗೆ ಇಷ್ಟು ಹೇಳಿದ ಮೇಲೆ ಸಿಎಸ್‌ಓ 2003-04 ರಲ್ಲಿ ಬೆಳವಣಿಗೆ ದರ ಶೇ 8.1 (ನಿರ್ದಿಷ್ಟವಾಗಿ ಹೇಳುವುದಾದರೆ 8.05) ಎಂದು ಭವಿಷ್ಯವಾಣಿ ನುಡಿದ 'ಮುಂಗಡ ಅಂದಾಜು'ಗಳನ್ನು ವಿಶ್ಲೇಷಿಸೋಣ. ಇಂತಹ ಒಂದು ಅಂದಾಜಿನ ಆಧಾರ ಸಂಪೂರ್ಣವಾಗಿ ಈ ವರ್ಷದ ಒಳ್ಳೆಯ ಮಳೆಯಿಂದಾಗಿ ಕೃಷಿಯಲ್ಲಾಗಿರುವ ಪುನರುಜ್ಜೀವನವಷ್ಟೆ. 'ಭಾರತ ಪ್ರಕಾಶಿಸುತ್ತಿದೆ', 'ಒಳ್ಳೆಯ ಅನ್ನಿಸಿಕೆ'ಗಳೇನೇ ಇದ್ದರೂ ಈಗಲೂ ಭಾರತದ ಬೆಳವಣಿಗೆಯ ರೇಖೆಯನ್ನು ನಿರ್ಧರಿಸುವಾತ 'ಮಳೆ ದೇವರೇ'! ಕಳೆದ ವರ್ಷದ ಶೇ 5.2 ಇಳಿಕೆಗೆ ಹೋಲಿಸಿದರೆ ಈ ವರ್ಷ ಕೃಷಿ ಶೇ 9.12 ಬೆಳೆದಿದೆ ಎಂದು ಅಂದಾಜಿಸಲಾಗಿದೆ. 2001-02 ರಲ್ಲಿ ಕೃಷಿ ಬೆಳವಣಿಗೆ ದರ ಶೇ 6.5 ಇತ್ತು ಎಂಬುದನ್ನು ನೆನಪಿಸಿಕೊಳ್ಳಿ. ಆ ಮಟ್ಟಗಳಿಗೆ ಹೋಲಿಸಿದರೆ ಈಗ ಆಗಿರುವ ಬೆಳವಣಿಗೆಯಲ್ಲಿ ಕಣ್ಣೆಳೆಯುವಂತದ್ದೇನಿಲ್ಲ. ಆಹಾರ ಧಾನ್ಯಗಳ ಉತ್ಪಾದನೆ ಈಗಲಾದರೂ 2001-02 ಮಟ್ಟ ತಲುಪಿದೆಯೇ ಎಂಬುದು ವಿವರವಾದ ತಖ್ತೆಗಳನ್ನು ಪರೀಕ್ಷಿಸಿದ ಮೇಲಷ್ಟೇ ಹೇಳಲು ಸಾಧ್ಯ.

ಕೈಗಾರಿಕಾ ಬೆಳವಣಿಗೆ ಸಿಎಸ್‌ಓ ಪ್ರಕಾರ ಶೇ 6.48 ಇತ್ತು. ಕಳೆದ ವರ್ಷ ಇದು ಶೇ. 6.44 ಇತ್ತು. ಉದ್ದಿಮೆಗಳ ನೇತಾರರು ವಾಜಪೇಯಿ ಸರ್ಕಾರದ ಹೊಗಳು ಭಟ್ಟಂಗಿಗಳಂತೆ ವರ್ತಿಸಿದರೂ ಈ ವರ್ಷದ ಬೆಳವಣಿಗೆ ದರ ಕಳೆದ ವರ್ಷಕ್ಕಿಂತ ಶೇ. 0.04 ಹೆಚ್ಚು! ಈ ಭಾವೋನ್ಮಾದದ ಹಿಂದಿರುವುದು ಇಷ್ಟೇ!

ಸೇವಾ ವಲಯ ಶೇ 8.44 ದರದಲ್ಲಿ ಬೆಳೆದಿದೆಯಂತೆ. ಕಳೆದ ವರ್ಷ ಇದು ಶೇ 7.14 ಇತ್ತು. ಇದರಲ್ಲಿಯೂ ಗಮನಾರ್ಹವೆನಿಸುವಂತದ್ದೇನಿಲ್ಲ. ಒಂದು ಮಹತ್ವದ ಸಂಗತಿಯಿದೆ. ಈ ವಲಯದೊಳಗೆ ಬೆಳವಣಿಗೆ ಕಂಡು ಬಂದಿರುವುದು ವ್ಯಾಪಾರ, ಹೋಟೆಲ್ ಮತ್ತು ಸಾರಿಗೆ ವಲಯದಲ್ಲಿ ಮಾತ್ರ. ಉಳಿದೆಲ್ಲಾ ಕಡೆ ಒಂದೋ ಇಳಿಕೆಯಾಗಿದೆ, ಇಲ್ಲವೇ ಸ್ಥಗಿತತೆ ಕಂಡಿದೆ.

ಸೆಪ್ಟೆಂಬರ್ 11, 2001 ರ ನಂತರ ಇದ್ದಕ್ಕಿದ್ದಂತೆ ಕುಸಿದ ಪ್ರವಾಸೋದ್ಯಮ ಮತ್ತು ಪ್ರಯಾಣ ಈಗ ಚೇತರಿಸಿಕೊಳ್ಳುತ್ತಿದೆಯೆಂಬುದು ಸ್ಪಷ್ಟ. ಈ ಚೇತರಿಕೆ ವಾಜಪೇಯಿ ಸರ್ಕಾರದಿಂದಾಗಿಯೇನೂ ಅಲ್ಲ. ಅಂದರೆ ಕೃಷಿ ವಲಯದಲ್ಲಿ 'ಮಳೆದೇವರು' ನಮ್ಮ ಆರ್ಥಿಕವನ್ನು ಬೆಳೆಸಿದರೆ, ಪ್ರವಾಸೋದ್ಯಮ ಮತ್ತು ಸಂಪರ್ಕ ಕ್ಷೇತ್ರದಲ್ಲಿ ಚೇತರಿಕೆಯಾಗಿರುವುದು ಅಂತರಾಷ್ಟ್ರೀಯ ಸನ್ನಿವೇಶದಿಂದಾಗಿ. ಹೀಗೆ ಇವೆರಡು ಬೆಳವಣಿಗೆಗಳಿಗೂ ಸರ್ಕಾರದ ನೀತಿಗಳಿಗೂ, ಕೆಲಸಗಳಿಗೂ ಏನೇನೂ ಸಂಬಂಧವಿಲ್ಲ.ಸರ್ಕಾರದ ನೀತಿಗಳು ಭಿನ್ನವಾಗಿದ್ದಿದ್ದರೆ, ಮತಿಹೀನ ಉದಾರೀಕರಣವನ್ನು, ಎಚ್ಚರಗೇಡಿ ಖಾಸಗೀಕರಣವನ್ನು ಅನುಸರಿಸದೇ ಇರುತ್ತಿದ್ದರೆ ಒಂದು ಉತ್ತಮ ಬೆಳವಣಿಗೆಯ ಸಾಧ್ಯತೆಗಳು ಖಂಡಿತಾಇರುತ್ತಿದ್ದವು.

ಮೇಳಗಾನ ನೆರವಾಗದು

ಈ ಸರ್ಕಾರ ಏನೇನೋ ಅಂಕಿ-ಸಂಖ್ಯೆಗಳ ಪ್ರದರ್ಶನ ನಡೆಸಲಿ, ನಮ್ಮ ದೇಶದ ಆರ್ಥಿಕದ ಮೂಲ ಅಂಶಗಳು ಇನ್ನೂ ಆತಂಕವುಂಟು ಮಾಡುವ ರೀತಿಯಲ್ಲೇ ಇವೆ. ಇದು ನಮ್ಮ ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹಾಕಿದೆ. ಉಲ್ಬಣಿಸುತ್ತಿರುವ ನಿರುದ್ಯೋಗ, ಹಸಿವಿನಿಂದ ಸಾವುಗಳು, ಹತಾಶ ಆತ್ಮಹತ್ಯೆಗಳು ಮತ್ತು ದೈನಂದಿನ ಸಾಮಗ್ರಿಗಳ ಏರುತ್ತಿರುವ ಬೆಲೆಗಳು ಮುಂದಿನ ಚುನಾವಣೆಗಳಲ್ಲಿ ಜನರು ಮತ ಹಾಕುವುದು ಬದುಕಿನ ಈ ಮೂಲ ಪ್ರಶ್ನೆಗಳ ಮೇಲೆ. ಈ ವಿಷಯದಲ್ಲಿ ಎಷ್ಟೇ ಮೇಳಗಾನ ನಡೆಸಿದರೂ, ಭಾವೋನ್ಮಾದ ಎಬ್ಬಿಸಿದರೂ ಅವು ಸರ್ಕಾರದ ನೆರವಿಗೆ ಬರುವುದಿಲ್ಲ.

ವಾಜಪೇಯಿಯವರ 'ಭಾರತ ಪ್ರಕಾಶಿಸುತ್ತಿದೆ' ನಿಜ ಭಾರತ ಸಂಕಟ ಪಡುತ್ತಿದೆ

ಮಾಧ್ಯಮ ಆಳುವ ಪಕ್ಷ ಮತ್ತು ಅದರ ಬಾಲಬಡುಕರ 'ಒಳ್ಳೆಯ ಅನಿಸಿಕೆ', 'ಮಹಾನ್ ಅನಿಸಿಕೆ'ಯ ವರದಿಗಳಿಂದ ತುಂಬಿದೆ. ಶೇರು ಮಾರುಕಟ್ಟೆ ತೇಜಿಯಲ್ಲಿದೆ, ವಿದೇಶಿ ವಿನಿಮಯ ಭಂಡಾರ ತುಂಬಿದೆ, ಧಾನ್ಯ ಭಂಡಾರ ಉಳುಕುತ್ತಿದೆ; ಆಸ್ಟ್ರೇಲಿಯಾದಲ್ಲಿ ಭಾರತೀಯ ಕ್ರಿಕೆಟಿಗರು ಉತ್ತಮ ಪ್ರದರ್ಶನ ನೀಡಿದ್ದಾರೆ; ವಾಜಪೇಯಿ, ಮುಷರ್ರಫ್ ಮಾತುಕತೆ ನಡೆದಿದೆ -ಒಟ್ಟಿನಲ್ಲಿ ವಾಜಪೇಯಿ ಆಡಳಿತದಲ್ಲಿ 'ಭಾರತ ಪ್ರಕಾಶಿಸುತ್ತಿದೆ'!. ಆದರೆ.....

ಬಹುಶಃ ಭಾರತ ಮುಂದೆ ಇವರ ಮಟ್ಟಿಗೆ ರ್ಮಿಕರ, ಜನಸಾಮನ್ಯರ ಹಿತವನ್ನು ಬಲಿಗೊಟ್ಟು ಪಾರ ಲಾಭ ಗಿಟ್ಟಿಸುತ್ತಿರುವ ದೊಡ್ಡ ದೊಡ್ಡ ಂಪನಿಗಳವರು ಇರಬಹುದು, ದೇಶದಲ್ಲಿ ಂದೆಂದೂ ಕಾಣದ ರೀತಿಯಲ್ಲಿ ರಾಜಕೀಯ ಂಗವನ್ನು ಪ್ರವೇಶಿಸಿರುವ ಮಿನಲ್‌ಗಳಿರಬಹುದು, ಭ್ರಷ್ಟಾಚಾರ ಎಂಬದು ೀವನಶೈಲಿಯೇ ಆಗಿಬಿಟ್ಟಿರಬಹುದು ಅಥವಾ ಂದೆ ಮತ್ತು ಈಗಲೂ ಅವರ ಸಹದ್ಯೋಗಿಗಳು, ೆಳೆಯರಾಗಿರುವ ಅಭೂತಪೂರ್ವ ಗರಣಕೋರರು ಇರಬಹುದು. ಏಕೆಂದರೆ ದ್ಯಕ್ಕಂತೂ ಭಾರತದಲ್ಲಿ ಪ್ರಕಾಶಿಸುತ್ತಿರುವವರು ವರು ಮಾತ್ರ.

ಏಕೆಂದರೆ ನಿಜವಾದ ಭಾರತವನ್ನು ಪ್ರತಿನಿಧಿಸುವ ಕೋಟಿಗಟ್ಟಲೆ ಶ್ರಮಜೀವಿಗಳು, ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ, ನಗರಗಳಲ್ಲಿ ತಮ್ಮ ಬೆವರು ಸುರಿಸುತ್ತಾ ದೇಶದ ಆರ್ಥಿಕವನ್ನು ಕಟ್ಟುತ್ತಿರುವವರು, ಅಭಿವೃದ್ಧಿಗೆ ಕೊಡುಗೆ ನೀಡುತ್ತಿರುವವರು ಇವರಂತೂ ಖಂಡಿತಾ ಪ್ರಕಾಶಿಸುತ್ತಿಲ್ಲ.

ಪ್ರಕಾಶಿಸುತ್ತಿರುವುದೇನು?

ತಾನು ಬದುಕುಳಿಯಲು ತನ್ನ ಹಸುಳೆಯನ್ನು 10 ರೂಪಾಯಿಗೆ ಮಾರಿದ ಒರಿಸ್ಸಾದ ತಾಯಿಗೆ, ದಿಲ್ಲಿಯ ರೈಲ್ವೆ ಪ್ಲಾಟ್‌ಫಾರಂಗಳಲ್ಲಿ, ಕಾಲುದಾರಿಗಳಲ್ಲಿ ಕೊರೆಯುವ ಚಳಿಯಿಂದ ತಪ್ಪಿಸಿಕೊಳ್ಳಲು ಮಾದಕ ದ್ರವ್ಯ ಸೇವಿಸುವ ಲಕ್ಷಾಂತರ ಆಶ್ರಯಹೀನ ಮಹಿಳೆಯರಿಗೆ, ಮಕ್ಕಳಿಗೆ, ಖಾಸಗಿ ಲೇವಾದೇವಿಗಾರರಿಂದ ಪಡೆದ ಸಣ್ಣ ಸಾಲಗಳನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ಆಂಧ್ರಪ್ರದೇಶದ ರೈತ ಮಕ್ಕಳಿಗೆ, ತಮ್ಮ ಹಿರಿಯರು ಮಾಡಿದ ಎಂದೂ ತೀರದ ಸಾಲಕ್ಕಾಗಿ ದಿನಕ್ಕೆ 10 ಗಂಟೆಗೂ ಹೆಚ್ಚು ವರ್ಷಗಟ್ಟಲೆ ದುಡಿಯಬೇಕಾದ ಶಿವಕಾಶಿಯ ಜೀತದ ಮಕ್ಕಳಿಗೆ ಪ್ರಕಾಶಿಸುತ್ತಿರುವುದೇನು?

ತಮ್ಮ ಬದುಕಿನ ಏಕಮಾತ್ರ ಆಧಾರವನ್ನು, ತಮ್ಮ ಕೆಲಸವನ್ನು ಕಳೆದುಕೊಂಡ ಲಕ್ಷಾಂತರ ಕಾರ್ಮಿಕರಿಗೆ ಪ್ರಕಾಶಿಸುತ್ತಿರುವುದೇನು? ತಮ್ಮ ಹಳ್ಳಿಗಳಲ್ಲಿ ಕೆಲಸ ದೊರಕದೆ ತಮ್ಮ ಇಳಿ ವಯಸ್ಸಿನ ತಂದೆ ತಾಯಂದಿರನ್ನು, ಚಿಕ್ಕಮಕ್ಕಳನ್ನು ಅವರ ಪಾಡಿಗೆ ಬಿಟ್ಟು ದೂರದ ಪಟ್ಟಣಗಳಿಗೆ ವಲಸೆ ಹೋಗುವ ಲಕ್ಷಾಂತರ ಕೃಷಿ ಕಾರ್ಮಿಕರಿಗೆ ? ಸುಮಾರು 2 ಲಕ್ಷ ಹಳ್ಳಿಗಳಲ್ಲಿ ಕೆಲವೇ ಬಿಂದಿಗೆ ಕುಡಿಯುವ ನೀರು ತರಲು ಮೈಲುಗಟ್ಟಲೆ ನಡೆಯಬೇಕಾದ ಲಕ್ಷಾಂತರ ಮಹಿಳೆಯರಿಗೆ ಪ್ರಕಾಶಿಸುತ್ತಿರುವುದು ಸುಡುಬಿಸಿಲಿನಲ್ಲಿ ಒಣ ಮರಳು ಅಷ್ಟೇ! ಪ್ರವಾಸಿಗರ ಕಾಮವನ್ನು ತಣಿಸಲು, ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ವೇಶ್ಯೆಯರಾಗಿ ಮಾರಲ್ಪಡುವ ಯುವತಿಯರ ಭವಿಷ್ಯ ಪ್ರಕಾಶಿಸುತ್ತಿದೆಯೇ? ಸರ್ಕಾರವೇ ಪ್ರಾಯೋಜಿಸಿದ ಹತ್ಯಾಕಾಂಡದ ದುಃಸ್ವಪ್ನವನ್ನು ಮರೆಯಲು ಪ್ರಯತ್ನಿಸುವ, ಪ್ರತಿದಿನ ಬೆದರಿಕೆಯ ನೆರಳಲ್ಲೇ ಬದುಕಲು ಸಿದ್ಧರಾಗುತ್ತಿರುವ, ಬಾರಿಬಾರಿಗೂ ತಮ್ಮ ದೇಶಭಕ್ತಿಯ ಪ್ರದರ್ಶನ ನೀಡಬೇಕಾದ ಅವಮಾನಕ್ಕೆ ಒಳಗಾಗುವ ಗುಜರಾತಿನ ಸಾವಿರಾರು ಅಲ್ಪಸಂಖ್ಯಾತ ಕುಟುಂಬಗಳಿಗೆ ಪ್ರಕಾಶಿಸುತ್ತಿರುವುದು ಅವರು ಈಗಲೂ ಕನಸ್ಸಿನಲ್ಲಿ ಕಾಣುವ ಮನೆಗಳನ್ನು ಸುಡುತ್ತಿರುವ, ಹೆಣಗಳನ್ನು ಸುಡುತ್ತಿರುವ ಜ್ವಾಲೆಗಳಷ್ಟೇ.


ನಮ್ಮ ಇಂದಿನ ಭಾರತ ಇದೇ ಸ್ವಾಮಿ. ಇದು ಖಂಡಿತವಾಗಿಯೂ ಎನ್‌ಡಿಎ ಸರ್ಕಾರ ಹೇಳತ್ತಿರುವಂತೆ, ನಂಬಿಸಲು ಹೆಣಗುತ್ತಿರುವಂತೆ ಪ್ರಕಾಶಿಸುತ್ತಿಲ್ಲ.


ಈ ವಾಸ್ತವತೆಗಳನ್ನು ನೋಡಿ -


- ವಿಶ್ವದ ಅತಿ ಹೆಚ್ಚು ಸಂಖ್ಯೆಯ ಹಸಿದ ಹೊಟ್ಟೆಯ ಜನ ಭಾರತದಲ್ಲಿದ್ದಾರೆ. ಭಾರತ ಆಹಾರ ನಿಗಮದ ಗೋದಾಮುಗಳಲ್ಲಿ ಆಹಾರ ಧಾನ್ಯಗಳು ಕೊಳೆಯುತ್ತಿದ್ದರೂ, ಹೆಗ್ಗಣಗಳು ತಿಂದು ಹೋಗುತ್ತಿದ್ದರೂ ದೇಶದ ಕೋಟಿಗಟ್ಟಲೆ ಜನ ಪ್ರತಿದಿನ ಹಸಿದ ಹೊಟ್ಟೆಯಲ್ಲೇ ಮಲಗುತ್ತಾರೆ. ಸಬ್ಸಿಡಿಗಳ ಮೇಲೆ ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡಿದರೂ ಅಗತ್ಯವಿದ್ದವರಿಗೆ ಸುಮಾರಾಗಿ ಏನು ತಲುಪುವುದಿಲ್ಲ. ವ್ಯಾಪಾರಸ್ಥರು, ರಫ್ತುದಾರರು, ಭ್ರಷ್ಟ ಅಧಿಕಾರಿಗಳು ಇತ್ಯಾದಿಗಳೇ ಇದರ ಪ್ರಯೋಜನ ಪಡೆಯುವವರು.
- ರಾಷ್ಟ್ರೀಯ ಅನ್ವಯಿಕ ಅರ್ಥಶಾಸ್ತ್ರ ಸಂಶೋಧನಾ ಮಂಡಳಿಯ ಮಾನವಅಭಿವೃದ್ಧಿ ಕಾರ್ಯಕ್ರಮ ಮುಖ್ಯಸ್ಥ ಮತ್ತು ಪ್ರಧಾನ ಅರ್ಥ ಶಾಸ್ತ್ರಜ್ಞ ಅಬುಸಲೇಹ್ ಶರೀಫ್ ಪ್ರಕಾರ ಭಾರತದಲ್ಲಿ ನಿವ್ವಳ ಬಡತನ ರೇಖೆಯನ್ನು ಪ್ರತಿದಿನ ನಗರಗಳಲ್ಲಿ 2,400 ಕ್ಯಾಲರಿ ಹಾಗೂ ಗ್ರಾಮಾಂತರದಲ್ಲಿ 2,100 ಕ್ಯಾಲರಿಗೆ ಸಮನಾದ ಶಕ್ತಿ ಪಡೆಯಲು ಅಗತ್ಯವಾದ ಹಣದ ಆಧಾರದಲ್ಲಿ ನಿರ್ಧರಿಸಲಾಗಿದೆ. ಇದು ಅರ್ಧ ಕೆಜಿ ಅಕ್ಕಿ ಅಂದರೆ ತಲಾ 7-8 ರೂ.ಪ್ರತಿದಿನವಾಗುತ್ತದೆ. ಅತ್ಯಂತ ಕನಿಷ್ಠ ಮಾನದಂಡದ ಪ್ರಕಾರವೂ ಶೇ 26 ಭಾರತೀಯರು ಬಡತನದ ರೇಖೆಯ ಕೆಳಗಿದ್ದಾರೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಆದರೆಪ್ರತಿದಿನ ಎರಡು ಡಾಲರ್ ಆದಾಯದವರು ಬಡವರು, ಒಂದು ಡಾಲರ್ ಆದಾಯದವರು ಕಡುಬಡವರು ಎಂಬ ಅಂತರ್ರಾಷ್ಟ್ರೀಯ ಮಾನದಂಡವನ್ನು ಅನುಸರಿಸಿದರೆ ನಮ್ಮ ದೇಶದ ಶೇ 70 ಜನ ಬಡತನದ ರೇಖೆಯ ಕೆಳಗೆ ಬರುತ್ತಾರೆ, ಶೇ. 26 ಕಡುಬಡವರಿಗಿಂತಲೂ ಕೆಳಮಟ್ಟಕ್ಕೆ ಇಳಿಯುತ್ತಾರೆ. ವಿಶ್ವದ ಶೇ. 70 ಬಡವರು ಮಹಿಳೆಯರು ಎಂದು ವಿಶ್ವ ಸಂಸ್ಥೆ ಅಂದಾಜು ಮಾಡಿದೆ.
- ನೂರು ಕೋಟಿಗಿಂತ ಸ್ವಲ್ಪ ಹೆಚ್ಚು ಜನಸಂಖ್ಯೆಯಿರುವ ನಮ್ಮ ದೇಶದಲ್ಲಿ ಸುಮಾರು 40 ಕೋಟಿ ಜನಕ್ಕೆ ಓದಲು, ಬರೆಯಲು ಬರುವುದಿಲ್ಲ. ನಮ್ಮ 'ಪ್ರಕಾಶಿಸುತ್ತಿರುವ' ಭಾರತದ ಪ್ರತಿ 1000 ಮಕ್ಕಳಲ್ಲಿ 95 ಮಂದಿ ಐದು ವರ್ಷ ತಲುಪುವ ಒಳಗೇ ಸಾಯುತ್ತಾರೆ.
- ಭಾರತದ ಅರ್ಧದಷ್ಟು ಜನಸಂಖ್ಯೆಗೆ ಈಗಲೂ ವಿದ್ಯುತ್ ಸಿಗುತ್ತಿಲ್ಲ. ಗ್ರಾಮೀಣ ಕುಟುಂಬಗಳಲ್ಲಿ ಶೇ. 63 ಮಂದಿಗೆ ಅದು ಸಿಗುತ್ತಿಲ್ಲ. ವಿದ್ಯುತ್ ಇರುವವರಿಗೂ ಎಲ್ಲಾ ಹೊತ್ತಿನಲ್ಲಿ ಸಿಗುವುದಿಲ್ಲ.
- ಪ್ರತಿ 250 ಜನಕ್ಕೆ ಒಂದು ಕೈಪಂಪು ಅಥವಾ ಸ್ಟಾಂಡ್ ಪಂಪು ಇದೆ. 1.6 ಕಿ.ಮಿ. ವಸತಿ ವ್ಯಾಪ್ತಿಯಲ್ಲಿ ಒಂದು ಜಲಸಂಪನ್ಮೂಲ ಇದೆ. ವಿಶ್ವ ಬ್ಯಾಂಕಿನ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ಹಲವು ಕುಡಿಯುವ ನೀರಿನ ಪೂರೈಕೆ ಸೌಲಭ್ಯಗಳು ಕೆಟ್ಟ ನಿರ್ವಹಣೆಯಿಂದಾಗಿ ನಿರುಪಯುಕ್ತವಾಗಿವೆ. ಬಹಳಷ್ಟು ಗ್ರಾಮಾಂತರ ಭಾರತೀಯ ಕುಡಿಯುವ ನೀರಿನಲ್ಲಿ ವಿಷ ಮತ್ತು ಎಲ್ಲಾ ರೀತಿಯ ಮಲೀನ ಪದಾರ್ಥಗಳು ಇವೆ. ಇದರಿಂದ ಖಾಯಿಲೆ, ವಿಕೃತಿ, ಸಾವುಗಳು ಸಂಭವಿಸುತ್ತವೆ ಎಂದು ಪರಿಣಿತರು ಹೇಳುತ್ತಾರೆ.
- ಕಳೆದ ಕೆಲವು ವರ್ಷಗಳಲ್ಲಿ ಕಂಡುಬಂದಿರುವ ಬೆಳವಣಿಗೆಯೂ 'ಉದ್ಯೋಗರಹಿತ' ಬೆಳವಣಿಗೆಯಷ್ಟೇ ಅಲ್ಲ, 'ಉದ್ಯೋಗ ನಷ್ಟ' ಬೆಳವಣಿಗೆ ಕೂಡಾ. ಜನವರಿ 2 ರ ಸ್ಟೇಟ್ಸ್ ಮನ್ ಪತ್ರಿಕೆಯ ಪ್ರಕಾರ 'ಸಂಘಟಿತ ವಲಯದಲ್ಲಿ ಉದ್ಯೋಗವಕಾಶ ಕಳೆದ ವರ್ಷ ಶೇ 1.5 ರಷ್ಟು ದೊಡ್ಡ ಪ್ರಮಾಣದಲ್ಲಿ ಇಳಿಯಿತು. ಎನ್‌ಡಿಎ ಸರ್ಕಾರ 1998 ರಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಅದು ಇಳಿಯುತ್ತಲೇ ಇದೆ. ಅದರ ಹಿಂದಿನ ಕಾಂಗ್ರೆಸ್ ಮತ್ತು ಸಂಯುಕ್ತರಂಗ ಸರ್ಕಾರದ ಆಡಳಿತದಲ್ಲಿ ಉದ್ಯೋಗರಂಗದಲ್ಲಿ ಇದ್ದ ಏರು ಪ್ರವೃತ್ತಿ ತಲೆಕೆಳಕಾಗಿದೆ. ಸಂಘಟಿತ ವಲಯದಲ್ಲಿನ ಉದ್ಯೋಗ ನಷ್ಟವನ್ನು ತುಂಬುವಷ್ಟು ಉದ್ಯೋಗವಕಾಶ ನಿರ್ಮಾಣ ಅಸಂಘಟಿತ ವಲಯದಲ್ಲಿ ಆಗಿಲ್ಲ. ಕಳೆದ ಐದು ವರ್ಷದಲ್ಲಿ 2 ಕೋಟಿಗೂ ಹೆಚ್ಚು ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಘಟಕಗಳು ಮುಚ್ಚಿವೆ. ಇವು ಹೆಚ್ಚು ಶ್ರಮಶಕ್ತಿ ಬೇಕಿದ್ದ ಘಟಕಗಳು. ಇವುಗಳ ಮುಚ್ಚಿಕೆಯಿಂದ ಲಕ್ಷಾಂತರ ಉದ್ಯೋಗಗಳು ನಷ್ಟವಾಗಿವೆ.

. 1000 ಕೋಟಿ ಡಾಲರುಗಳಿಗೂ ಮೀರಿದ ವಿದೇಶಿ ವಿನಿಮಯ ಭಂಡಾರವನ್ನು ಉತ್ಪಾದಕ ಹೂಡಿಕೆಯಾಗಿ ಬಳಸಲು ಸಾಧ್ಯವಿದ್ದಿದ್ದರೆ ಅದು ಸ್ವಲ್ಪ ಸಮಾಧಾನ ಕೊಡುತ್ತಿತ್ತು. ನಮ್ಮ ಯುವಜನರಿಗೆ ಉದ್ಯೋಗ ಕೊಡುತ್ತಿತ್ತು. ಆದರೆ ಇಲ್ಲಿಯೂ ವಾಸ್ತವತೆ ತದ್ವಿರುದ್ಧ. ಈ ಭಂಡಾರದಲ್ಲಿ ದೊಡ್ಡ ಭಾಗ ವಿದೇಶಿ ಸಾಂಸ್ಥಿಕ ಹೂಡಿಕೆಗಳು ಮತ್ತು ಅನಿವಾಸಿ ಭಾರತೀಯರ ಹೆಚ್ಚಿನ ಬಡ್ಡಿ ಪಡೆಯಲಷ್ಟೇ ಇಟ್ಟಿರುವ ಹಣ. ಏಕೆಂದರೆ ಯುರೋಪ್, ಅಮೆರಿಕಾದಲ್ಲಿ ಬಡ್ಡಿ ದರಗಳು ಬಹಳ ಕಡಿಮೆಯಿದೆ. ಆದ್ದರಿಂದ ಈ ಹಣದ ಒಡೆಯರಿಗೆ ಬೇರೆಲ್ಲಾದರೂ ಉತ್ತಮ ಪ್ರತಿಫಲ ದೊರೆಯುವಂತಿದ್ದರೆ ಇದ್ದಕ್ಕಿದ್ದಂತೆ ದೇಶದಿಂದ ಹೊರಗೆ ಹೋಗಬಹುದಾದ 'ಬಿಸಿ ಹಣ' ಇದು.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅತ್ಯುತ್ಸಾಹದಿಂದ ಅನುಸರಿಸುತ್ತಿರುವ ಜಾಗತೀಕರಣದ ನೀತಿಗಳು ಅಸಮಾನತೆಗಳನ್ನು ಹೆಚ್ಚಿಸಿವೆಯಷ್ಟೇ. ಬಿಜೆಪಿ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ, ವೈವಿಧ್ಯತೆಯಲ್ಲಿ ಏಕತೆಯ ಸಿದ್ಧಾಂತದಲ್ಲಿ ನಂಬಿಕೆಯಿಲ್ಲದ ಆರ್‌ಎಸ್‌ಎಸ್ ನ ಫ್ಯಾಸಿಸ್ಟ್ ಸಿದ್ಧಾಂತದಂತೆ ನಡೆಯುವ ಪಕ್ಷ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಅದು ದೇಶಕ್ಕೆ, ಅದರ ಐಕ್ಯತೆಗೆ, ಅದರ ಧರ್ಮನಿರಪೇಕ್ಷ ಹಾಗೂ ಬಹುಮುಖೀ ಮೌಲ್ಯಗಳಿಗೆ ವಿನಾಶಕಾರಿ. ಜನತೆ ವಿನಾಶಕಾರಿ, ವಿಭಜನಕಾರಿ ಧೋರಣೆಗಳನ್ನು ಇನ್ನು ಮುಂದೆ ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಬಿಜೆಪಿಗೆ ಕೊಡಬೇಕಾಗಿದೆ. ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ರಂಗವನ್ನು ಸೋಲಿಸಬೇಕಾಗಿದೆ.









ನಿರಕ್ಷರಸ್ತರನ್ನು ಅಕ್ಷರಸ್ತರನ್ನಾಗಿಸಿ, ಕಲಿತ ಅಕ್ಷರಗಳ ಕಲೆಯನ್ನು ಮರೆಯದಂತೆ ಮುಂದುವರಿಸಲು, ಜ್ಞಾನದ ದೀವಿಗೆಯನ್ನು ಅವರ ಬದುಕಿಗೆ ಒದಗಿಸಲು ರಾಜ್ಯಾದ್ಯಂತ ದುಡಿಯುತ್ತಿರುವ ಮುಂದುವರಿಕೆ ಕಲಿಕಾ ಕೇಂದ್ರಗಳ ಪ್ರೇರಕರು - ಸಹಪ್ರೇರಕರು ಇದೇ ಫೆಬ್ರವರಿ 2 ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ರಾಜ್ಯ ಸಮಾವೇಶ ನಡೆಸಿ; ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಯೋಜನೆಯ ಯಶಸ್ಸಿಗೆ ಸಂಘಟಿತ ಚಳುವಳಿ ನಡೆಸಲು ಸಜ್ಜಾಗಿದ್ದಾರೆ. ಅದರ ವರದಿ...

ಸಂಘಟಿತ ಚಳುವಳಿಯತ್ತ ಸಜ್ಜಾದ ಸಾಕ್ಷರತಾ ಪ್ರೇರಕರು

ಕೆ.ಎನ್.ಉಮೇಶ್

ಕರ್ನಾಟಕ ರಾಜ್ಯದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳು, ಸಂಸ್ಥೆಗಳು, ವ್ಯಕ್ತಿಗಳು ಹಾಗೂ ಲಕ್ಷಾಂತರ ಸಾಕ್ಷರತಾ ಕಾರ್ಯಕರ್ತರ ಅವಿರತ ಶ್ರಮದ ಪರಿಣಾಮವಾಗಿ ರಾಜ್ಯದ ಸಾಕ್ಷರತೆಯ ಪ್ರಮಾಣ ಸರಾಸರಿ ಶೇ 67.04 ರಷ್ಟನ್ನು ತಲುಪಿದೆ. ಕಳೆದ ಒಂದು ದಶಕದಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣವು ಶೇ.13.11 ರಷ್ಟು ಹೆಚ್ಚಳ ಕಂಡಿದೆ.

ಸಾಕ್ಷರರಾದ ನವ ಸಾಕ್ಷರರನ್ನು ಕಲಿಕೆಯ ಮುಂದಿನ ಹಂತಕ್ಕೆ ಕೊಂಡೊಯ್ಯಲು, ಸಾಕ್ಷರೋತ್ತರ ಕಾರ್ಯಕ್ರಮವಾಗಿ, ನಿರಂತರ ಕಲಿಕಾ ಯೋಜನೆಯನ್ನು ರಾಷ್ಟ್ರೀಯ ಸಾಕ್ಷರತಾ ಮಿಷನ್ (NLM) ರೂಪಿಸಿದೆ. ಈ ಯೋಜನೆಯ ಅಂಗವಾಗಿ ಕೇಂದ್ರ- ರಾಜ್ಯ ಸರ್ಕಾರಗಳ 5 ವರ್ಷಗಳ ಅನುದಾನದೊಂದಿಗೆ ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು ವಿವಿಧ ಜಿಲ್ಲೆಗಳಲ್ಲಿ ಆರಂಭಿಸಲಾಗಿದೆ.

2000 ರಿಂದ ಆರಂಭಿಸಿ ರಾಜ್ಯದ 25 ಜಿಲ್ಲೆಗಳಲ್ಲಿ 1534 ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು (NCEC) ಹಾಗೂ 14935 ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು (CEC) ಹಂತಹಂತವಾಗಿ ಆರಂಭಿಸಲಾಗಿದೆ/ ಲಾಗುತ್ತಿದೆ. ಇವುಗಳಲ್ಲಿ 3068 ನೋಡಲ್ ಪ್ರೇರಕರು- ಸಹಪ್ರೇರಕರು ಹಾಗೂ 29870 CEC ಪ್ರೇರಕರು, ಸಹ ಪ್ರೇರಕರು, ಒಟ್ಟಾರೆ 32,938 ಪ್ರೇರಕರು - ಸಹಪ್ರೇರಕರು ಗೌರವ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಾರಂಭದ 5 ವರ್ಷಗಳ ಈ ಯೋಜನೆಯ ಮೊದಲ 3 ವರ್ಷದ ಅನುದಾನವನ್ನು ಕೇಂದ್ರ ಸರ್ಕಾರವು ನಂತರದ 2 ವರ್ಷಗಳ ಅನುದಾನವನ್ನು ರಾಜ್ಯ ಸರ್ಕಾರವು ಭರಿಸಬೇಕೆಂಬುದಾಗಿದೆ. ಆನಂತರ ಈ ಕೇಂದ್ರಗಳನ್ನು ಸ್ಥಳೀಯ ಸಂಸ್ಥೆಗಳು ಸಮುದಾಯದ ಸಾಂಸ್ಕೃತಿಕ, ಸಾಮಾಜಿಕ, ಕ್ರೀಡಾ ಹಾಗೂ ಗ್ರಂಥಾಲಯ ಕೇಂದ್ರಗಳನ್ನಾಗಿ ನಡೆಸಬೇಕೆಂಬುದು ಯೋಜನೆಯ ಉದ್ದೇಶ.

ಇಂತಹ ಮಹತ್ತರ ಯೋಜನೆಯನ್ನು ಅನೇಕ ಜಿಲ್ಲೆಗಳಲ್ಲಿ ಜಾರಿಗೆ ತರುವ ನಿಟ್ಟಿನಲ್ಲಿ ಸರ್ಕಾರದ ಗಂಭೀರತೆಯ ಕೊರತೆಯಿಂದಾಗಿ ಅವ್ಯವಸ್ಥೆಯ ಆಗರವಾಗಿದೆ. ಇದುವರೆಗೆ ಅನೇಕ ಕೇಂದ್ರಗಳಿಗೆ ಅಗತ್ಯವಿರುವ ಪಠ್ಯ ಸಾಮಗ್ರಿಯಾಗಲಿ, ಗ್ರಂಥ ಭಂಡಾರವನ್ನಾಗಲಿ ಒದಗಿಸಿಲ್ಲ. ಒದಗಿಸಲಾಗಿರುವ ಕ್ರೀಡಾ ಹಾಗೂ ಮನೋರಂಜನಾ ಸಾಮಗ್ರಿಗಳು ಸಹಾ ಅನೇಕ ಕಡೆ ಕಳಪೆ ಗುಣದ್ದಾಗಿವೆ. ಇದರ ಜೊತೆಯಲ್ಲೇ ಕೇಂದ್ರಗಳನ್ನು ನಡೆಸಲು ಮುಂದೆ ಬಂದಿರುವ ನೋಡಲ್ ಕೇಂದ್ರಗಳ ಹಾಗೂ CEC ಯ ಪ್ರೇರಕರು ಸಹಪ್ರೇರಕರಿಗೆ ಅನೇಕ ಜಿಲ್ಲೆಗಳಲ್ಲಿ ತಿಂಗಳುಗಳ ಕಾಲ, ಕೆಲವೆಡೆಯಂತೂ ವರ್ಷಗಳಿಂದ ಗೌರವಧನ ನೀಡಿಲ್ಲ. ದಿನಪತ್ರಿಕೆ ಹಣ, ಓಡಾಟದ ಹಣವನ್ನು ಸಹಾ ನೀಡಿಲ್ಲ. ದಿನ ಪತ್ರಿಕೆಯನ್ನು ನಿಲ್ಲಿಸಲು ಅಧಿಕಾರಿಗಳೆ ಸೂಚಿಸಿದ್ದಾರೆ. ಪರಿಣಾಮ ಕೇಂದ್ರಗಳು ಮುಚ್ಚಿಹೋಗುವ ಸ್ಥಿತಿ ತಲುಪಿವೆ. ಪ್ರೇರಕರು ಒಂದೆಡೆ ಕೇಂದ್ರಗಳನ್ನು ನಡೆಸುವ ಜೊತೆಯಲ್ಲೇ ಸ್ವಸಹಾಯ ಗುಂಪುಗಳನ್ನು ರಚಿಸುವ ಕೆಲಸವನ್ನು ಹಾಗೂ ಇತರೆ ಸರ್ಕಾರದ ಗಣತಿ ಕೆಲಸವನ್ನು ಮಾಡಬೇಕಾಗಿದೆ. ಆದರೆ ಈ ಕೆಲಸಗಳಿಗೆ ಇತರರಿಗೆ ನೀಡಿದಂತೆ ಭತ್ಯೆ ಮಾತ್ರ ಇಲ್ಲ. ವಾರದ ರಜೆಯಂತೂ ಇಲ್ಲ. ದೊಡ್ಡ ಸಂಖ್ಯೆಯ ಮಹಿಳೆಯರು ಪ್ರೇರಕರಾಗಿ - ಸಹಪ್ರೇರಕರಾಗಿ ದುಡಿಯುತ್ತಿದ್ದಾರೆ. ಆದರೆ ಅವರಿಗೆ ಹೆರಿಗೆ ರಜೆಯು ಇಲ್ಲವಾಗಿದೆ. ಪ್ರಸ್ತುತ ನೋಡಲ್ ಪ್ರೇರಕರಿಗೆ ರೂ.1200, ಸಹ ಪ್ರೇರಕರಿಗೆ ರೂ.700, ಸಿಇಸಿ ಪ್ರೇರಕರಿಗೆ ರೂ.700 ಹಾಗೂ ಸಹಪ್ರೇರಕರಿಗೆ ರೂ.500 ಗೌರವಧನವನ್ನು ನೀಡಲಾಗುತ್ತಿದೆ (ಬಾಗಲಕೋಟೆಯಲ್ಲಿ ಇದು ಕಡಿಮೆಯಿದೆ). ಇದರೊಟ್ಟಿಗೆ ಗ್ರಾಮ ಸಾಕ್ಷರತಾ ಸಮಿತಿ, ತಾಲ್ಲೂಕು - ಜಿಲ್ಲಾ ಸಮಿತಿಗಳ ಕಿರುಕುಳ. ಇತ್ತೀಚೆಗೆ ತಾಲ್ಲೂಕು ಸಾಕ್ಷರತಾ ಸಮಿತಿಗಳಿಗೆ ಶಾಸಕರು ಅಧ್ಯಕ್ಷರಾದ ನಂತರ ಪ್ರಾಮಾಣಿಕವಾಗಿ ಹಲವಾರು ವರ್ಷಗಳಿಂದ ಸಾಕ್ಷರತಾ ಯೋಜನೆಯಲ್ಲಿ ದುಡಿದವರನ್ನೇ ಬದಲಾಯಿಸಲಾಗುತ್ತಿದೆ. ಸಮಸ್ಯೆ, ಗೌರವಧನ ಕೇಳಲು ಹೋದಲ್ಲಿ ನೀವು ಗೌರವ ಕಾರ್ಯಕರ್ತರು, ಸ್ವಯಂ ಸೇವಕರು, ಗೌರವಧನ ನೆಚ್ಚಿ ಬದುಕಬೇಕಿಲ್ಲಾ ಎಂದೆಲ್ಲಾ ಉದಾಸೀನದ ಮಾತುಗಳು ಕೇಳಿಬರುತ್ತಿವೆ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಸಮಸ್ಯೆಗಳು ಎದುರಾಗಿವೆ.

ಬಸವಕಲ್ಯಾಣ ಸಮಾವೇಶ

ಇಂತಹ ಪರಿಸ್ಥಿತಿಯಲ್ಲಿ ಕಳೆದೆರಡು ವರ್ಷಗಳಿಂದ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತ ಪ್ರಯತ್ನ ನಡೆಸಿದ್ದ ಬೀದರ್ ಜಿಲ್ಲೆಯ ಸಾಕ್ಷರತಾ ಪ್ರೇರಕರ ಸಂಘದ ಮುತುವರ್ಜಿಯಿಂದ ಪ್ರಥಮ ಬಾರಿಗೆ ರಾಜ್ಯಮಟ್ಟದ ಸಮಾವೇಶವನ್ನು ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ 2003 ಮೇ 26 ರಂದು ನಡೆಸಲಾಯಿತು. ಸಮಾವೇಶದಲ್ಲಿ 700 ಕ್ಕೂ ಹೆಚ್ಚು ಪ್ರೇರಕರು ಭಾಗವಹಿಸಿದ್ದರು. ದಾವಣಗೆರೆ, ಚಿತ್ರದುರ್ಗ, ಕೊಪ್ಪಳ, ಗುಲ್ಬರ್ಗಾ ಜಿಲ್ಲೆಯ ಪ್ರತಿನಿಧಿಗಳು ಭಾಗವಹಿಸಿದ್ದರು. ಬೀದರ್ ಜಿಲ್ಲೆಯವರೇ ಹೆಚ್ಚು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಘ ದ ಹೆಸರಿನಲ್ಲಿ ರಾಜ್ಯಾದ್ಯಂತ ಪ್ರೇರಕರನ್ನು ಸಂಘಟಿಸಲು ಸಮಾವೇಶವು ನಿರ್ಣಯಿಸಿತು. ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ಅಧ್ಯಕ್ಷರಾಗಿ ಮಾನ್ಯ ಮುಖ್ಯಮಂತ್ರಿಗಳು ಸಮಯ ನೀಡಲು, ಗಮನ ಹರಿಸಲು, ಸಭೆ ನಡೆಸಲು ಸಾಧ್ಯವಾಗದಿದ್ದಲ್ಲಿ, ಅವರು ಅಧ್ಯಕ್ಷರಾಗಿರುವ ಅವಶ್ಯಕತೆಯನ್ನು ಪ್ರಶ್ನಿಸಲಾಯಿತು. ಪ್ರೇರಕರ ಈ ಕೆಳಗಿನ ಬೇಡಿಕೆಗಳನ್ನು ರೂಪಿಸಲಾಯಿತು. ಬಾಕಿ ಇರುವ ಗೌರವಧನ ಬಿಡುಗಡೆ, ಪೇಪರ್ ಬಿಲ್ ಪ್ರಯಾಣ ವೆಚ್ಚ ಬಿಡುಗಡೆ; ವಾರದ ರಜೆ- ಹೆರಿಗೆ ರಜೆ ಸೌಲಭ್ಯ; ಗೌರವಧನ ಹೆಚ್ಚಳ; ಸ್ವಸಹಾಯ ಸಂಘಗಳ ರಚನೆಗೆ ಮಾಸಿಕ ರೂ.100 ಭತ್ಯೆ, ಸಂಘಗಳಿಗೆ ದಸ್ತಾವೇಜು ಪುಸ್ತಕ; ಪ್ರೇರಕರು - ಸಹಪ್ರೇರಕರಿಗೆ ವಿಮಾ ಯೋಜನೆ , 15 ವರ್ಷಗಳಿಂದ ಸಾಕ್ಷರತಾ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರನ್ನು ಕಾಯಂಗೊಳಿಸಬೇಕು, ಸ್ವಯಂಸೇವಾ ಮನೋಭಾವದೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಸಮಿತಿ ಸ್ಥಾನಗಳಿಂದ ಬದಲಿಸಿ, ಆ ಸ್ಥಾನಗಳಿಗೆ ಅಧಿಕಾರಿಗಳನ್ನು ನೇಮಿಸುವ ಸೂಚನೆಯುಳ್ಳ ಸುತ್ತೋಲೆಗೆ ಸೂಕ್ತ ತಿದ್ದುಪಡಿ ತರಬೇಕು, ಕಲಿಕಾ ಕೇಂದ್ರಗಳಿಗೆ ಪಠ್ಯ, ಆಟೋಪಕರಣ, ಪೀಠೋಪಕರಣ, ಗ್ರಂಥ ಭಂಡಾರವನ್ನು ಒದಗಿಸಬೇಕು, ಆವರ್ತಕ - ಅನಾವರ್ತಕ ಅನುದಾನಗಳ ಆಡಿಟ್ ಪ್ರತ್ಯೇಕವಾಗಿ ನಡೆಸಬೇಕು. ಆವರ್ತಕ ಅನುದಾನದ ಶೇ.75 ರಷ್ಟು ಖರ್ಚಾದ ಕೂಡಲೇ 2ನೇ ಕಂತಿನ ಅನುದಾನವನ್ನು ಕೇಂದ್ರಗಳಿಗೆ ಬಿಡುಗಡೆ ಮಾಡಬೇಕು, ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ನಿಯಮಾನುಸಾರ ರಾಜ್ಯಾದ್ಯಂತ ಏಕರೂಪ ನಿಯಮಗಳನ್ನು ಜಾರಿಗೊಳಿಸಬೇಕು, ಕೇಂದ್ರಗಳಿಗೆ ಕಟ್ಟಡ, ಬಾಡಿಗೆ, ಬೆಳಕಿನ ವ್ಯವಸ್ಥೆ ಒದಗಿಸಬೇಕು. ಪ್ರೇರಕರಿಗೆ ಗುರುತಿನ ಚೀಟಿ ನೀಡಬೇಕು.

ಈ ಬೇಡಿಕೆಗಳನ್ನು ರಾಜ್ಯಾದ್ಯಂತ ಪ್ರಚಾರಪಡಿಸಿ ಹೋರಾಟ ನಡೆಸಲು ನಿರ್ಣಯಿಸಿ ರಾಜ್ಯದ ನಾನಾ ಕಡೆ ಹಲವು ಬಗೆಯ ಹೋರಾಟಗಳನ್ನು ನಡೆಸಿದರು.

ಸಾಕ್ಷರತಾ ಯೋಜನೆಯಲ್ಲಿದ್ದ ಉದಾತ್ತ ಮೌಲ್ಯಗಳು ಜಾರಿಯಲ್ಲಿ ಮಾಯ!

ಸಾಕ್ಷರತಾ ಯೋಜನೆಯನ್ನು ಹುಟ್ಟುಹಾಕುವ ಸಂದರ್ಭದಲ್ಲಿದ್ದ ಅನೇಕ ಉದಾತ್ತ ಮೌಲ್ಯಗಳು, ಆದರ ಜನಪರ ಕಾಳಜಿಗಳು ಯೋಜನೆ[...] ಜಾರಿಯ ಸಂದರ್ಭದಲ್ಲಿ ಮಾಯವಾಗುತ್ತಿ[...] ಆಂದೋಲನದಲ್ಲಿರುವ ಪ್ರೇರಕ - ಸಹಪ್ರೇರ[...] ಸರಿಯಾಗಿ ಕೆಲಸ ಮಾಡಬೇಕೆಂದರೆ ಅದಕ್ಕ[...] ಮೊದಲು ಅಲ್ಲಿಯ ವ್ಯವಸ್ಥೆ ಸರಿಯಾಗಿ ಕೆ[...] ಮಾಡಬೇಕು. ಆದರೆ ಇದರ ಮೂಲ ಸ್ಥ[...] ಸಾಕ್ಷರತಾ ಮಿಷನ್, ನಿಷ್ಕ್ರಿಯವಾಗಿದೆ. ಕ[...] 4-5 ವರ್ಷಗಳಿಂದಲೂ ಈ ಪ್ರಾಧಿಕಾರದ[...] ಅಧಿಕಾರಿಗಳು ಮಾತ್ರವೇ ಇ[...] ಪೂರ್ಣಪ್ರಮಾಣದ ಒಂದು ಸಮಿತಿಯನ್ನು ಸ[...] ರಚಿಸಲಿಲ್ಲ. ಇದು ಸರ್ಕಾರ ಮತ್ತು ಅಧಿಕಾರಿಗ[...] ಈ ಯೋಜನೆಯ ಬಗ್ಗೆ ಇರುವ ನಿರಾಸಕ್ತಿಯ[...] ತೋರಿಸುತ್ತದೆಂದು ರಾಷ್ಟ್ರೀಯ ಸಾಕ್ಷರತಾ ಮಿಷ[...] ಸಲಹೆಗಾರರಾದ ಪ್ರೊ.ಲಿಂಗದೇವರು ಹಳೆಮ[...] ಹೇಳಿದರು.

ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂ[...] ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜ[...] ಫೆಡರೇಷನ್ (DYFI) ರಾಜ್ಯ ಸಮಿತಿ ನೇತೃತ್ವದ[...] ಸಂಘಟಿಸಲಾಗಿದ್ದ 'ಸಾಕ್ಷರತಾ ಪ್ರೇರಕರ ರಾ[...] ಸಮಾವೇಶವನ್ನು' ಉದ್ಘಾಟಿಸಿದರು. ಅವ[...] ರಾಜ್ಯ ಸರ್ಕಾರಿ ನೌಕರರು ಒಂದು ದಿನದ ತ[...] ಸಂಬಳದಲ್ಲಿ ವ್ಯತ್ಯಾಸವಾದರೂ ಪ್ರತಿಭಟನ[...] ಇಳಿಯುತ್ತಾರೆ. ಆದರೆ ಪ್ರೇರಕರು [...] ಸಹಪ್ರೇರಕರಾಗಿ 14-15 ತಿಂಗಳುಗಳಿಂ[...] 'ಗೌರವಧನ' ಬಿಡುಗಡೆ ಮಾಡದಿರುವುದು ಯಾ[...] ನ್ಯಾಯ? ಎಂದು ಪ್ರಶ್ನಿಸಿದ ಅವರು 'ಅತ್ಯಂ[...] ಉತ್ಸಾಹದಿಂದ ನಡೆದ ಸಾಕ್ಷರತಾ ಆಂದೋಲ[...] ಅಷ್ಟಕ್ಕೆ ಬಿಟ್ಟರೆ ಮತ್ತೆ ಅನಕ್ಷರಸ್ಥರ ಪಡೆ ಬೆಳೆಯುತ್ತ[...] ಎನ್ನುವ ಕಾರಣಕ್ಕಾಗಿಯೇ ಈ ಆಂದೋಲನ[...] ಸಾಂಸ್ಥಿಕ ರೂಪ ಕೊಡುವ ಅನಿವಾರ್ಯತೆಯ[...] ಮನಗಂಡು ಮುಂದುವರಿಕಾ ಶಿಕ್ಷಣ ಕೇಂದ್ರಗಳ[...] ಪ್ರಾರಂಭಿಸಿದೆವು. ಆಗ ಸ್ವಯಂ ಪ್ರೇರಿತರಾ[...] ದುಡಿದ ಸ್ವಯಂ ಸೇವಕರಿಗೆ ಕೊಟ್ಟ ಯಾವುದ[...] ಭರವಸೆಯನ್ನು ಈಡೇರಿಸಿಲ್ಲ. ಪ್ರೇರಕ[...] ನೇಮಕಾತಿಯ ಸಂದರ್ಭದಲ್ಲಿ ರಾಜಕಾರಣ[...] ಸ್ಪರ್ಶ, ಸ್ವಜನ ಪಕ್ಷಪಾತಗಳು ಪ್ರವೇಶಿಸಿದವು. ಈ[...] ಯೋಜನೆಗೆ ಒಂದಿಷ್ಟು ಹಣ ಬಂದಿರುವುದರಿಂ[...] ಎಂ.ಎಲ್.ಎ.ಗಳು ಮಂತ್ರಿಗಳು ಮಧ್ಯಪ್ರವೇ[...] ಮಾಡುವಂತಾಯಿತು. ಆದರೆ ಯಾವುದೆ[...] ಯೋಜನೆಗಳು ಯಶಸ್ವಿಗೊಳ್ಳಬೇಕಾದರ[...] ಜನಸಮುದಾಯದ ಪಾಲ್ಗೊಳ್ಳುವಿಕೆ ಮುಖ್ಯ[...] ಆದರೆ ಸಾಕ್ಷರತಾ ಆಂದೋಲನ ಈ[...] 'ಸರ್ಕಾರಿಕರಣ ಗೊಳ್ಳುತ್ತಿರುವುದರಿಂದ ಇದ[...] ಅಂತಿಮ ಫಲ ವಿಫಲತೆಯ ಕಡೆ ಹೋಗುತ್ತಿದೆ[...]

ನಿಮ್ಮ ಎಲ್ಲಾ ಬೇಡಿಕೆಗಳ[...] ನ್ಯಾಯೋಚಿತವಾಗಿದೆ. ಎಲ್ಲಾ ಸರ್ಕಾ[...] ಇಲಾಖೆಯ ನೇಮಕಾತಿಯಲ್ಲಿ 'ಪ್ರೇರಕರಿಗೆ' ಆದ್ಯ[...] ನೀಡುವಂತೆ ಬೇಡಿಕೆಯನ[...] ಮಂಡಿಸುವಂತಾಗಬೇಕು. ಈ ಸರ್ಕಾರವಾಗಲಿ ನ್ಯಾಯಾಲಯವಾಗಲಿ ನಿಮಗೆ ನ್ಯಾಯ ಕೊಡುತ್ತ[...] ಎನ್ನುವುದರಲ್ಲಿ ನಾವು ನಂಬಿ ಕೂಡಬೇಕಾಗಿಲ್ಲ[...] ನಮ್ಮ ಬಲಿಷ್ಠ ಸಂಘಟನೆಯಿಂದ ಮಾತ್ರ ನಾ[...] ನ್ಯಾಯ ಪಡೆಯಬಹುದು. ಹೀಗಾಗಿ ಇಡಿ[...] ರಾಜ್ಯದ್ಯಂತ ಸಂಘಟನೆಗಳನ್ನು ಬೆಳೆಸುವ ಕಾಯ[...] ನಡೆಯಲಿ ಎಂದು ಅವರು ಹಾರೈಸಿದರು.

ಸಮಾವೇಶದಲ್ಲಿ ಸಿಐಟಿಯು ರಾಜ್ಯ ಪ್ರಧಾ[...] ಕಾರ್ಯದರ್ಶಿ ವಿಜೆಕೆ ನಾಯರ್, ಐಕ್ಯರಂ[...] ಸಂಪಾದಕರಾದ ಎಸ್.ವೈ.ಗುರುಶಾಂತ್ ಅತಿಥಿಗಳಾಗಿ ಭಾಗವಹಿಸಿದ್ದರು. ಅಧ್ಯಕ್ಷತೆಯನ[...] DYFI ರಾಜ್ಯ ಅಧ್ಯಕ್ಷ ಕೆ.ಎನ್.ಉಮೇಶ[...] ವಹಿಸಿದ್ದರು. DYFI ರಾಜ್ಯ ಕಾರ್ಯದರ್ಶಿ[...] ಕೆ.ಮಹಾಂತೇಶ್ ಪ್ರಸ್ತಾವಿಕವಾಗಿ ಮಾತನಾಡಿದರು[...] ಕೊಪ್ಪಳ ಜಿಲ್ಲಾ ಕಾರ್ಯದರ್ಶಿ ಜಾಕೀರ್ ಹುಸೇನ[...] ಸ್ವಾಗತಿಸಿದರು. ಬಳ್ಳಾರಿ ಜಿಲ್ಲಾ ಅಧ್ಯಕ್ಷರಾ[...] ನಾಗಭೂಷಣ್ ವಂದಿಸಿದರು. ಬೀದರ್ ಜಿಲ[...] ಕಾರ್ಯದರ್ಶಿ ಶಿವಶರಣಪ್ಪ ಸಂತಾ[...] ಕಾರ್ಯಕ್ರಮ ನಿರ್ವಹಿಸಿದರು.

ಪ್ರೇರಕರ ರಾಜ್ಯ ಸಮಿತಿ

ಅಧ್ಯಕ್ಷರಾಗಿ - ಕೆ. ಮಹಾಂತೇಶ್

ಉಪಾಧ್ಯಕ್ಷರಾಗಿ -ಕೆ. ಎನ್.ಉಮೇಶ್, ಬಸವರಾಜ್‌ಸ್ವಾಮಿ(ಬೀದರ್), ಮಂಟನಗೌಡ (ಕೊಪ್ಪಳ),ಎಸ್.ನಾಗಭೂಷಣ್ (ಬಳ್ಳಾರಿ), ಜಿ.ಗಣೇಶ್(ಉಡುಪಿ), ಪಾತಿಮಾ (ಕೊಡಗು), ಮಂಜುನಾಥ ಕಿತ್ತೂರು(ಹಾವೇರಿ), ನವಕೋಟೆ(ಚಿತ್ರದುರ್ಗ)

ಪ್ರಧಾನ ಕಾರ್ಯದರ್ಶಿ- ಶಿವಶರಣಪ್ಪ ಸಂತಾಜಿ(ಬೀದರ್)

ಕಾರ್ಯದರ್ಶಿಗಳು-ಕೆ.ಜಿ.ವಿರೇಶ್ (ರಾಯಚೂರು), ಶ್ರೀಕಂಠ (ಮೈಸೂರು), ವಾರಿಜಾ ಭರತ (ಕೊಡಗು)

ಸಂ.ಕಾರ್ಯದರ್ಶಿ-ಗಣೇಶ್ (ಚಿತ್ರದುರ್ಗ)

ಖಜಾಂಚಿ-ಎಂ.ಡಿ.ಜಾಕೀರ್ ಹುಸೇನ್ ಖಾದ್ರಿ (ಕೊಪ್ಪಳ)

ಭಾರತ ಬೆಳಗಿಸುವ ಪ್ರಧಾನಿ ಕ್ಷೇತ್ರದಲ್ಲೇ ಮಲ ಹೊರುವವರ ನಿಕೃಷ್ಟ ಬಾಳು

ಭಾರತ ಪ್ರಕಾಶಿಸುತ್ತಿದೆ ಎಂದು ಕೋಟಿಗಟ್ಟಲೆ ಹಣವನ್ನು ಜಾಹಿರಾತಿಗಾಗಿ ವ್ಯಯ ಮಾಡುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ಹಲವು ಭಾಗಗಳಲ್ಲಿ ಇನ್ನೂ ಚಾಲ್ತಿಯಲ್ಲಿರುವ ಕಕ್ಕಸು ಸ್ವಚ್ಛಗೊಳಿಸುವವರ ಹೀನಾಯ ಪರಿಸ್ಥಿತಿಯ ಬಗ್ಗೆ ಗಮನಹರಿಸಿಲ್ಲ. ಮಾತ್ರವಲ್ಲ, ಪ್ರಧಾನಿಯವರು ಸ್ಪರ್ಧಿಸುವ ಲಕ್ನೋದಲ್ಲೇ ಈ 'ಜಲಗಾರರು' ಇದ್ದಾರೆ. ಅವರ ಪರಿಸ್ಥಿತಿಯನ್ನು ಉತ್ತಮಗೊಳಿಸಿಲ್ಲ ಎಂದು ವಾಜಪೇಯಿ ಸರ್ಕಾರದ ಮೇಲೆ ಕಿಡಿಕಾರಿದ್ದಾರೆ ರವಿಕುಮಾರ್‌ರವರು

ಭಾರತದಲ್ಲಿ ವಾದಕರ ಒಂದು ಗುಂಪಿದೆ. ನ್ಯೂಟನ್, ಐನ್‌ಸ್ಟೀನ್, ಪ್ಲಾಂಕ್ ಮುಂತಾದವರು ಸಿದ್ಧಾಂತಗಳನ್ನೆಲ್ಲಾ ಪ್ರಾಚೀನ ಭಾರತದ ಋಷಿಮುನಿಗಳು ಬಹಳ ಹಿಂದೆಯೇ ಕಂಡುಹಿಡಿದಿದ್ದರು. ವಿಮಾನ, ಕ್ಷಿಪಣಿ, ಜಲಾಂತರ್ಗಾಮಿಗಳೆಲ್ಲ ಅವರಿಗೆ ತಿಳಿದಿತ್ತು ಎಂದು ಈ ಗುಂಪಿನವರು ಆವೇಶದಿಂದ ವಾದಿಸುತ್ತಾರೆ. ಈ ವಾದಕರ ಹುಂಬ ವಾದವನ್ನು ಕೇಳಿಕೇಳಿ ಅವರಿಗೆ ದಿವಂಗತ ಲಂಕೇಶ್‌ರವರು 'ಪ್ರಾಚೀನ ಭಾರತದಲ್ಲಿ ನೀವು ಹೇಳಿದಂತೆ ಮಹಾಮೇಧಾವಿಗಳಿದ್ದರು ಎಂದು ಭಾವಿಸೋಣ. ಆದರೆ ಅವರಿಗೇಕೆ ಎರಡು ಚಕ್ರದ ಸೈಕಲ್ ಕಂಡು ಹಿಡಿಯಲಾಗಲಿಲ್ಲ? ಅವರಿಗೇಕೆ ಮುಚ್ಚಿದ ಕಕ್ಕಸ್ಸಿನ ಇಂಗುಗುಂಡಿ (PIT)ಯನ್ನು ಕಂಡುಹಿಡಿಯಲಾಗಲಿಲ್ಲ? ಮನುಷ್ಯನ ಮಲ ಹೊರುವುದಕ್ಕೆಂದೇ ಒಂದು ಜನಾಂಗವನ್ನು ಅವರು ಸೃಷ್ಟಿಸಿದರಲ್ಲ ಏಕೆ? ಎಂದು ತಮ್ಮದೇ ರೂಕ್ಷ ಶೈಲಿಯಲ್ಲಿ ಪ್ರಶ್ನೆಗಳನ್ನು ಕೇಳಿದ್ದರು.



ಲಂಕೇಶ್‌ರವರ ಈ ಪ್ರಶ್ನೆಗಳ ಚಾಟಿಯೇಟು ಎಷ್ಟು ತೀವ್ರವಾಗಿತ್ತೆಂದರೆ ಯಾರು ತಮ್ಮನ್ನು ಸನಾತನ ಸಂಸ್ಕೃತಿಯ ಸಮರ್ಥಕರು, ಸನಾತನ ವಿಜ್ಞಾನದ ಪ್ರತಿಪಾದಕರು, ಸನಾತನ ಜ್ಞಾನ ಭಂಡಾರದ ಕಾವಲುಗಾರರು ಎಂದು ಭಾವಿಸಿಕೊಂಡಿದ್ದರೋ ಅವರು ತಗರುಬಿಗುರಾಗಿ ಉತ್ತರ ನೀಡಲಾಗದೆ ಮೌನವಹಿಸಿಬಿಟ್ಟರು. ಇಂದಿಗೂ ಲಂಕೇಶರ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿವೆ.

ಒಂದು ದೇಶದ ಸಂಸ್ಕೃತಿ, ಇತಿಹಾಸ, ಪರಂಪರೆಗಳ ಬಗ್ಗೆ ನಮಗೆ ಅಭಿಮಾನ ಆಸಕ್ತಿ, ಕುತೂಹಲಗಳು ಇರುವುದು ಸಹಜವೇ. ಆ ದೇಶಕ್ಕೆ ವಿಶಿಷ್ಟವೆನ್ನಬಹುದಾದ ಉತ್ತಮ ಮೌಲ್ಯಗಳನ್ನು ಎತ್ತಿಹಿಡಿಯುವಂತಿದ್ದರೆ ಇವೆಲ್ಲ ಸಮಂಜಸವೇ? ಅದೇ ವೇಳೆ ಸಂಸ್ಕೃತಿಯ ಕೆಡುಕಿನ ಕುರೂಪಗಳನ್ನು ಚರ್ಚಿಸಲೂ ನಮ್ಮ ಮನಸ್ಸು ಮುಕ್ತವಾಗಿರಬೇಕು. ಪ್ರಾಚೀನ ಜ್ಞಾನ ಪರಂಪರೆಗಳ ಬಗ್ಗೆ ಅಬ್ಬರದಿಂದ ಮಾತನಾಡುವ ಮಂದಿಗೆ ಮಾನವ ಭಾವನೆಗಳನ್ನು ಗೌರವಿಸುವ ದೊಡ್ಡ ಮನಸ್ಸಿದ್ದಿದ್ದರೆ ಮಲ ಹೊರಲೆಂದೇ ಒಂದು ಜಾತಿಯನ್ನು ಸೃಷ್ಟಿಸಿ ಘೋಷಿಸಬೇಕಾದ ಅಗತ್ಯವಿರುತ್ತಿರಲಿಲ್ಲ.

ಸ್ವಾತಂತ್ರ್ಯ ಬಂದು ಅರ್ಧಶತಮಾನ ಕಳೆದುಹೋಗಿದ್ದರೂ ಈ ದೇಶದಲ್ಲಿ ಇನ್ನೂ ಮಲ ಹೊರುವ 'ಮಾನವಯಂತ್ರ'ಗಳಿವೆಯೆಂದರೆ ನಾವು ನಾಚಿಕೆಪಟ್ಟುಕೊಳ್ಳಲೇ ಬೇಕಾಗಿದೆ. ಆಫ್ರಿಕಾದ ಅತಿ ಅನಾಗರೀಕ ಹಿಂದುಳಿದ ದೇಶದಲ್ಲೂ ಇಂತಹುದೊಂದು ಪದ್ಧತಿಯಿಲ್ಲವೆಂದರೆ ಭಾರತೀಯ ಸನಾತನ ಜ್ಞಾನದ ಟೊಳ್ಳು ತನಗಳ ಬಗ್ಗೆ ತಲೆತಗ್ಗಿಸುವಂತಾಗುತ್ತದೆ.

ವರ್ಗೀಕರಣ

ಇದು ಮೇಲು-ಇದು ಕೀಳು. ಇವನು ಶ್ರೇಷ್ಠ, ಇವನು ನಿಕೃಷ್ಟ. ಇವಳು ಉಚ್ಚ, ಇವಳು ನೀಚ ಹೀಗೆ ಪ್ರತಿಯೊಂದು ನಮ್ಮ ಸಮಾಜದಲ್ಲಿ ವಿಭಾಗಿಸಲ್ಪಡುತ್ತಾ ಹೋಗುತ್ತಿದೆ. ಈ ವಿಭಾಗದಲ್ಲಿ ಮಲ ಹೊರುವ ಜಲಗಾರ ವೃತ್ತಿಯವರು ಕೀಳು, ನಿಕೃಷ್ಟ, ನೀಚ ಎಂಬ ವರ್ಗೀಕರಣಕ್ಕೆ ಸೇರುತ್ತಾರೆ. ಅಸಹ್ಯಪಟ್ಟುಕೊಳ್ಳುವ ಪ್ರವೃತ್ತಿಯೇ ಶಿಷ್ಟ ಸಂಸ್ಕೃತಿಯ ಸಭ್ಯತೆಯಾಗಿರುವುದರಿಂದ ಸಹಜವಾಗಿಯೇ ಜಲಗಾರರು ನಿರ್ಲಕ್ಷ್ಯಕ್ಕೊಳಗಾಗುತ್ತಾರೆ. ಇದೇನು ಅಂತಿಂಥ ನಿರ್ಲಕ್ಷ್ಯವಲ್ಲ. ಅವರು ಹೊರುವ ಮನುಷ್ಯ ಮಲಕ್ಕಿರುವಷ್ಟೇ ಗೌರವ ಅವರಿಗಿದೆ. ಅವರಿಗೂ ಸುಖದುಃಖಗಳಿವೆ. ಅವರಿಗೂ ಸಂವೇದನೆಗಳಿವೆ. ಅವರಿಗೂ ಭಾವನೆಗಳಿವೆ. ಅವರಿಗೂ ಅಭಿಲಾಷೆ ಆಕಾಂಕ್ಷೆಗಳಿವೆ. ಅವರಿಗೂ ಅನುಭವ, ಅನುಭೂತಿಗಳಿವೆ. ಅವರಿಗೂ ಅಭಿವ್ಯಕ್ತಿಯ ವಾಂಛೆಗಳಿವೆ. ಅವರಿಗೂ ಸಾಮಾನ್ಯ ಜ್ಞಾನವಿದೆ. ಅವರಿಗೂ ತಾವು ಬಯಸಿದ ದಾರಿಯಲ್ಲಿ ಸಾಗ ಬೇಕೆಂಬ ಕನಸುಗಳಿವೆ ಎಂಬ ಮಾನವ ಸಹಜ ತಿಳುವಳಿಕೆ ಶಿಷ್ಟ ಸಮಾಜದ ಸಭ್ಯ ಮನುಷ್ಯರಿಗಿಲ್ಲದಿರುವುದು ಭಾರತದ ಸಾಂಸ್ಕೃತಿಕ ವಿಕಾರವಾಗಿದೆ.

ಜಲಗಾರರು ಇತರರಂತೆ ಇತರ ರೊಂದಿಗೆ ಸಹಜ ರೀತಿಯಲ್ಲಿ ಬೆರೆಯಲು ಸಾಧ್ಯವಿಲ್ಲ. ಅವರನ್ನು ಅಕಸ್ಮಾತ್ ಮುಟ್ಟು ವುದು, ಮಲವನ್ನು ಮುಟ್ಟಿದ ಅವರ ಶರೀರವನ್ನು ಸ್ಪರ್ಶಿಸುವುದು, ಅವರೊಡನೆ ಎದುರುಬದುರು ಸರಿಸಮಾನ ವಾಗಿ ನಿಂತು ಮಾತನಾಡುವುದು ಸಲ್ಲದು ಎಂಬ ನಿಷೇಧಗಳು ಶಿಷ್ಟ ಸಮಾಜಕ್ಕೆ ಶಾಸ್ತ್ರ ಸಮ್ಮತವಾಗಿವೆ. ಅಕಸ್ಮಾತ್ ಸಂವೇದನಾಶೀಲ ವ್ಯಕ್ತಿಯೊಬ್ಬ ಅವರೊಡನೆ ಸ್ನೇಹದಿಂದ ವರ್ತಿಸಿದನೆಂದರೆ ಆ ವ್ಯಕ್ತಿ "ನಿನಗೆ ಮರ್ಯಾದೆಯಿಲ್ಲವೆ, ಹೇಲು ತುಳಿದವನ ಜೊತೆ ಸಲಿಗೆಯಿಂದ ಇದೀಯಲ್ಲ" ಎಂಬ ಟೀಕೆಗೆ ಒಳಗಾಗಬೇಕಾಗುತ್ತದೆ.



ಇಂದಿಗೂ, ಈಗಲೂ, ಅತ್ಯಾಧುನಿಕ ಭಾರತದ ವರ್ತಮಾನದಲ್ಲೂ ಜಲಗಾರರ ಸ್ಥಿತಿ ಸುಧಾರಣೆಯಾಗಿಲ್ಲ. ಒಂದೆಡೆ ನಮ್ಮ ರಾಷ್ಟ್ರಪತಿಯವರು ಬರುವ ವರ್ಷಗಳಲ್ಲಿ ಭಾರತೀಯನೊಬ್ಬ ಚಂದ್ರನ ಮೇಲೆ ಇಳಿಯುವ ಕನಸು ಕಾಣುತ್ತಿದ್ದರೆ, ಜಲಗಾರರನ್ನು ಮ್ಯಾನ್‌ಹೋಲ್‌ಗಳಿಂದ ಮೇಲೆತ್ತಬೇಕೆನ್ನುವ ಕನಿಷ್ಟ ಕನಸುಗಳೂ ನಮ್ಮ ಸರ್ಕಾರಗಳಿಗಿಲ್ಲ.

ಶೌಚವನ್ನು ಅಸಹ್ಯಪಟ್ಟುಕೊಳ್ಳದೆ ಆರೋಗ್ಯದ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ನಿರ್ವಹಿಸಬಹುದು ಎಂಬ ವಿಚಾರ ನಮ್ಮ ಸಂಸ್ಕೃತಿಯ ಭಾಗವಾಗದೇ ಹೋಗಿದ್ದರಿಂದ ಇಂದಿಗೂ ಭಾರತದಾದ್ಯಂತ ಕಕ್ಕಸ್ಸನ್ನೂ ಎತ್ತಿ ಬಿಸಾಡಬೇಕಾದ ಹಳೆಯ ಮಾದರಿಯ ಕಕ್ಕಸ್ಸು ಗುಂಡಿಗಳಿವೆ. ಸಾರ್ವಜನಿಕ ಶೌಚಾಲಯಗಳಿಂದ ಬಂದು ಕಕ್ಕಸ್ಸು, ಕೊಳೆಗೇರಿಗಳಲ್ಲಿ ಶೇಖರಗೊಂಡ ಕಕ್ಕಸ್ಸು, ಬಡಾವಣೆಯ ಮನೆಗಳಿಂದ ಹರಿದುಬಂದು ಗುಂಡಿಗಳಲ್ಲಿ ತುಂಬಿಕೊಂಡ ಕಕ್ಕಸ್ಸು, ಒಳಚರಂಡಿ ವ್ಯವಸ್ಥೆಯಿಲ್ಲದೆ ರಸ್ತೆ ಬದಿ, ರಸ್ತೆಯ ಮೇಲೆ ಚರಂಡಿ ಕಟ್ಟಿಕೊಂಡು ನಿಂತ ಕಕ್ಕಸ್ಸು ಹೀಗೆ ವಿವಿಧ ಸ್ಥಳಗಳಲ್ಲಿ ರಾರಾಜಿಸುವ ಕಕ್ಕಸ್ಸನ್ನು ಎತ್ತಿ ಒಯ್ಯಬೇಕಾದ ಒತ್ತಡದಡಿ ಜಲಗಾರರು ಸಿಲುಕಿದ್ದಾರೆ.

ಕಕ್ಕಸ್ಸು ಸೇರಿದಂತೆ ವ್ಯರ್ಥ ಪದಾರ್ಥಗಳು ಸರಾಗವಾಗಿ ಹರಿದುಹೋಗುವಂತಹ ವಿಶಾಲ ಒಳಚರಂಡಿ ವ್ಯವಸ್ಥೆಗಳು, ಮುಚ್ಚಿದ ಇಂಗುಗುಂಡಿಗಳು, ಯುನೆಸ್ಕೊ ಮಾದರಿಯ ಗುಂಡಿಗಳು, ಯಂತ್ರೋಪಕರಣಗಳ ಬಳಕೆ, ಪ್ಲಾಸ್ಟಿಕ್‌ನ್ನು ಎಲ್ಲೆಂದರಲ್ಲಿ ಎಸೆಯದಿರುವ ಪ್ರಜ್ಞೆ, ಜನರಲ್ಲಿ ಸ್ವಚ್ಛತೆಯ ಅರಿವುಗಳನ್ನು ಸಾಧಿಸಲು ನಮ್ಮ ಸರ್ಕಾರಗಳಿಗೆ ದುಡ್ಡಿನ ಕೊರತೆಯಿಲ್ಲ. 'ಭಾರತ ಪ್ರಕಾಶಿಸುತ್ತಿದೆ' ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವುದಕ್ಕಾಗಿ 400 ಕೋಟಿ ಯಷ್ಟು ಹಣವನ್ನು ಜಾಹಿರಾತುಗಳಿಗೆ ಸುರಿಯಲು ಒಂದು ಸರ್ಕಾರಕ್ಕೆ ಸಾಧ್ಯವಾಗುವುದಾದರೆ, ಭಾರತದಾದ್ಯಂತ 6.5 ಲಕ್ಷದಷ್ಟಿರುವ ನತದೃಷ್ಟ ಜಲಗಾರರನ್ನು ಮುಖ್ಯವಾಹಿನಿಗೆ ತರಲು ಸಾಧ್ಯವಾಗುವುದಿಲ್ಲವೇ?

ನಮ್ಮ ಸಂವಿಧಾನ ಕೂಡ ಮಲಹೊರುವ ಪದ್ಧತಿಯನ್ನು ನಿಷೇಧಿಸಿದೆ. 1976 ರ ಜೀತಪದ್ಧತಿ ನಿಷೇಧ ಕಾಯಿದೆ, 1989 ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ತಡೆಯುವ ಕಾಯಿದೆ 1992 ರ ಜಲಗಾರರು ಮತ್ತು ಅವರ ಅವಲಂಬಿತರ ವಿಮೋಚನೆ ಮತ್ತು ಪುನರ್ವಸತಿಯ ರಾಷ್ಟ್ರೀಯ ಯೋಜನೆ, 1993 ರ ಶುಷ್ಕ ಕಕ್ಕಸ್ಸುಗಳ ನಿರ್ಮಾಣ ಮತ್ತು ಜಲಗಾರರಿಗೆ ಪರ್ಯಾಯ ಉದ್ಯೋಗ ಒದಗಿಸುವ ಕಾಯಿದೆ ಹೀಗೆ ಅನೇಕ ಯೋಜನೆ, ಕಾಯಿದೆಗಳೇನೂ ಕಡಿಮೆ ಇಲ್ಲ(1993 ರ ಕಾಯಿದೆಯನ್ನು 2002 ರ ಹೊತ್ತಿಗೆ 16 ರಾಜ್ಯಗಳು ಜಾರಿಗೆ ತಂದಿವೆ). ಇವುಗಳನ್ನು ಶತಾಯ ಗತಾಯ ಜಾರಿಗೆ ತರಬೇಕೆನ್ನುವ ರಾಜಕೀಯ ಇಚ್ಛಾಶಕ್ತಿ ಮತ್ತು ಮನುಷ್ಯ ಪ್ರೇಮ ಅಧಿಕಾರಸ್ಥರಿಗಿಲ್ಲ.

ಲಕ್ನೋ, ಅಟಲ್ ಬಿಹಾರಿ ವಾಜಪೇಯಿ ಮತ್ತು ಜಲಗಾರರು

ನಮ್ಮ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಪ್ರತಿನಿಧಿಸುವ ಲೋಕಸಭಾ ಕ್ಷೇತ್ರದ ಲಕ್ನೋದಲ್ಲಿ ಈಗಲೂ 15,904 ಪದೇಪದೇ ಕಟ್ಟಿಕೊಳ್ಳುವ ಕಿರುಕುಳಕೊಡುವ ಹಳೆಯ ಮಾದರಿಯ ಕಕ್ಕಸ್ಸುಗಳಿವೆ. ಈ ಕಕ್ಕಸುಗಳ ನಿರ್ವಹಣೆಗೆ ಲಕ್ನೋ ನಗರದಲ್ಲೇ 600 ಜಲಗಾರರ ಕುಟುಂಬಗಳಿವೆ. ಇಲ್ಲಿ ಜಲಗಾರರಿಗೆ 'ಮೆಹತಾರ್'ಗಳೆನ್ನುತ್ತಾರೆ. ವಾಜಪೇಯಿಯವರು ಲಗಾಯ್ತಿನಿಂದ ಪ್ರತಿನಿಧಿಸುತ್ತಿರುವ ಲಕ್ನೋ ಹೇಳಿಕೇಳಿ ಸಂಸ್ಕೃತಿಯ ನೆಲೆವೀಡು. ಕಲೆ, ಸಾಹಿತ್ಯಗಳ ಸಂಗಮಸ್ಥಳ. ಸೃಜನಶೀಲ ಅಭಿವ್ಯಕ್ತಿಗಳ ರಾಜಧಾನಿ ಲಕ್ನೋದ

ಪುಟ 10 ಕ್ಕೆ

ಪ್ರಧಾನಿ ಕಛೇರಿಗೆ ಹತ್ತು ಪ್ರಶ್ನೆಗಳು

ಎಲ್ಲಾ ಕಾಲಘಟ್ಟದಲ್ಲೂ ಈ ಪ್ರಗತಿಪರರು ಉದ್ಧಟತನದಿಂದ ವರ್ತಿಸುತ್ತಾರೆ, ಪ್ರಸ್ಥಾಪಿತ ಪ್ರಮುಖರನ್ನು ಪ್ರಶ್ನೆ ಮಾಡದಿದ್ದರೆ ಅವರಿಗೆ ನಿದ್ದೆ ಬರುವುದೇ ಇಲ್ಲ. ಪ್ರಧಾನಿ ಕಛೇರಿಗೆ ಜಲಗಾರರ ಹೀನಾಯ ಬದುಕಿನ ಕುರಿತು ಹತ್ತು ಪ್ರಶ್ನೆಗಳನ್ನು ತಿಂಗಳ ಹಿಂದೆ ಕಳುಹಿಸಿದ್ದಾರೆ. ಅವು ಕೆಳಗಿನಂತಿವೆ.

1. ವಾಜಪೇಯಿಯವರೆ, ತಮ್ಮ ಕ್ಷೇತ್ರದಲ್ಲಿ ಜಲಗಾರರು ಇರುವ ಬಗ್ಗೆ ತಮಗೆ ಮಾಹಿತಿ ಇದೆಯೇ?
2. ಪ್ರಧಾನಿಯಾಗಿ ತಾವು ತಮ್ಮ ಕ್ಷೇತ್ರದಲ್ಲಿ ಜಲಗಾರ ವೃತ್ತಿಯನ್ನು ನಿರ್ಮೂಲ ಮಾಡಲು ದೃಢವಾದ ಕ್ರಮ ಕೈಗೊಂಡಿರುವಿರಾ?
3. ಪ್ರಧಾನಿಯವರೆ, ತಮ್ಮ ಹೊಸ ಭಾರತದ ನಿರ್ಮಾಣದ ಕನಸಿನಲ್ಲಿ ಜಲಗಾರರ ಅಭಿವೃದ್ಧಿಗೆ ಯೋಜನೆಗಳಿವೆಯೆ?
4. ಭಾರತದಲ್ಲಿ ಜಲಗಾರ ವೃತ್ತಿಯನ್ನು ನಿರ್ಮೂಲ ಮಾಡಲು ಪ್ರಧಾನಿಯಾಗಿ ನಿಮ್ಮ ಬಳಿ ದೀರ್ಘಕಾಲೀನ ಯೋಜನೆಗಳಿವೆಯೇ?
5. 1993 ರ ಕಾಯಿದೆಯನ್ನು ಈ ತನಕ 16 ರಾಜ್ಯಗಳು ಜಾರಿಗೆ ತಂದಿವೆ. ಉಳಿದ ರಾಜ್ಯಗಳೂ ಈ ಕಾಯಿದೆಯನ್ನು ಜಾರಿಗೆ ತರಲು ನೀವು ಒತ್ತಡ ತಂದಿರುವಿರಾ?
6. 1992 ರ ಜಲಗಾರರು ಮತ್ತು ಅವರ ಅವಲಂಬಿತರ ವಿಮೋಚನೆ ಮತ್ತು ಪುನರ್‌ವಸತಿಯ ರಾಷ್ಟ್ರೀಯ ಯೋಜನೆಯ ಸ್ಥಿತಿ ಈಗ ಏನಾಗಿದೆ? ಅದರ ಜಾರಿಯಲ್ಲಿ ಪ್ರಯತ್ನಗಳು ಪ್ರಾಮಾಣಿಕವಾಗಿ ನಿಮ್ಮ ಸರ್ಕಾರದ ವತಿಯಿಂದ ಸಾಗಿದೆಯೇ?
7. ಒಂದು ಕೋಟಿ ಉದ್ಯೋಗದ ನಿಮ್ಮ ಭರವಸೆಯಿಂದ ಲಕ್ನೋ ನಗರದ ಜಲಗಾರರಿಗೆ ಪರ್ಯಾಯ ಉದ್ಯೋಗ ವ್ಯವಸ್ಥೆ ಕಲ್ಪಿಸಲು ನಿಮ್ಮಿಂದ ಸಾಧ್ಯವಾಗಿದೆಯೇ? ಸಾಧ್ಯವಾಗಿಲ್ಲವಾದರೆ ಏಕೆ ಸಾಧ್ಯವಾಗಿಲ್ಲ?
8. ಭಾರತದಂತಹ ಸಾಮಾಜಿಕ ನ್ಯಾಯ ಮತ್ತು ಸಮಾನತೆ ಪ್ರತಿಪಾದಿಸುವ ಪ್ರಜಾಪ್ರಭುತ್ವದಲ್ಲಿ ನಮ್ಮವರೇ ಕಕ್ಕಸ್ಸು ಬಾಚುವ ವೃತ್ತಿಯನ್ನು ಅವಲಂಬಿಸಿರುವುದು ನೈತಿಕವಾಗಿ ಎಷ್ಟು ಸರಿ? ನಿಮ್ಮ ಅಭಿಪ್ರಾಯವೇನು?
9. ಜಲಗಾರ ವೃತ್ತಿ ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆ ಆಗಿದೆ ಎಂಬ ನಿಲುವಿನಡಿ ತಮ್ಮ ಸರ್ಕಾರ ಈ ವೃತ್ತಿಯ ನಿರ್ಮೂಲನೆಯ ಪರವಾಗಿ ಸಂಸತ್ತಿನಲ್ಲಿ ಏಕಾಭಿಪ್ರಾಯ ಮೂಡಿಸುವ ಪ್ರಯತ್ನ ಮಾಡಿದೆಯೇ?
10. ಭಾರತ ಪ್ರಕಾಶಿಸುತ್ತಿದೆ ಎಂಬ ಜಾಹೀರಾತುಗಳಿಗೆ ಕೋಟ್ಯಾಂತರ ಹಣ ಸುರಿಯುತ್ತಿರುವಾಗ ತಮ್ಮ ಸರ್ಕಾರ ಜಲಗಾರರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ ಎಂಬ ಆರೋಪವನ್ನು ತಾವು ಒಪ್ಪುವಿರಾ?

ಈ ಪ್ರಶ್ನೆಗಳಿಗೆ ಇಲ್ಲಿಯವರೆಗೆ ಪ್ರಧಾನಿಮಂತ್ರಿ ಕಛೇರಿಯಿಂದ ಉತ್ತರ ಬಂದಿಲ್ಲ. ಭಾರತದಲ್ಲಿ ಕೊಟ್ಟಕೊನೆಯ ಜಲಗಾರ ಆತ್ಮವಿಶ್ವಾಸದಿಂದ ತನ್ನ ವೃತ್ತಿಯನ್ನು ತೊರೆಯುವವರೆಗೆ ಮೇಲಿನ ಪ್ರಶ್ನೆಗಳು ಜೀವಂತವಾಗಿರುತ್ತವೆ. ಒಪ್ಪುತ್ತೀರಾ?

ಪ್ರಶ್ನೆಗಳ ಕೃಪೆ: 'tehelka' the people's paper

ಪ್ರಕಾಶಿಸುತ್ತಿರುವ ಭಾರತದಲ್ಲಿ ಹಸಿವಿನ ಸಂತೆ

ಸ್ವಾತಂತ್ರ್ಯ ಬಂದು ಐವತ್ತೇಳು ವರ್ಷಗಳಾಗಿವೆ. ಹಸಿರು ಕ್ರಾಂತಿಯಂಬುದೊಂದೂ ಆಗಿದೆ. ಆಹಾರಧಾನ್ಯದ ಉತ್ಪಾದನೆ ಗಣನೀಯವಾಗಿ ಹೆಚ್ಚಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಎರಡನೇ ಹಸಿರು ಕ್ರಾಂತಿಗೆ ಬೀಜ ಹಾಕಿರುವ ಪ್ರಚಾರವನ್ನು ದೊಡ್ಡ ಪ್ರಮಾಣದಲ್ಲಿ ಮಾಡುತ್ತಿದೆ. ಆದರೆ ಜಗತ್ತಿನ 86 ಕೋಟಿ ಹಸಿದ ಜನ ಜನರ ಮೂರನೇ ಒಂದು ಭಾಗದಷ್ಟು ಹಸಿದ ಜನ ಭಾರತದಲ್ಲೊಂದೇ ಇದ್ದಾರೆ. ಬಿಜೆಪಿ ಮತ್ತು ಎನ್‌ಡಿಎಗಳ ಪ್ರಕಾರ 'ಭಾರತ ಪ್ರಕಾಶಿಸುತ್ತಿದೆ'

ಹಸಿವಿನ ಈ ವಿಪರ್ಯಾಸವನ್ನು ನೋಡಿ: ಎರಡು




ವರ್ಷಗಳ ಹಿಂದೆ ರಾಜಸ್ಥಾನದಲ್ಲಿ ಬರದಿಂದಾಗಿ ಬುಡಕಟ್ಟು ಜನರು ಸಾಯುತ್ತಿದ್ದರು. ಅಲ್ಲೇ ಹತ್ತಿರ ಜೈಪುರದ ಭಾರತೀಯ ಆಹಾರ ನಿಗಮದ ಗೋದಾಮುಗಳಲ್ಲಿ ಆಹಾರ ಧಾನ್ಯ ಕೊಳೆಯುತ್ತಾ ಬಿದ್ದಿತ್ತು. ಹಸಿದ ಹೊಟ್ಟೆಗೆ ಆಹಾರ ನೀಡುವ ಬದಲು ಆಹಾರ ಧಾನ್ಯಗಳ ರಫ್ತುದಾರನೆಂಬ ಹೆಗ್ಗಳಿಕೆ ಪಡೆಯಲು ಕೇಂದ್ರದ ಎನ್‌ಡಿಎ ಸರ್ಕಾರ ಮೂರು ಕಾಸಿನ ಬೆಲೆಗೆ ಗೋಧಿ ರಫ್ತು ಮಾಡಿತು ಎಂಬುದು ಈಗ ಎಲ್ಲರಿಗೂ ಗೊತ್ತಿರುವ ವಿಚಾರ.

ತಲಾ ಕ್ಯಾಲರಿ ಸೇವನೆ ಬಹಳವಾಗಿ ಕ್ ಡಿ ಎ ' ಎ ಯ ' ಾ ಗಿ ರ ' ು ವ ' ು ದ ' ು ಏರುಪೇರಾಗಿರುವುದರಿಂದ ನಮ್ಮ ದೇಶದ ವಾಸ್ತವ ಈ ಹಸಿವು ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳನ್ನು ಬಾಧಿಸುತ್ತಿದೆ ಎಂಬುದೂ ವಾಸ್ತವ. ಉತ್ಪಾದನೆಯಾದ ಆಹಾರವನ್ನು ಕೊಳ್ಳುವ ಪರಿಸ್ಥಿತಿಯಲ್ಲಿ ಬಡಜನರು ಇಲ್ಲವಾದ್ದರಿಂದ ಅವು ಗೋದಾಮುಗಳಲ್ಲಿ ಕೊಳೆಯುತ್ತವೆ ಇಲ್ಲವೇ ರಫ್ತಾಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಭಾರತ ಪ್ರಕಾಶಿಸುತ್ತಿದೆ ಎನ್ನುವವರ ಪ್ರಾಮಾಣಿಕತೆ ಎನಿದ್ದೀತು?

ಪರಿಸ್ಥಿತಿಯ ವಿಶ್ಲೇಷಣೆ ಮಾಡಿದರೆ ಒಂದು ವಿಷಯ ಸ್ಪಷ್ಟವಾಗಿ ಗೊತ್ತಾಗುತ್ತದೆ. ತಲಾ ಆಹಾರ ಧಾನ್ಯ ಉತ್ಪಾದನೆ ಕಡಿಮೆಯಾಗಿರುವುದರಿಂದಲೇ ತಲಾ ಕ್ಯಾಲರಿ ಸೇವನೆ ಕಡಿಮೆಯಾಗಿದೆ. 1980-81 ರಿಂದ 1991-92 ರ ನಡುವೆ ಆಹಾರ ಧಾನ್ಯಗಳ ವಾರ್ಷಿಕ ಬೆಳವಣಿಗೆ ಶೇ 2.9 ರಷ್ಟಿದ್ದದ್ದು 1992-93 ರಿಂದ 1999-2000 ದ ಅವಧಿಗೆ ಶೇ 2 ಕ್ಕೆ ಕುಸಿದಿದೆ. ಗೋಧಿಯಂತಹ ಧಾನ್ಯಗಳ ಉತ್ಪಾದನೆಯ ಬೆಳವಣಿಗೆ ಹೆಚ್ಚಾದರೆ ರಾಗಿ, ಜೋಳದಂತಹ ಒರಟು ಧಾನ್ಯಗಳ ಉತ್ಪಾದನೆಯ ಬೆಳವಣಿಗೆ ನಕಾರಾತ್ಮಕವಾಗಿದೆ. ಅಂದರೆ ಸ್ಪಷ್ಟವಾಗಿ ಬಡವರ ಆಹಾರ ಧಾನ್ಯದ ಉತ್ಪಾದನಾ ದರವೇ ಕುಸಿದು ಹೋಗಿದೆ. ಇದು ಧಾನ್ಯಗಳನ್ನು ಬೆಳೆವ ಕ್ಷೇತ್ರ ಕಡಿಮೆ ಆಗಿರುವುದರಿಂದ ಆಗಿದೆ ಎಂದು ಕೆಲವು ಅರ್ಥಶಾಸ್ತ್ರಜ್ಞರು ವಾದ ಮಾಡುತ್ತಾರೆ. ಆದರೆ ನಿಜದಲ್ಲಿ ಅಕ್ಕಿ ಬೆಳೆವ ಕ್ಷೇತ್ರ ಶೇ 54 ರಷ್ಟು ಹೆಚ್ಚಾದರೆ ಗೋಧಿ ಬೆಳೆವ ಕ್ಷೇತ್ರ ಶೇ 157 ರಷ್ಟು ಹೆಚ್ಚಾಗಿದೆ.

ಇನ್ನೊಂದು ವಾದವನ್ನೂ ಹೂಡಲಾಗುತ್ತಿದೆ. ಆಹಾರ ಸೇವನೆಯ ರೀತಿಯಲ್ಲೇ ಬದಲಾವಣೆಯಾಗಿದೆ. ಈ ಬದಲಾದ ರೀತಿಯಲ್ಲಿ



ಆಹಾರ ಧಾನ್ಯಗಳ ಸೇವನೆ ಕಡಿಮೆಯಾದರೂ ಹಣ್ಣು ತರಕಾರಿಗಳನ್ನು ಸೇವಿಸಲಾಗುತ್ತಿದೆ ಎಂಬುದು ಈ ವಾದ. ಆದರೆ ಹಣ್ಣು ತರಕಾರಿಗಳು ಆಹಾರ ಧಾನ್ಯಗಳಿಗಿಂತ ತುಟ್ಟಿ ಮತ್ತು ಆಹಾರ ಧಾನ್ಯಗಳನ್ನು ಕೊಳ್ಳಲೇ ಹಣವಿಲ್ಲದವರು ಹಣ್ಣು ತರಕಾರಿಗಳನ್ನು ಎಲ್ಲಿಂದ ಕೊಂಡಾರು? ಈ ಪ್ರಶ್ನೆಗೆ ಉತ್ತರ ಅವರಲ್ಲಿ ಇಲ್ಲ.

ಆಹಾರ ಎಷ್ಟು ತುಟ್ಟಿಯಾಗಿದೆಯೆಂದರೆ ಜನ ಸಾಮಾನ್ಯರು ತಮ್ಮ ಆದಾಯದ ಬಹುಭಾಗವನ್ನು ಆಹಾರಕ್ಕಾಗಿಯೇ ವೆಚ್ಚ ಮಾಡಬೇಕಾಗುತ್ತದೆ. ಬಡತನದ ರೇಖೆಗಿಂತ ಕೆಳಗೆ ಇರುವವರಿಗೆ ಈ ಆದಾಯ ಆಹಾರಕ್ಕೂ ಸಾಲುವುದಿಲ್ಲ.

ಆಹಾರ ಧಾನ್ಯಗಳ ಬಗೆಗಿನ ನೀತಿ ಶಿಫಾರಸ್ಸು ಮಾಡಲು ನೇಮಕವಾದ ಸಮಿತಿಯ ಮುಖ್ಯಸ್ಥ ಪ್ರೊ. ಅಬಿಜಿತ್ ಸೇನ್‌ರ ಪ್ರಕಾರ 'ಪ್ರತಿ ಹೆಕ್ಟೇರಿನ ಉತ್ಪಾದನೆ ಹೆಚ್ಚುತ್ತಿಲ್ಲ, ಉತ್ಪಾದನಾ ವೆಚ್ಚವೂ ಕಡಿಮೆಯಾಗುತ್ತಿಲ್ಲ, ಅಕ್ಕಿ, ಗೋಧಿಯಂತಹ ಮುಖ್ಯ ಆಹಾರ ಧಾನ್ಯಗಳ ಇಳುವರಿ ಕಳೆದ ಹಲವು ವರ್ಷಗಳಲ್ಲಿ ಸ್ಥಗಿತವಾಗಿಯೇ ಉಳಿದಿದೆ.

ಎಂಬತ್ತರ ದಶಕದಲ್ಲಿ ಉತ್ಪಾದನೆ ಹೆಚ್ಚತೊಡಗಿದಾಗಲೇ ಆಹಾರ ಧಾನ್ಯಗಳ ಬೆಲೆ ಕಡಿಮೆಯಾಗತೊಡಗಿದ್ದು ಹಾಗೆಯೇ ನಂತರದ ದಶಕಗಳಲ್ಲಿ ಉತ್ಪಾದನೆ ಹೆಚ್ಚದೇ ಇರುವುದರಿಂದಲೇ ಬೆಲೆಗಳು ಹೆಚ್ಚತೊಡಗಿರುವುದು.

ಚೀನಾ ಹೈಬ್ರೀಡ್ ಭತ್ತವನ್ನು ಕಂಡುಹಿಡಿದು ಉತ್ಪಾದನೆಯಲ್ಲಿ ಆಗಲೇ ದಾಪುಗಾಲು ಹಾಕುತ್ತಿದೆ. ಭಾರತ ಇಂತಹ ಯಾವುದೇ ಸಾಧನೆ ಮಾಡಲಾಗಿಲ್ಲ. ಇದಕ್ಕೆ ಸಂಶೋಧನೆಗೆ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸದೇ ಇರುವುದು ಮುಖ್ಯ ಕಾರಣ.

ಮಂದಿರ-ಮಸೀದಿಗಳ ಮಾತನಾಡಿ ಕೋಮು ಜ್ವಾಲೆ ಹಬ್ಬಿಸಿ ಜನತೆಯನ್ನು ವಿಚ್ಛಿದ್ರಗೊಳಿಸುವ ನೀತಿಗಳನ್ನು ಜಾರಿ ಮಾಡುತ್ತಿರುವ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ 'ಭಾರತ ಪ್ರಕಾಶಿಸುತ್ತಿದೆ' ಎಂದು ಪ್ರಚಾರ ಮಾಡುತ್ತಿದ್ದರೆ ಈ ಮೇಲಿನ ಸತ್ಯಗಳು ಅವರ ಮುಖಕ್ಕೆ ರಾಚದೇ ಹೋದವೇ?

ಪ್ರಕಾಶಿಸುತ್ತಿರುವ ಭಾರತದಲ್ಲಿ ಹಸಿವಿನ ತಾಂಡವ ಇದಲ್ಲವೇ?

....ಮಲ ಹೊರುವವರ ನಿಕೃಷ್ಟ ಬಾಳು

ಪುಟ 9 ರಿಂದ

ಸಾಂಸ್ಕೃತಿಕ ವಾತಾವರಣ ವಾಜಪೇಯಿಯವರ ಕವಿತ್ವದ ಮೇಲೆ ಪ್ರಭಾವ ಬೀರಿರಲೂ ಬಹುದು ಅಥವಾ ವಾಜಪೇಯಿಯವರ ಲಕ್ನೋದಿಂದ ಆಕರ್ಷಿತರಾಗಿರಬಹುದು. ಲಕ್ನೋದ ಜಲಗಾರರಿಗೆ ಈ ಕಲೆ, ಸಂಸ್ಕೃತಿ, ವಾಜಪೇಯಿ, ಪ್ರಕಾಶಮಾನ ಭಾರತ ಯಾವುದೂ ತಾವು ನಿತ್ಯ ಸ್ಪರ್ಶಿಸುವ ಹೊಲಸಿನ ನಡುವೆ ನೆನಪಾಗುವುದೇ ಇಲ್ಲ. ಅವರಿಗೆ ತಾವು ಹೊತ್ತೊಯ್ಯುವ ಹೊಲಸಿನಷ್ಟೇ ವಾಸ್ತವ ಅವರ ದೈನಂದಿನ ಬದುಕು. ಪ್ರಧಾನಿ ಕ್ಷೇತ್ರದ ಕೆಲವು ಜಲಗಾರರ ಅನಿಸಿಕೆಗಳು ಕೆಳಗಿನಂತಿವೆ (ಹೆಸರುಗಳನ್ನು ಬದಲಿಸಲಾಗಿದೆ) -

ರಾಣಿಯ ವಯಸ್ಸು 50 ವರ್ಷ. ಹೊಲಸು ಬಾಚುವ ವೃತ್ತಿಯಲ್ಲಿ 30 ವರ್ಷಗಳನ್ನು ಸವೆಸಿರುವಾಕೆ. ಜಲಗಾರೇತರ ಮಂದಿ ಶೌಚದಿಂದ ಪ್ರತಿದಿನವನ್ನು ಆರಂಭಿಸಿದರೆ, ರಾಣಿಯಂತವರು ಆ ಶೌಚವನ್ನು ಬಾಚಿ ಶುಚಿಗೊಳಿಸುವ ಮೂಲಕ ಆರಂಭಿಸುತ್ತಾರೆ. ಆಕೆಯ ತಲೆಯ ಮೇಲೊಂದು ಬಕೆಟ್, ಕೈಯಲ್ಲೊಂದು ಬಕೆಟ್ ಹೊಲಸನ್ನು ಗುಂಡಿಗೆ ಸಾಗಿಸುತ್ತವೆ. ಬದುಕಿನ ಏಕತಾನತೆಗೆ ಈಕೆಯೇ ಮೂರ್ತಿರೂಪ.

ರಾಣಿಯ ನೆರೆಮನೆಯ ಹುಡುಗಿ ಸಾವಿತ್ರಿ ಹೇಳುತ್ತಾಳೆ "ನನ್ನಮ್ಮ ಮೊದಲ ಸಾರಿ ಹೊಲಸು ಬಾಚಲು ಕಳುಹಿಸಿದ ದಿನ ನನಗೆ ಏನನ್ನು ತಿನ್ನಲಾಗಲಿಲ್ಲ. ಆದರೆ ಹಸಿದ ಹೊಟ್ಟೆಯಲ್ಲಿ ಎಷ್ಟು ದಿನ ಇರಲು ಸಾಧ್ಯ? ಕ್ರಮೇಣ ಹೊಲಸಿಗೆ ಒಗ್ಗಿಕೊಂಡೆ. ನಾನು ಕೆಲಸ ಮಾಡದೆ ಹೋದರೆ ನನ್ನ ತಾಯಿತಂದೆಗಳು ಉಪವಾಸವಿರಬೇಕು".

ರಾಣಿಯ ಇಬ್ಬರು ಹೆಣ್ಣುಮಕ್ಕಳಾದ ನೀಲು ಮತ್ತು ಶೀಲು ಶಾಲೆಯ ಮುಖ ನೋಡಲೇ ಇಲ್ಲ. ಅವರಿಗೆ ಬುದ್ಧಿ ತಿಳಿಯುವ ಹೊತ್ತಿಗೆ ಅವರು ಕಕ್ಕಸ್ಸಿನ ಸಂಪರ್ಕಕ್ಕೆ ಬಂದಿದ್ದರು. ಬಾಲ್ಯದ ಯಾವ ಸಂತೋಷವೂ ಅವರ ಪಾಲಿಗಿಲ್ಲ. ಪ್ರತಿಬಾರಿ ಹೊಲಸು ಬಾಚುವಾಗ ಅವರ ಮನಸ್ಸು ವಿಚಿತ್ರ ಸಂಕಟದಿಂದ ನರಳುತ್ತದೆ ಹೇಸಿಗೆಯ ಭಾವನೆಯಿಂದ ವಿಲವಿಲ ಒದ್ದಾಡುತ್ತದೆ.

ತಾನು ಕಕ್ಕಸ್ಸು ಬಾಚುವವಳು ಎಂಬ IDENTITY ಯಿಂದ ಉರ್ಮಿಳಾ ಎಷ್ಟು ಕುಗ್ಗಿಹೋಗಿದ್ದಾಳೆ ಎಂದರೆ ಬೇರೆಯವರ ಜೊತೆ ಮಾತನಾಡುವಾಗಲೆಲ್ಲ ಸೆರಗಿನಿಂದ ಮುಖ ಮುಚ್ಚಿಕೊಂಡೇ ಮಾತನಾಡುತ್ತಾಳೆ. "ನಾನೇನು ಮಾಡುವುದು ಸ್ವಾಮಿ. ಸರ್ಕಾರ ಇರುವುದು ಶ್ರೀಮಂತರಿಗಾಗಿ, ನಮಗಿರುವ ಸೌಲಭ್ಯದ ಹಣವನ್ನು ಅಧಿಕಾರಿಗಳೇ ನುಂಗಿ ಬಿಡುತ್ತಾರೆ. ಅವರನ್ನು ಕೇಳುವ ತಾಕತ್ತು ನಮಗಿಲ್ಲ. ನಾನು ಮಾತನಾಡಿದರೆ ನಿಂಗೇನು ಗೊತ್ತು. ಹೇಲು ಬಾಚೋಳು ನೀನು ಎಂದು ಬಾಯಿ ಮುಚ್ಚಿಸುತ್ತಾರೆ. ನಾನೆಷ್ಟರವಳು, ನಾನು ಹೊರುವ ಮಲದಷ್ಟೇ ಯೋಗ್ಯತೆ ನನ್ನದು" ಎಂದು ಬಿಕ್ಕಳಿಸುತ್ತಾಳೆ.

ಇವೆಲ್ಲ ಲಕ್ನೋ ನಗರಕ್ಕೆ ಮಾತ್ರ ಸೀಮಿತವಾದ ಚಿತ್ರಗಳೇನಲ್ಲ. ಭಾರತದ ಇತರ ಭಾಗಗಳಲ್ಲೂ ಇವೆ. ಒಬ್ಬೊಬ್ಬ ಜಲಗಾರನದೂ ಒಂದೊಂದು ಕರುಣ ಕತೆ. ಅವಮಾನಿತ ಬದುಕಿನ ಕರುಳು ಹಿಂಡುವ ಕಥೆ.

ಮಾಧ್ಯಮಗಳು ಜಲಗಾರರ ನೋವಿಗೆ ಸ್ಪಂದಿಸುವ ವರದಿಗಳನ್ನು ನೀಡಿದರೆ ಸರ್ಕಾರಕ್ಕೇನಾದರೂ ಒಂದಿಷ್ಟು ಒಳ್ಳೆಯ ಕೆಲಸ ಮಾಡಬಹುದೇನೋ. ಜಲಗಾರ ವೃತ್ತಿಯನ್ನು ಸಂಪೂರ್ಣ ನಿರ್ಮೂಲನೆ ಮಾಡಿ ಈಗಿರುವ ಜಲಗಾರರಿಗೆ ಪರ್ಯಾಯ ಉದ್ಯೋಗವಕಾಶ ಸೃಷ್ಟಿಸಬಹುದೇನೋ.

ಕೊನೆಯ ಕುಟುಕು: ನನಗೆ ಪ್ರಧಾನಿಯವರ ಕುರಿತು ವೈಯಕ್ತಿಕ ಜುಗುಪ್ಸೆಗಳೇನೂ ಇಲ್ಲ. ನೀವು ಕೇಳಬಹುದು ಈ ಹಿಂದಿನ ಸರ್ಕಾರಗಳ ಅವಧಿಯಲ್ಲೂ ಈ ಹಿಂದಿನ ಪ್ರಧಾನಿಗಳ ಆಡಳಿತದಲ್ಲೂ ಜಲಗಾರರು ಇರಲಿಲ್ಲವೇ ಎಂದು. ಖಂಡಿತಾ ಆಗಲೂ ಇದ್ದರು. ಒಂದೇ ವ್ಯತ್ಯಾಸವೆಂದರೆ ಆಗಲ್ಲ ಭಾರತ ಪ್ರಕಾಶಿಸುತ್ತಿರಲಿಲ್ಲ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ



ರಕ್ತ ವೃದ್ಧಿಸಲು ಕಬ್ಬಿಣದ ಅಂಶವಿರುವ ಮಾತ್ರೆಗಳನ್ನು ಕೊಡಬೇಕಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಅಗತ್ಯ ಔಷಧಿ ಪಟ್ಟಿಯಲ್ಲಿ ರಕ್ತವೃದ್ಧಿಗಾಗಿ ಫೆರಸ್ ಸಲ್ಫೇಟ್ (60 ಎಂ.ಜಿ ಕಬ್ಬಿಣದ ಖನಿಜ) ಫೋಲಿಕ್ ಆಮ್ಲ (1-5 ಮಿ.ಗ್ರಾಂ)ವನ್ನು ಸೂಚಿಸಲಾಗಿದೆ. ಸರಕಾರಿ ಆಸ್ಪತ್ರೆಗಳಲ್ಲಿ ರಕ್ತ ವೃದ್ಧಿಸುವ ಮಾತ್ರೆಗಳು ದೊರಕುತ್ತವೆ. ಅದರಲ್ಲಿ ಕಬ್ಬಿಣ 200 ಮಿ.ಗ್ರಾಂ ಫೆರಸ್ ಸಲ್ಫೇಟ್ (60 ಮಿ.ಗ್ರಾಂ ಕಬ್ಬಿಣದ ಖನಿಜ) ಫೋಲಿಕ್ ಆಮ್ಲ 5 ಮಿ.ಗ್ರಾಂ ಪ್ರಮಾಣದಲ್ಲಿ ಇರುತ್ತದೆ. ಇದು ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿದ ರಕ್ತವೃದ್ಧಿಸುವ ಔಷಧಿಯ ಸರಿಯಾದ ಸೂತ್ರ. ಈ ಸೂತ್ರದ ಮಾತ್ರೆ ಉಪಯೋಗಿಸಿದಲ್ಲಿ ನಿಗದಿತ ಸಮಯದಲ್ಲಿ ರಕ್ತ ವೃದ್ಧಿಯಾಗುತ್ತದೆ. ಈ ಮಾತ್ರೆಗಳು ಸರಕಾರಿ ಪ್ರಾಥಮಿಕ ಆರೋಗ್ಯಕೇಂದ್ರ, ಆಸ್ಪತ್ರೆಗಳಲ್ಲಿ ಉಚಿತವಾಗಿ ದೊರೆಯಬೇಕು, ದೊರೆಯುತ್ತವೆ ಎಂದು ಹೇಳಲಾರೆ. ಆದರೆ ಈ ಸೂತ್ರವಿರುವ ಕಬ್ಬಿಣದ ಮಾತ್ರೆಗಳು ಮಾರುಕಟ್ಟೆ ಯಲ್ಲಂತೂ ದೊರೆಯುವುದಿಲ್ಲ!

ಮಾರುಕಟ್ಟೆಯಲ್ಲಿ ದೊರಕುವ ರಕ್ತವೃದ್ಧಿ ಔಷಧಿಗಳು ಕ್ಯಾಪ್ಸೂಲ್, ಸಿರಪ್, ಚೀಪುವ ಮಾತ್ರೆಯ ರೂಪದಲ್ಲಿ ದೊರಕುತ್ತವೆ. ಕಬ್ಬಿಣದ ಪ್ರಮಾಣ ಬೇರೆ ಬೇರೆಯೂ ಆಗಿರುತ್ತದೆ. ಕಬ್ಬಿಣದ ಘಟಕವೂ ಬೇರೆ ಬೇರೆಯಾಗುತ್ತದೆ. ಇದರ ಪರಿಣಾಮವಾಗಿ ಚಿಕಿತ್ಸೆ ದುಬಾರಿಯಾಗುತ್ತದೆ ಹಾಗೂ ಮಾರುಕಟ್ಟೆಯಲ್ಲಿ ದೊರಕುವ ಸುಮಾರು ಎಲ್ಲಾ ರಕ್ತವರ್ಧಕಗಳು ಅಮಾಯಕರ ರಕ್ತಹೀನತೆಯ ನೋವು, ನಷ್ಟ ರೋಗಿಗಳಾದರೆ ಔಷಧಿ ಕಂಪನಿಗಳಿಗೆ ಅದರ ಲಾಭ ಮಾತ್ರ ಮುಖ್ಯವಾಗಿದೆ. ಅಗತ್ಯವಲ್ಲದ, ದುಬಾರಿ ರಕ್ತವೃದ್ಧಕಗಳನ್ನು ತಯಾರಿಸಿ ಮಾರುತ್ತಿವೆ.



1) ಕಬ್ಬಿಣದ ಪ್ರಮಾಣದಲ್ಲಿ ವ್ಯತ್ಯಾಸ

ಸರ್ಕಾರಿ ಆಸ್ಪತ್ರೆಗಳಲ್ಲಿ ದೊರಕುವ ಕಬ್ಬಿಣದ ಮಾತ್ರೆಗಳಲ್ಲಿ 200 ಮಿ.ಗ್ರಾ. ಕಬ್ಬಿಣ (60 ಮಿ.ಗ್ರಾ ಕಬ್ಬಿಣದ ಖನಿಜ) ಇರುತ್ತದೆ. ಇದನ್ನು ವಿಶ್ವ ಆರೋಗ್ಯ ಸಂಸ್ಥೆಯೂ ಸಮರ್ಥಿಸುತ್ತದೆ. ಆದರೆ ಮಾರುಕಟ್ಟೆಯಲ್ಲಿ ದೊರಕುವ ಔಷಧಿಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಕಬ್ಬಿಣ ಇರುತ್ತದೆ. ಅನೇಕ ವೇಳೆ ವೈದ್ಯರಿಗೂ ಎಷ್ಟು ಕಬ್ಬಿಣವಿದೆಯೆಂದು ಗೊತ್ತಿರುವುದೇ ಇಲ್ಲ. ಇದರಿಂದಾಗಿ ಎಷ್ಟು ದಿನ ಚಿಕಿತ್ಸೆ ಮುಂದುವರಿಯಬೇಕು ಎಂದು ಲೆಕ್ಕ ಮಾಡಲು ಸಾಧ್ಯವಾಗದೇ ಇರಬಹುದು. ಇದರಿಂದಾಗಿಯೇ ವೈದ್ಯರು ಸಾಮಾನ್ಯವಾಗಿ ರಕ್ತದ ಮಾತ್ರೆಗಳನ್ನು ಉಪಯೋಗಿಸಲು ಒಂದೆರಡು ತಿಂಗಳು ಸೂಚಿಸುತ್ತಾರೆ.

ಉದಾ: ಐಬೆರಾಲ್ (525 ಮಿ.ಗ್ರಾ) ಅನಿಮಿಡಾಕ್ಸ್ (360 ಮಿ.ಗ್ರಾಂ) ಟ್ರೈಪ್ಲರ್ (150 ಮಿ.ಗ್ರಾಂ) ಡೆಕ್ಸಾರೇಂಜ್ (160 ಮಿ.ಗ್ರಾಂ) ಡುಮಸೂಲ್ಲ ರೂಡ್ (100 ಮಿ.ಗ್ರಾಂ)

ಸಾಕಪ್ಪಾ, ಸಾಕು ! ನಾಫ್ತಾದ ಹತ್ತುವರ್ಷಗಳ ಅವಾಂತರ !

ನಾಫ್ತಾ (NAFTA -ಉತ್ತರ ಅಮೆರಿಕದ ಮುಕ್ತ ವ್ಯಾಪಾರ ಒಪ್ಪಂದ)ಗೆ 10 ವರ್ಷಗಳಾಗಿವೆ. ನಾಫ್ತಾಗೆ ಸೇರಿದ ಮೂರು ದೇಶಗಳಲ್ಲೂ ದುಡಿಯುವ ಜನರಲ್ಲಿ ಆತಂಕ ಇದಿತ್ತು. ಹತ್ತು ವರ್ಷಗಳ ಅನುಭವ ಅದು ನಿಜವಾದ ಆತಂಕ ಎಂದು ಸಿದ್ಧಪಡಿಸಿದೆ.

ಮೆಕ್ಸಿಕೊದ ಕೃಷಿಯ ನಾಶ

● ನಾಫ್ತಾದ ಮೋಸ ಮುಖ್ಯವಾಗಿ ಅಡಗಿದ್ದು ಮೆಕ್ಸಿಕೊದ ಕೃಷಿಯಲ್ಲಿ ಮಾಡಿದ ಅವಾಂತರಗಳಲ್ಲಿ.

● ಅಮೆರಿಕ ತನ್ನ ಕೃಷಿ ಸಬ್ಸಿಡಿ (ಅವರ ದೈತ್ಯ ಕಂಪನಿಗಳು) ಮುಂದುವರೆಸುತ್ತಾ, ಮೆಕ್ಸಿಕೊ ಯಾವುದೇ ರೀತಿಯ ಸಬ್ಸಿಡಿ ಕೊಡಬಾರದು ಎಂದು ನಾಫ್ತಾದಲ್ಲಿ ವಿಧಿಸಿತು.

● ಇದರಿಂದಾಗಿಅಮೆರಿಕನ್ ಕೃಷಿ ಉತ್ಪನ್ನ ಕಂಪನಿಗಳು ತಮ್ಮ ಉತ್ಪಾದನಾ ಬೆಲೆಗಿಂತಲೂ (ಸರ್ಕಾರದ ಸಬ್ಸಿಡಿ) ಕಡಿಮೆ ಬೆಲೆಗೆ ಮಾರಿ ಮೆಕ್ಸಿಕೊದ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಯಿಂದ ಆಚೆಗೆ ಎಸೆದವು.

● ನಾಫ್ತಾದ ಕೆಲವೇ ವರ್ಷಗಳಲ್ಲಿ ಮೆಕ್ಸಿಕೊದಲ್ಲಿ ಅಮೆರಿಕನ್ ಜೋಳದ ಮಾರಾಟ 15 ಪಟ್ಟಿಗೆ ಏರಿತು. ಮಾಂಸದ ಪ್ರಮಾಣದ ಎರಡರಷ್ಟಾಯಿತು. ಕೋಳಿ ಮಾಂಸ ರಫ್ತು ಪ್ರಮಾಣ ಮೂರು ಪಟ್ಟಾಯಿತು. ಹಂದಿಮಾಂಸದ ಪ್ರಮಾಣ ಇಪ್ಪತ್ತು ಪಟ್ಟಾಯಿತು. ಮೆಕ್ಸಿಕೊ ಕೃಷಿಯ ನಾಶದಿಂದ 13 ರಿಂದ 18.5 ಲಕ್ಷ ಜನ ತಮ್ಮ ಜೀವನೋಪಾಯ ಕಳೆದುಕೊಂಡರು.

● ಆದರೆ ಇದರರ್ಥ ಕೃಷಿ ಬೆಲೆಗಳು ಕುಸಿದು ಕನಿಷ್ಟ ನಗರದ ಬಡವರಿಗೆ ಅನುಕೂಲವಾಯಿತೆ? ಅದರಲ್ಲಿ ಎಳ್ಳಷ್ಟು ಕಡಿಮೆಯಾಗಲಿಲ್ಲ.

● ಕೃಷಿ ಕೈಗಾರಿಕೆ- ಎರಡರಲ್ಲೂ ಒಟ್ಟಾರೆ ಉದ್ಯೋಗವಕಾಶ ಕಡಿಮೆಯಾಗಿ ಮೆಕ್ಸಿಕನ್ನರು ಅಮೆರಿಕಕ್ಕೆ ವಲಸೆ ಹೋಗುತ್ತಿದ್ದಾರೆ (ಪ್ರತಿವರ್ಷ ಒಂದೂವರೆ ಲಕ್ಷದಂತೆ). ಮೆಕ್ಸಿಕನ್ನರ ಆದಾಯದಲ್ಲಿ ಹೆಚ್ಚಳ 60, 70 ರ ದಶಕಕ್ಕೆ ಹೋಲಿಸಿದರೆ 90 ರ ದಶಕದಲ್ಲಿ ಐದನೇ ಒಂದು ಭಾಗದಷ್ಟು.

ಮೂರು ದೇಶಗಳ ದುಡಿಯುವ ಜನರು ಇನ್ನೂ ಬಡವರಾಗಿದ್ದಾರೆ. ಅಮೆರಿಕದ ಕೆಲವೇ ದೈತ್ಯ ಕಂಪನಿಗಳು ತಮ್ಮ ಲಾಭವನ್ನು ಹೆಚ್ಚಿಸಿಕೊಂಡಿದ್ದಾರೆ. ನಾಫ್ತಾದ ಹತ್ತು ವರ್ಷಗಳ ಅವಾಂತರದ ವ್ಯಥೆ ಇಲ್ಲಿದೆ.

ನಾಫ್ತ ಮೂರು ವಿಶಿಷ್ಟ ದೇಶಗಳ ನಡುವೆ 'ಮುಕ್ತ' ವ್ಯಾಪಾರದ ಒಪ್ಪಂದವಾಗುತ್ತು. ಅಮೆರಿಕ, ಕೆನಡಾ ಮತ್ತು ಮೆಕ್ಸಿಕೋ ಆ ದೇಶಗಳಾಗಿದ್ದವು. ಸೂಪರ್‌ಪವರ್ ಅಮೆರಿಕಾ ಒಂದು ಕಡೆ. ಅಭಿವೃದ್ಧಿ ಆರ್ಥಿಕ ಮತ್ತು ವ್ಯಾಪಕ ಸಾಮಾಜಿಕ ಭದ್ರತೆ, ಕಾರ್ಮಿಕರ ರಕ್ಷಣಾ ಕ್ರಮಗಳಿದ್ದ ಕೆನಡಾ ಇನ್ನೊಂದು ಕಡೆ. ವ್ಯಾಪಕ ಬಡತನ, ಅಸಮಾನತೆ ಮತ್ತು ಹಿಂದುಳಿದ ಆರ್ಥಿಕದ ಮೆಕ್ಸಿಕೋ ಮತ್ತೊಂದು ಕಡೆ. ಈ ಮೂರು ದೇಶಗಳನ್ನು ಸೇರಿಸಿದರೆ, ಎಲ್ಲಾ ದೇಶಗಳ ಜನತೆಗೆ ಅನುಕೂಲವಾಗುತ್ತದೆ ಎಂಬ ಕಥೆಯನ್ನು ಯಾರೂ ನಂಬಿರಲಿಲ್ಲ. ಕೆಲವೇ ಅಮೆರಿಕನ್ ದೈತ್ಯ ಕಂಪನಿಗಳು ಲಾಭ ಪಡೆಯುತ್ತವೆ, ಉಳಿದವರೆಲ್ಲಾ ತಮ್ಮ ಇರುವ ಸವಲತ್ತುಗಳನ್ನು ಕಳೆದುಕೊಳ್ಳುತ್ತಾರೆ ಎಂಬುದೇ ವಿರೋಧಕ್ಕೆ ಕಾರಣವಾಗಿತ್ತು. ಹತ್ತು ವರ್ಷದ ನಂತರದ ಅನುಭವ ಏನು?

ಖಂಡಿತ ದೈತ್ಯ ಕಂಪನಿಗಳಿಗೆ ಲಾಭವಾಗಿದೆ!

ಯಾರಿಗೂ ಲಾಭವಾಗಿಲ್ಲವೇಂದೇನಿಲ್ಲ. ಕೆಲವರಿಗೆ ಖಂಡಿತ ಲಾಭವಾಗಿದೆ.

● ಹತ್ತು ವರ್ಷಗಳಲ್ಲಿ ಮೂರು ದೇಶಗಳ ನಡುವೆ ವ್ಯಾಪಾರ ಎರಡು ಪಟ್ಟಿಗಿಂತ ಹೆಚ್ಚಿದೆ.

● ಬಂಡವಾಳ ಹೂಡಿಕೆ ದರ ಎರಡು ಪಟ್ಟಿಗಿಂತ ಹೆಚ್ಚಿದೆ(137 ರಿಂದ300 ಶತಕೋಟಿ ಡಾಲರುಗಳಿಗೆ ಏರಿದೆ)

● ವಾಹನ, ವಾಹನ ಬಿಡಿ ಭಾಗಗಳು, ಕೃಷಿ ವ್ಯಾಪಾರದಲ್ಲೂ ತೊಡಗಿರುವ ಅಮೆರಿಕನ್ ಕಂಪನಿಗಳ ಲಾಭ ಎರಡರಿಂದ ಮೂರು ಪಟ್ಟಿನವರೆಗೆ ಹೆಚ್ಚಿದೆ.

● ಹೆಚ್ಚಿನ ಈ ಲಾಭ ಅಮೆರಿಕ-ಕೆನಡಾಗಳಿಂದ ಮೆಕ್ಸಿಕೋಗೆ ಕಾರ್ಖಾನೆ ವರ್ಗಾಯಿಸಿದ್ದರಿಂದ (ಮೆಕ್ಸಿಕೊದ ಕಡಿಮೆ ವೇತನದಿಂದ) ಬಂದಿದ್ದು.

● ಕಂಪನಿಗಳ ವಹಿವಾಟಿನ ಮೇಲೆ ನಿರ್ಬಂಧ ಹೇರುವ ಸರ್ಕಾರಗಳ ನಿಬಂಧನೆಗಳಿಂದ 'ತೊಂದರೆ' ಆದರೆ ಅದಕ್ಕೆ ಸರ್ಕಾರಗಳಿಂದ ಪರಿಹಾರ ಕೇಳಲು ಕಂಪನಿಗಳಿಗೆ ಹಕ್ಕು ಕೊಡುತ್ತದೆ. ಇಂತಹ ಕ್ರಮಕ್ಕೆ ಮೂರು ದೇಶಗಳ ಕಾನೂನುಗಳಲ್ಲಿ ಯಾವ ಆಧಾರವಿರದಿದ್ದರೂ ಆ ದೇಶದ ಕೋರ್ಟುಗಳನ್ನು ಮೀರಿ ಕುಳಿತಿರುವ ನಾಫ್ತಾ ಟ್ರಿಬ್ಯುನಲ್‌ಗಳು ಇಂತಹ ಪರಿಹಾರಗಳ ಬಗ್ಗೆ 'ತೀರ್ಪು' ಕೊಡುತ್ತವೆ.

● ಇಂತಹ 'ಪರಿಹಾರ'ವಾಗಿ ಕಂಪನಿಗಳಿಗೆ 13 ಶತಕೋಟಿ ಡಾಲರು ಲಾಭ ಹರಿದುಬಂದಿದೆ. (ಮೆಕ್ಸಿಕೊದ ಮುನಿಸಿಪಾಲಿಟಿ ಒಂದು ಅಮೆರಿಕನ್ ಕಂಪನಿಗೆ ಅಪಾಯಕಾರಿ ರಾಸಾಯನಿಕ ಕಲ್ಮಶಗಳ ಶುದ್ಧೀಕರಣದ ಕಾರ್ಖಾನೆಗೆ ಅನುಮತಿ ನಿರಾಕರಿಸಿದ್ದಕ್ಕಾಗಿ 1.7 ಕೋಟಿ ಡಾಲರುಗಳ ಪರಿಹಾರ ಮೆಕ್ಸಿಕೊ ಸರ್ಕಾರ ಕೊಡಬೇಕಾಗಿ ಬಂತು.

ಕಾರ್ಮಿಕರಿಗೆ ನಾಫ್ತಾದಿಂದ ಎಲ್ಲೆಲ್ಲೂ ಕುತ್ತು

ಅಮೆರಿಕಾ

■ ನಾಫ್ತಾದಿಂದಾಗಿ ಅಮೆರಿಕದಲ್ಲಿ ಸುಮಾರು 30 ಲಕ್ಷ ಕೈಗಾರಿಕಾ ಉದ್ಯೋಗಗಳು ಮಾಯವಾದವು. (ಪ್ರತಿವರ್ಷ 1.7 ಲಕ್ಷ ಅಂದರೆ ಹತ್ತು ವರ್ಷಗಳಲ್ಲಿ 17 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವುದು ನಾಫ್ತಾ ಕತೆದಾರರ ಕಥೆಯಾಗಿತ್ತು)

■ ಅಮೆರಿಕನ್ ಸರ್ಕಾರವೇ ಕನಿಷ್ಟ 5.7 ಲಕ್ಷ ಉದ್ಯೋಗಗಳು ಮಾಯವಾಗಿವೆ ಎಂದು ಒಪ್ಪಿಕೊಂಡಿದೆ. ನಾಫ್ತಾದಿಂದ ಉದ್ಯೋಗ ಕಳೆದುಕೊಂಡವರಿಗೆ ಕೊಡುವ ಪರಿಹಾರಕ್ಕೆ 5.7 ಲಕ್ಷ ಜನ ಅರ್ಹರು ಎಂದು ಸರ್ಕಾರ ಗುರುತಿಸಿದೆ.

ಕೆನಡಾ

■ ಮೂರು ಲಕ್ಷ ಕೈಗಾರಿಕಾ ಉದ್ಯೋಗಗಳನ್ನು ನಾಫ್ತಾ ನುಂಗಿ ಹಾಕಿತು.

■ ಕೆನಡಾದ ಕಾರ್ಮಿಕರ ನಿಜ ವೇತನ ಹತ್ತು ವರ್ಷಗಳಲ್ಲಿ ಶೇಕಡಾ 20 ರಷ್ಟು ಕಡಿಮೆಯಾಯಿತು.

■ ನಿರುದ್ಯೋಗ ವೇತನ, ಇತರ ಸಾಮಾಜಿಕ ಭದ್ರತಾ ಕ್ರಮಗಳು, ವೈದ್ಯಕೀಯ ಮತ್ತು ಇತರ ಸಾರ್ವಜನಿಕ ಸವಲತ್ತುಗಳಲ್ಲಿ ತೀವ್ರ ಕಡಿತವಾಗಿವೆ.

■ ಜಗತ್ತಿನಲ್ಲೇ ಅತ್ಯಂತ ಉತ್ತಮ ಸಾಮಾಜಿಕ ಕಲ್ಯಾಣ ವ್ಯವಸ್ಥೆಯು ಕೆನಡಾ ವಿಶ್ವಸಂಸ್ಥೆ ತಯಾರಿಸುವ ಮಾನವ ಸಾಮಾಜಿಕ ಅಭಿವೃದ್ಧಿ ಸೂಚಕದಲ್ಲಿ ಮೊದಲನೇ ಸ್ಥಾನದಿಂದ ಹತ್ತು ವರ್ಷಗಳ ಅವಧಿಯಲ್ಲಿ 9ನೇ ಸ್ಥಾನಕ್ಕೆ ಇಳಿದಿದೆ.

ಮೆಕ್ಸಿಕೊ

■ ಅಮೆರಿಕಾ ಕೆನಡಾಗಳಲ್ಲಿ ನಾಫ್ತಾ ಮಾಯಾ ಮಾಡಿದ ಉದ್ಯೋಗಗಳು ಮೆಕ್ಸಿಕೊಗೆ ಬಂದವೇ? ಇಲ್ಲ. ಇದು ನಾಫ್ತಾದ ಅತ್ಯಂತ ನಿಗೂಢ ರಹಸ್ಯ.

■ ನಾಫ್ತಾದ ಭಾಗವಾಗಿ ಬಂದ ಆಮದು ನಿರ್ಬಂಧಗಳ ಸಡಿಲಿಕೆಯಿಂದ ಸ್ಥಳೀಯ ಬಳಕೆಗೆ ಮೆಕ್ಸಿಕೊದ ಕೈಗಾರಿಕಾ ಉತ್ಪನ್ನಗಳಿಗೆ ಬೇಡಿಕೆ ಇಲ್ಲವಾಗಿ 10 ಲಕ್ಷ ಉದ್ಯೋಗಗಳು ನಾಶವಾದವು.

■ ಅಮೆರಿಕ, ಕೆನಡಾಗಳಿಂದ ಬಂದ ಸುಮಾರು 13 ಲಕ್ಷ ಉದ್ಯೋಗಗಳು ಮೆಕ್ಸಿಕೊ ಗಡಿಯ ಕಾರ್ಖಾನೆಗಳಲ್ಲಿ ಕೆಲವು ಕಾಲ ನೆಲೆಸಿತು. ಅಮೆರಿಕದ ಬಳಕೆದಾರರಿಗೆ ಈ ಕಾರ್ಖಾನೆಗಳ ಉತ್ಪಾದಿಸುತ್ತಿದ್ದು, 2001 ರ ಹೊತ್ತಿಗೆ ಅಮೆರಿಕ ಆರ್ಥಿಕ ಕಂಡ ಹಿಂಜರಿತದಿಂದ 4 ಲಕ್ಷ ಉದ್ಯೋಗಗಳು ನಾಶವಾದವು.

■ ಅಮೆರಿಕದ ದೈತ್ಯ ಕಂಪನಿಗಳನ್ನು ಆಕರ್ಷಿಸಲು ಮೆಕ್ಸಿಕೊ ಸರ್ಕಾರ ಕಾರ್ಮಿಕರ ವೇತನವನ್ನು ಕನಿಷ್ಟ ಪ್ರಮಾಣಕ್ಕೆ ಇಳಿಸಿತು. ಕಾರ್ಮಿಕರ ಎಲ್ಲಾ ಕಲ್ಯಾಣ ಕ್ರಮಗಳನ್ನು ಮೊಟಕು ಅಥವಾ ಕಡಿತ ಗೊಳಿಸಿತು.


■ ಮೆಕ್ಸಿಕೊದಲ್ಲಿ ಕನಿಷ್ಟ ವೇತನ (ದಿನಕೂಲಿ 4.2 ಡಾಲರು) ಅಮೆರಿಕದ ಕನಿಷ್ಟ ವೇತನ (ಗಂಟೆಗೆ 5 ಡಾಲರು) ಕ್ಕಿಂತ ಹತ್ತು ಪಟ್ಟು ಕಡಿಮೆ ಇದ್ದು, ಕಳೆದ ಹತ್ತು ವರ್ಷಗಳಲ್ಲಿ ಯಾವುದೇಹೆಚ್ಚಳ ಕಂಡಿಲ್ಲ.

ಬಿಪಿಎಲ್ ಕಾರ್ಡಿಗೆ ಸಂಗ್ರಹಿಸಿದ ಲಂಚ ಬಯಲಿಗೆಳೆದ ಡಿವೈಎಫ್ಐ

ರಾಜ್ಯ ಸರ್ಕಾರದ ಯೋಜನೆಯಡಿಯಲ್ಲಿ ಕಡುಬಡವರಿಗಾಗಿ ಜಾರಿಯಲ್ಲಿರುವ ಹಸಿರು ಪಡಿತರ ಚೀಟಿ ವಿತರಣೆಗಾಗಿ ಅರ್ಜಿದಾರರ ಉತ್ಪನ್ನ ಹಾಗೂ ವಾರಸಾಗಳನ್ನು ಮಾಡಿ ಕೊಡುವ ವೇಳೆ ದಾಂಡೇಲಿಯ ಉಪತಹಶೀಲ್ದಾರ ಕಚೇರಿಯಲ್ಲಿ ಕಂದಾಯ ಅಧಿಕಾರಿಗಳು ಬಡವರಿಂದ 10 ರಿಂದ 100, 200 ರೂ. ಗಳವರೆಗೆ ಲಂಚ ಪಡೆಯುತ್ತಿರುವ ಸಂಗತಿಯನ್ನು ನಗರದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್ಐ) ನ ಪದಾಧಿಕಾರಿಗಳು ಪ್ರತ್ಯಕ್ಷವಾಗಿ ಬಯಲಿಗೆಳೆದಿದ್ದಾರೆ

ಪಡಿತರ ಚೀಟಿಗಾಗಿ ಉತ್ಪನ್ನ ದಾಖಲೆಗಳನ್ನು ದೃಢೀಕರಿಸಲು ಇಂದು ಬೆಳಿಗ್ಗೆಯಿಂದ ಸುತ್ತಮುತ್ತಲಿನ ಬಡಜನರು ಕಂದಾಯ ನಿರೀಕ್ಷಕರ ಕಚೇರಿಯಲ್ಲಿ ಸೇರಿದ್ದರು. ಒಂದು ಅರ್ಜಿ ಫಾರ್ಮನ್ನು ದೃಢೀಕರಿಸಿಕೊಡಲು ಕಂದಾಯ ನಿರೀಕ್ಷಕರು ಹಾಗೂ ಅಲ್ಲಿಯ ಕೆಲವು ಸಿಬ್ಬಂದಿಗಳು ಬಡಜನರಿಂದ 10 ರಿಂದ 100 ರೂ.ಗಳವರೆಗೂ ಪಡೆಯುತ್ತಿದ್ದರು. ಈ ವಿಷಯ ಡಿವೈಎಫ್ಐನ ಪದಾಧಿಕಾರಿಗಳಿಗೆ ತಿಳಿಸಿದಾಗ ಲಂಚ ಸ್ವೀಕರಿಸುತ್ತಿದ್ದ ಅಧಿಕಾರಿಗಳನ್ನು ಹಿಡಿಯಲು ಹೊಂಚು ಹಾಕುತ್ತಿದ್ದರು.

ಸಾಯಂಕಾಲ 6 ಗಂಟೆಯ ಸುಮಾರಿಗೆ ಡಿವೈಎಫ್ಐನ ಪದಾಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಿದ್ದ ಕಂದಾಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಾಗ ಎಲ್ಲರೂ ಕಂಗಾಲಾದರು. ತಾವು ಲಂಚ ಸ್ವೀಕರಿಸಿಲ್ಲ ಎಂದು ನುಣುಚಿಕೊಳ್ಳಲು ಪ್ರಯತ್ನಿಸಿದಾಗ ಡಿವೈಎಫ್ಐ ನವರು ಅಲ್ಲಿಯೇ ಇದ್ದ ಟೇಬಲ್ ಡ್ರಾಯರ್ ತೆಗೆಯಲು ಹೇಳಿದಾಗ ಅದರಲ್ಲಿ ಸಾವಿರಾರು ರೂ.ಗಳು ಇರುವುದು ಗೋಚರಿಸಿತು. ಡ್ರಾವರ್‌ನಲ್ಲಿ 10, 20, 50, 100 ರ ನೋಟುಗಳ ಕಂತೆಯೇ ತುಂಬಿಕೊಂಡಿತ್ತು. ಲಂಚ ಪಡೆದಿರುವುದು ಸಾಬೀತಾದರೂ ಅಲ್ಲಿನ ಫಲಾನುಭವಿಗಳಿಗೆ ತಮ್ಮ ಕೆಲಸವಾದರೆ ಸಾಕೆಂದು ತಾವ್ಯಾರೂ ಹಣ ನೀಡಿಲ್ಲ ಎನ್ನುತ್ತಿರುವುದು ವಿಪರ್ಯಾಸದ ಸಂಗತಿಯಾಗಿತ್ತು. ಇನ್ನೊಂದು ಕಡೆ ಕೆಲವು ಜನರು ತಾವು ಲಂಚ ನೀಡಿರುವುದು ಸತ್ಯ ವಿಷಯವೆಂದು ಒಪ್ಪಿಕೊಂಡರು.



ಡಿವೈಎಫ್ಐ ಕಾರ್ಯಕರ್ತರು ಮತ್ತು ಲಂಚದ ಹಣ

ಈ ವಿಷಯವಾಗಿ ಅಲ್ಲಿಯೇ ಇದ್ದ ಉಪ ತಹಶೀಲ್ದಾರ ಅವರಲ್ಲಿ ವಿಚಾರಿಸಿದಾಗ ಲಂಚ ತೆಗೆದುಕೊಳ್ಳುತ್ತಿರುವುದು ನನ್ನ ಗಮನಕ್ಕೆ ಬಂದಿರಲಿಲ್ಲ. ಲಂಚ ಪಡೆದಿದ್ದರೆ ಅದು ಅಕ್ಷಮ್ಯ ಅಪರಾಧ. ಮುಂದೆ ಈ ರೀತಿ ಆಗದಂತೆ ನಾನು ನೋಡಿಕೊಳ್ಳುತ್ತೇನೆ ಎಂದರು. ಹಣ ನೀಡದೇ ಇರುವ ಬಡ ಭಿಕ್ಷುಕನೋರ್ವ ಅರ್ಜಿ ಫಾರ್ಮನ್ನು ಕಂದಾಯ ಅಧಿಕಾರಿಗಳು ತಿರಸ್ಕರಿಸಿರುವುದನ್ನು ಡಿವೈಎಫ್ಐನವರು ಸಾಬೀತುಪಡಿಸಿದರು.

ಕೂಳಿಗೆ ಕಾಳಿಲ್ಲದೆ ಬದುಕುತ್ತಿರುವ ಬಡವರು ಗಂಜಿಗಾಗಿ ಪಡಿತರ ಚೀಟಿ ಪಡೆಯಲು ಅರ್ಜಿ ಸಲ್ಲಿಸಲು ಹೋದಾಗ ಕಂದಾಯ ಇಲಾಖೆಯ ನಿರೀಕ್ಷಕರು ಹಾಗೂ ಸಿಬ್ಬಂದಿಗಳು ಬಡ ಜನರಿಂದಲೇ ಲಂಚ ಪಡೆದಿರುವುದು ಖಂಡನಾರ್ಹ. ಈ ಬಗ್ಗೆ ಡಿವೈಎಫ್ಐ ಜಿಲ್ಲಾಧಿಕಾರಿಗಳಿಗೆ ದೂರು ನೀಡಲಿದೆ. ತಕ್ಷಣ ಮೇಲಾಧಿಕಾರಿಗಳು ಸ್ಪಂದಿಸಿ ವಿಚಾರಣೆ ನಡೆಸಿ ತಪ್ಪಿತಸ್ಥರ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಸಂಘಟನೆ ಒತ್ತಾಯಿಸಿದೆ. ಒಂದೊಮ್ಮೆ ಇನ್ನು ಮುಂದೆಯೂ ಸಹ ಅಧಿಕಾರಿಗಳು ಇದೇ ರೀತಿಯಾಗಿ ಶೋಷಣೆ ನಡೆಸುತ್ತಿದ್ದರೆ ಜನಪರ ಸಂಘಟನೆಯಾಗಿರುವ ಡಿವೈಎಫ್ಐ ಸಮಾನ ಮನಸ್ಕ ಸಂಘಟನೆಗಳೊಂದಿಗೆ ಭ್ರಷ್ಟ ಅಧಿಕಾರಿಗಳ ವಿರುದ್ಧ ಹೋರಾಟ ನಡೆಸಲಿದೆ ಎಂದು ಎಚ್ಚರಿಸಿದೆ.



ಮಹಿಳಾ ಹಾಕಿ ತಂಡಕ್ಕೆ ಚೊಚ್ಚಲ ಏಷ್ಯಾ ಕಪ್

ಭಾರತೀಯ ಕ್ರೀಡೆ ಎಂದರೆ ಕ್ರಿಕೆಟ್ ಮಾತ್ರವೆ ಎಂಬ ಸಂದರ್ಭದಲ್ಲಿ ಭಾರತೀಯ ಇತರ ಕೀಡೆಗಳಾದ ಹಾಕಿ, ಟೆನಿಸ್, ಚೆಸ್, ಫುಟ್ ಬಾಲ್ ಹೀಗೆ ಹಲವು ಗಮನಾರ್ಹ ಸಾದನೆಯತ್ತ ಸಾಗಿವೆ.

ಕಾಮನ್ ವೆಲ್ತ್, ಏಷ್ಯನ್ ಹಾಗೂ ಆಫ್ರೋ ಏಷ್ಯನ್ ಕೀಡಾಕೂಟಗಳಲ್ಲಿ ಅತ್ಯುತ್ತಮ ಸಾಧನೆ ತೋರಿದ ಮಹಿಳಾ ಹಾಕಿ ತಂಡ ಈ ಬಾರಿಯ ಏಷ್ಯಾಕಪ್ ನ್ನು ತನ್ನ ಮುಡಿಗೇರಿಸಿಕೊಂಡಿದೆ.

ಭಾರತೀಯ ರಾಷ್ಟ್ರೀಯ ಕ್ರೀಡೆ ಹಾಕಿ ದಿನದಿಂದ ದಿನಕ್ಕೆ ಉತ್ತಮ ಸಾಧನೆಗಳ ಮೂಲಕ ಹೆಚ್ಚಿನ ಮಾನ್ಯತೆ ಗಳಿಸುತ್ತಿದೆ. ಭಾರತದ ಪುರುಷರ ಹಾಕಿ ತಂಡ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಲಯಕಂಡುಕೊಂಡು ತೋರುತ್ತಿರುವ ಅತ್ಯುತ್ತಮ ಸಾಧನೆ ಮೂಲಕ ತನ್ನ ಆರಂಭದ ವೈಭವದ ದಿನಗಳನ್ನು ನೆನಪಿಗೆ ತಂದಂತಿದೆ.

ಕಾಮನ್ ವೆಲ್ತ್, ಏಷ್ಯಾನ್, ಆಫ್ರೋ-ಏಷ್ಯಾನ್, ಕ್ರೀಡಾ ಕೂಟಗಳಲ್ಲಿ ಉತ್ತಮ ಪ್ರದರ್ಶನ ತೋರಿದ ಮಹಿಳಾ ಹಾಕಿ ತಂಡ ಚಾಂಪಿಯನ್ ತಂಡವಾಗಿ ಹೆಮ್ಮಯಿಂದ ಹೊರ ಹೊಮ್ಮಿ ಇದೀಗ ಏಷ್ಯಾ ಕಪ್ ಗೆದ್ದಿದೆ.

ಈ ಸಾಧನೆ ಮಾಡಲು ನಮ್ಮ ಕ್ರೀಡಾ ಪಟುಗಳು ಪಟ್ಟ ಶ್ರಮ, ತೋರಿದ ಏಕಾಗ್ರತೆ, ಸಾಂಘಿಕ ಪ್ರದರ್ಶನ ಮೆಚ್ಚುವಂತದ್ದು,

ಪುರುಷರ ಸರಿಸಮಾನ ಸಾಧನೆ ತೋರುತ್ತಿರುವ ಮಹಿಳಾ ತಂಡೆ ಕೆಳೆದ ಬಾರಿ ಜಪಾನ್‌ಗೆ ಸ್ವಲ್ಪದರಲ್ಲಿ ಮಣಿದು ಪ್ರಶಸ್ತಿ ವಂಚಿತವಾಗಿತ್ತು.

ವಿಜಯೋತ್ಸವದ ಸಂಭ್ರಮದಲ್ಲಿ ವನಿತೆಯರು



ಡಿಎನ್‌ಎ ಪರೀಕ್ಷೆ

ಜ್ಞಾನ ವಿಜ್ಞಾನ

ಇತ್ತೀಚಿಗೆ ಹೈದರಾಬಾದಿನ ಆಸ್ಪತ್ರೆಗಳಲ್ಲಿ ಗಂಡು 'ಶಿಶು'ಗಳ ಅಪಹರಣ 'ಅದಲಿ-ಬದಲಿ'ಗಳ ಹಗರಣಗಳ ಬಗ್ಗೆ ನೀವು ಓದಿರಬಹುದು. ಅದೇ ರೀತಿ ಹಿಂದೆ ಪತ್ರಕರ್ತೆ, ಇತ್ತೀಚಿಗೆ ಕವಯಿತ್ರಿಯ ಕೊಲೆ ಪ್ರಕರಣದಲ್ಲೂ ಡಿಎನ್‌ಎ ಪರೀಕ್ಷೆ ಬಳಸಲಾಯಿತು ಎಂದು ಸುದ್ದಿಯಾಯಿತು. ಏನಿದು ಡಿಎನ್‌ಎ ಪರೀಕ್ಷೆ?

ಡಿಎನ್‌ಎ ಪರೀಕ್ಷೆ ಯಾವುದೇ ವ್ಯಕ್ತಿ ಇನ್ನೊಂದು ವ್ಯಕ್ತಿ ಜತೆ ರಕ್ತ ಸಂಬಂಧ ಹೊಂದಿದ್ದಾರೆಯೇ ಎಂದು ಪತ್ತೆ ಹಚ್ಚಲು ಸಹಾಯ ಮಾಡುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ ಒಂದು ಮಗುವಿನ ತಂದೆ ಅಥವಾ ತಾಯಿ ಯಾರು ಎಂದು ಹೇಳಬಹುದು. ಮಗು ಒಂದು ನಿರ್ದಿಷ್ಟ ದಂಪತಿಗಳದ್ದೇ ಎಂದೂ ಹೇಳಬಹುದು.

ಡಿಎನ್‌ಎ ಪರೀಕ್ಷೆಯಲ್ಲಿ ಎರಡು ವ್ಯಕ್ತಿಗಳ ಡಿಎನ್‌ಎ ತೆಗೆದುಕೊಂಡು ಅವುಗಳಲ್ಲಿನ ಸಾಮ್ಯ ಪರೀಕ್ಷಿಸಲಾಗುವುದು. ಡಿಎನ್‌ಎ (DNA--ಡಿಆಕ್ಸಿರಿಬೊ ನ್ಯೂಕ್ಲಿಯಕ್ ಆಸಿಡ್) ಯಾವುದೇ ಜೀವಿಯ ಮೂಲಭೂತ ಕೋಶ(CELL)ದ ಪ್ರಮುಖ ಘಟಕ. ಜೀವಿಯ ವಿಶಿಷ್ಟ ಲಕ್ಷಣಗಳನ್ನು (ಬಣ್ಣ, ಕಣ್ಣಿನ ಬಣ್ಣ, ಎತ್ತರ ಇತ್ಯಾದಿ) ನಿಯಂತ್ರಿಸುವ ಡಿಎನ್‌ಎ ಮುಂದಿನ ಪೀಳಿಗೆಗೆ ಈ ಹಲವು ಲಕ್ಷಣಗಳನ್ನು ಒಯ್ಯುವ ವಾಹಕ ಸಹ. ಡಿಎನ್‌ಎ ನಾಲ್ಕು ಪ್ರಮುಖ ರಾಸಾಯನಿಕಗಳ ವಿಶಿಷ್ಟ ಸರಣಿಯಿಂದ ಆದ ಒಂದು ವಿಶಿಷ್ಟ ಸಂಜ್ಞೆ. ಈ ಸರಣಿ 30 ಲಕ್ಷದಷ್ಟು ದೊಡ್ಡ ಸಂಜ್ಞೆ. ಇದರಲ್ಲಿ ಸಾವಿರದಲ್ಲಿ ಒಂದು ಭಾಗ ಮಾತ್ರ ಬೇರೆಯಾಗಿರುತ್ತದೆ - ಪ್ರತಿ ವ್ಯಕ್ತಿಯಲ್ಲಿ.

ಬಾಕಿ ಎಲ್ಲಾ ಮನುಷ್ಯರಿಗೆ ಒಂದೇ ಆಗಿರುತ್ತದೆ. ಬೇರೆ ಬೇರೆ ಜೀವ ಪ್ರಕಾರಗಳಿಗೆ ಇನ್ನೂ ಹೆಚ್ಚು ವ್ಯತ್ಯಾಸ ಇರುವುದು. ಉದಾಹರಣೆಗೆ ಚಿಂಪಾಂಜಿ (ಮಂಗಗಳ ಒಂದು ಜಾತಿಗೂ) ಮನುಷ್ಯರಿಗೆ ಡಿಎನ್‌ಎ ಸಂಜ್ಞೆಯಲ್ಲಿ ಕೇವಲ 60 ರಲ್ಲಿ ಒಂದು ಭಾಗ ಮಾತ್ರ ಬೇರೆಯಾಗಿರುತ್ತದೆ.

ಡಿಎನ್‌ಎ ಸರಣಿ ತಂದೆ-ತಾಯಿ ಮಕ್ಕಳಲ್ಲಿ ತೀರಾ ಕಡಿಮೆ ವ್ಯತ್ಯಾಸಗಳಿರುತ್ತವೆ. ಆದ್ದರಿಂದ ಡಿಎನ್‌ಎ ಪರೀಕ್ಷೆಯಿಂದ ಒಂದು ಮಗು ಮತ್ತು ಒಬ್ಬ ವ್ಯಕ್ತಿಯ ಡಿಎನ್‌ಎ ಪರೀಕ್ಷೆಯಿಂದ, ಆ ವ್ಯಕ್ತಿ ಆ ಮಗುವ ತಂದೆ/ತಾಯಿ ಹೌದೇ ಎಂದು ಖಚಿತಪಡಿಸಬಹುದು. ಡಿಎನ್‌ಎ ಒಂದು ರೀತಿಯಲ್ಲಿ ಬೆರಳಚ್ಚು ಇದ್ದಂತೆ. ಒಬ್ಬ ವ್ಯಕ್ತಿಯ ಡಿಎನ್‌ಎ ಮೊದಲೆ ಪಡೆದಿದ್ದರೆ, ಡಿಎನ್‌ಎ ಪರೀಕ್ಷೆಯಿಂದ ಆ ವ್ಯಕ್ತಿಯನ್ನು ಯಾವಾಗಲೂ ಗುರುತಿಸಬಹುದು. ಇದನ್ನು ಹಲವು ರೀತಿಯಲ್ಲಿ ಬಳಸಲಾಗುತ್ತದೆ. ಅಪರಾಧಿಗಳ ಗುರುತು ಹಿಡಿಯಲು - ಇತ್ಯಾದಿ.

ಸುಣ್ಣದ ಗುಂಡಿಯಲ್ಲಿ ಮಕ್ಕಳು.....

ಪುಟ 2 ರಿಂದ

ಹೋರಾಡುತ್ತದೆ. ಅದಕ್ಕೇ ಎಂದರು. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವು ಕೆಲವುತುಂಬ ಬುದ್ಧಿವಂತ, ಸುಸಂಸ್ಕೃತ, ನಿಷ್ಠಾವಂತ ಯುವಕರನ್ನು ಆಕರ್ಷಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಈ ಯುವಕರು ಮಾಸ್ಕೊ ತಾಳಕ್ಕೆ ಕುಣಿಯುವುದಿಲ್ಲ. ಬದಲಾಗಿ ಈ ದೇಶದಲ್ಲಿನ ದಮನಕ್ಕೊಳಗಾದ ಜನರ ಸ್ಥಿತಿಗತಿಗಳೇ ಅವರನ್ನು ಈ ಪಕ್ಷದ ವತಿಯಿಂದ ಹೋರಾಡುವಂತೆ ಒತ್ತಾಯಿಸಿವೆ ಅನ್ನಿಸದಿರದು. ಇತರ ರಾಜಕೀಯ ಪಕ್ಷಗಳನ್ನು ಧೂಳೀಪಟ ಮಾಡಿ ಮೂಲ ವಿಷಯಗಳನ್ನೇ ಮರೆತು ಬೇರೆ ಕಡೆ ಗಮನ ಕೇಂದ್ರೀಕರಿಸುವಂತೆ ಮಾಡುವವರ ಪ್ರಭಾವಕ್ಕೆ ಇವರು ಒಳಗಾಗಲಿಲ್ಲ.

ಗಾಂಧಿ, ನೆಹರೂ ಒಳ್ಳೆಯವರಿರಬಹುದು. ಆದರೆ ಭಾರತದ ಬಹುತೇಕ ನಾಯಕತ್ವ ಇಂದು ಬಂಡವಾಳಶಾಹಿಗಳ ಹಾಗೂ ಶ್ರೀಮಂತರ ಪರವಾಗಿದೆ ಎಂದು ಅಯ್ಯಂಗಾರ್ ಹೇಳಿದರು.

ಅಯ್ಯಂಗಾರ್ ತಮ್ಮ ಬಗ್ಗೆ ಇಷ್ಟು ಹೇಳಿ ಮುಗಿಸುವ ಹೊತ್ತಿಗೆ ಕೆಂಪು ಬ್ಯಾನರ್ ಹಿಡಿದ ಯುವಕರ ಒಂದು ಸಣ್ಣ ಮೆರವಣಿಗೆ ನಮಗೆ ಎದುರಾಯಿತು. ಆ ಬ್ಯಾನರಿನ ಒಂದು ಮೂಲೆಯಲ್ಲಿ ಸುತ್ತಿಗೆ ಮತ್ತು ಕುಡುಗೋಲು ಚಿಹ್ನೆ. ಇನ್ನೊಂದು ಕಡೆ ಬಿಳಿಯ ಬಟ್ಟೆಯಲ್ಲಿ ತಮಿಳು ಅಕ್ಷರಗಳ ಬರಹ "ಇವರು ತಿರುಚಿ ಟ್ಯಾನರಿ ಕಾರ್ಮಿಕ ಸಂಘದ ಪ್ರತನಿಧಿಗಳು' ಎಂದು ಅಯ್ಯಂಗಾರ್ ಹೇಳುವಾಗ ಇವರೆಲ್ಲ ತಮ್ಮ ಸ್ವಂತ ಮಕ್ಕು ಎಂಬಷ್ಟು ಹೆಮ್ಮೆ ಅವರ ದನಿಯಲ್ಲಿತ್ತು. ಮುಂದಿನ ಹಳ್ಳಿಯಲ್ಲಿ ದೊಡ್ಡ ಆಲದ ಮರದ ಕೆಳಗೆ ಇಂದು ರಾತ್ರಿ ಸಂಘದ ಸಭೆ ಇದೆ. ಅದಕ್ಕಾಗಿ ಅವರು ಟ್ಯಾನರಿಗಳಲ್ಲಿ ದುಡಿಯುವ ಮಕ್ಕಳನ್ನು ಕರೆಯುತ್ತಿದ್ದಾರೆ ಎಂದು ಗೊತ್ತಾಯಿತು.

ಬಹುಮಂದಿ ಮಕ್ಕಳೇ ಇದ್ದ ಆ ವಿಶೇಷ ಯೂನಿಯನ್ ಸಭೆಯ ಫೋಟೋಗಳನ್ನು ಆ ರಾತ್ರಿ ನಾನು ತೆಗೆದೆ. ಹುಡುಗರೆಲ್ಲಾ ತಮ್ಮ ಕೆಲಸವನ್ನು ಮುಗಿಸಿಕೊಂಡು ಸಂಜೆಗತ್ತಲು ಕವಿಯುತ್ತಿರುವಾಗ ಸಭೆಗೆ ಬರತೊಡಗಿದರು. ಆಲದ ಮರದ ಕೆಳಗೆ ಸದ್ದು ಮಾಡದೆ ಕುಳಿತರು. ಸಾಕಷ್ಟು ಕತ್ತಲಾಗುತ್ತಾ ಬಂದಂತೆ ಲೆದರ್ ಕಾರ್ಮಿಕರ ಪ್ರವಾಹವೇ ಹರಿದುಬಂದಿತು. ಆಲದಮರದ ವ್ಯಾಪ್ತಿಯಿಂದ ಆಚೆಗೂ ಬಹುದೂರದವರೆಗೆ ಅಸಂಖ್ಯಾತ ಜನ . ಅವರೆಲ್ಲ ಅಸ್ಪೃಶ್ಯರು. ಇದರಲ್ಲಿ ಮಕ್ಕಳ ಸಂಖ್ಯೆಯೇ ಅಧಿಕ. ಇಷ್ಟು ಗಂಭೀರ ಮುಖಮುದ್ರೆಯ. ಮಕ್ಕಳನ್ನು ನಾನು ಅದುವರೆಗೆ ನೋಡಿರಲಿಲ್ಲ. ಲಾಟೀನು ದೀಪದ ಬೆಳಕು ಮುಂದಿನ ಸಾಲಿನಲ್ಲಿ ಕುಳಿತ ಮಕ್ಕಳ ಮುಖದ ಮೇಲೆ ಬಿದ್ದಿತ್ತು. ಆ ಬೆಳಕಿನಲ್ಲಿ ಅವುಗಳ ನಿರುತ್ಸಾಹ ತುಂಬಿದ ಕಣ್ಣುಗಳು ಕಂಡವು. ವಯಸ್ಸಿಗೆ ಮೀರಿದ ಪ್ರಬುದ್ಧತೆ ಆ ಮಕ್ಕಳಲ್ಲಿತ್ತು. ಯೂನಿಯನ್ ಬೇಡಿಕೆಗಳ ಪಟ್ಟಿಯಿದ್ದ ಕೆಂಪು ಬ್ಯಾನರ್, ದೀಪದ ಬೆಳಕಿನಲ್ಲಿ ಎದ್ದು ಕಾಣುತ್ತಿತ್ತು. ಅಲ್ಲಿ ಮುಖ್ಯವಾಗಿ ನಾಲ್ಕು ಬೇಡಿಕೆಗಳಿದ್ದವು. 1. ವಾರಕ್ಕೊಂದು ದಿನ ರಜೆ. 2. ಕನಿಷ್ಟ ಕೂಲಿಯನ್ನು ಹೆಚ್ಚಿಸುವುದು 3. ಓವರ್ ಟೈಂ ಕೆಲಸಕ್ಕೆ ತಕ್ಕ ಹೆಚ್ಚುವರಿ ಹಣ ಸಂದಾಯ 4. ಸರ್ಕಾರದ ಜೀವನ ವೆಚ್ಚ ಸೂಚಿಗೆ ಅನುಗಣವಾಗಿ ತುಟ್ಟಿಭತ್ಯೆ ಕೊಡುವುದು. ಇವು ತಕ್ಷಣದ ಬೇಡಿಕೆಗಳು. ಪೂರೈಸುವ ಸಾಧ್ಯತೆ ಕಡಿಮೆಯಿದ್ದ ಇನ್ನಿತರ ಬೇಡಿಕೆಗಳೆಂದರೆ ಕಾರ್ಖಾನೆಯಿಂದ ಪರಿಹಾರಧನ, ರಬ್ಬರ್ ಗ್ಲೋವ್ಸ್, ಏಪ್ರನ್ ಇತ್ಯಾದಿ. ಇನ್ನೂ ಕೆಲವು ದೂರದ ಆಶೋತ್ತರಗಳ ಬಗ್ಗೆಯೂ ಚರ್ಚಿಸಲಾಯಿತು. ಖಾಯಿಲೆಗೆ ವಿಮೆ, ಉದ್ಯೋಗ ಭದ್ರತೆ ಇತ್ಯಾದಿ. ಯೂನಿಯನ್ನಿನ ಮುಖಂಡ ದೊರೈರಾಜ್.

ದೊರೈರಾಜ್ ನನ್ನ ಬಳಿ ಬಂದು 'ಜನ ಅಮೆರಿಕನ್ ಮಹಿಳೆಯ ಭಾಷಣ ಕೇಳಬೇಕೆಂದು ಬಯಸುತ್ತಿದ್ದಾರೆ. ಮಾತಾಡಿ. ನಾನು ಅನುವಾದ ಮಾಡುತ್ತೇನೆ" ಎಂದು ವಿನಂತಿಸಿಕೊಳ್ಳುವ ದನಿಯಲ್ಲಿ ಕೇಳಿದ. ಅಯ್ಯಂಗಾರ್ ಕೂಡಾ "ಹೌದು, ಮಾತಾಡಿ ಬಿಳಿಯ ಮಹಿಳೆ ತಮ್ಮ ಬಗ್ಗೆ ಏನು ಹೇಳುತ್ತಾರೆ ಎಂದು ಅವರು ಕೇಳಬೇಕಂತೆ" ಎಂದರು. ಇಷ್ಟೊಂದು ಭಾರವಾದ ಬದುಕು ನಡೆಸಿರುವ, ಮಾನವ ಜೀವಿಗಳ ಮಟ್ಟ ತಲುಪುವುದಕ್ಕೇ ಬಹುದೊಡ್ಡ ಅಡಚಣೆಯನ್ನು ನಿವಾರಿಸಿಕೊಳ್ಳಬೇಕಾಗಿರುವ ಈ ನತದೃಷ್ಟ ಜನರ ಮುಂದೆ ನಾನು ಏನು ಮಾತನಾಡುವುದು? ಈ ಅಸ್ಪೃಶ್ಯರ ಮುಂದೆ ಮಾತಾಡಲು ಲ್ಯಾಂಪ್ ಬೆಳಕಿನಲ್ಲಿ ನಿಂತಾಗ ನನ್ನ ಬದುಕಿನಲ್ಲಿ ಯಾವ ಜನರ ಗುಂಪಿನ ನಡುವೆಯೂ ಇಂತಹ ಅನರ್ಹತೆಯ ಸಂಕೋಚ ನನ್ನನ್ನು ಕಾಡಿರಲಿಲ್ಲ ಅನ್ನಿಸಿತು.

ದೊರೈರಾಜ್ ನನ್ನ ಮಾತನ್ನು ಅನುವಾದಿಸಿ ಹೇಳುತ್ತಿದ್ದಂತೆ ಜನ ಹರ್ಷದಿಂದ ಕೂಗಿದರು. ತಮಿಳು ನುಡಿಗಟ್ಟಿನಲ್ಲಿ ಆ ಮಾತು ಇನ್ನಷ್ಟು ಪರಿಣಾಮಕಾರಿಯಾಗಿ ಮೂಡಿರಬೇಕು. ಜನ ಸಂತೋಷದಿಂದ ಚಪ್ಪಾಳೆ ತಟ್ಟಿದರು. ಮಾತು ಮುಗಿಸಿದ ನಂತರ ನಾನು ಅಯ್ಯಂಗಾರ್ ಬಳಿ, "ಶಿಕ್ಷಣದ ಅಗತ್ಯತೆ ಬಗ್ಗೆ ನಾನು ಹೇಳಿದ್ದು ತುಂಬ ಅಸಂಬದ್ಧವಾಯಿತೇನೋ ಅನ್ನಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿರುವ ಅವರಿಗೆ ಅದು ಅರ್ಥವಾಗುತ್ತದೆಯೇ". ಎಂದರೆ "ಇಲ್ಲ ನೀವು ಸರಿಯಾಗೇ ಹೇಳಿದ್ದೀರಿ. ಮಕ್ಕಳ ತಂದೆತಾಯಿಗಳಿಗೆ ಅದು ಅರ್ಥವಾಗುತ್ತದೆ. ತಮ್ಮ ಮಕ್ಕಳಿಗೆ ವಿದ್ಯಭ್ಯಾಸ ಕೊಡಿಸಬೇಕು ಎಂದು ಅವರಿಗೆಲ್ಲ ತುಂಬ ಹಂಬಲವಿದೆ" ಎಂದು ಅಯ್ಯಂಗಾರ್ ಹೇಳಿದರು.

ನಾನೂ ಅಯ್ಯಂಗಾರ್ ನಕ್ಷತ್ರಗಳು ಮಿನುಗುತ್ತಿದ್ದ ವಿಶಾಲವಾದ ಆಕಾಶದ ಕೆಳಗೆ ನಡೆಯುತ್ತ ಹೋದೆವು. ಆ ಮಕ್ಕಳೂ ಕತ್ತಲಲ್ಲಿ ನಡೆದುಕೊಂಡು ಹೋದರು. ನಾಯಿಯ ಗೂಡುಗಳಿಗಿಂತಲೂ ಚಿಕ್ಕದಾದ ಗಾಳಿಯಾಡದ ತಮ್ಮ ಮುರುಕು ಜೋಪಡಿಗಳಿಗೆ. ಅದೇ ಅವರ ಮನೆ. ಅಲ್ಲಿ ನೆಲದ ಮೇಲೆ ಕೆಲವೇ ಗಂಟೆಗಳ ನಿದ್ದೆ, ಬೆಳಿಗ್ಗೆ ಪುನಃ ಸುಣ್ಣದ ಗಣಿಗೆ ಇಳಿಯುವವರೆಗೆ.

ಬಂಡವಾಳಶಾಹಿ

ಬಡವರ ನೆತ್ತರನು
ಹೀರುವ ತಿಗಣೆಗಳು
ಶೋಷಿತ ವರ್ಗವನು
ಪೀಡಿಸುವ ಪಿಪಾಸುಗಳು
ಒಗ್ಗಟ್ಟಿನ ದನಿಯನ್ನು
ದಮನಿಸುವ ಬೂರ್ಜ್ವಾಗಳು
ದುಡಿಯುವ ಜನರ
ಮಾಂಸಖಂಡಗಳನ್ನು
ಕಿತ್ತು ತಿನ್ನುವ ರಣಹದ್ದುಗಳು

ಹೆಚ್.ಅಶೋಕ್ ದೇವಾಡಿಗ
ಹಟ್ಟಿಯಂಗಡಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH